
ಎಪ್ರಿಲ್ 2021

₹ 15/-

# ಯುಗರಶ್ಮಿ

ತ್ರೈಮಾಸಿಕ





- ಭಾರತದ ವಿಭಜನೆ
- ಧರ್ಮದಲ್ಲಿ ಬಲಾತ್ಕಾರವಿಲ್ಲ
- ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಭವಿಷ್ಯವಾಣಿ
- ಇಸ್ಲಾಮಿನ ಸತ್ಯಸಾಕ್ಷ್ಯ
- ನೀನು ಮಾಡು – ಮಾಡಬೇಡ

"ಎಲ್ಲೈ ವಿಶ್ವಾಸಿಗಳೇ, ನಿಮ್ಮ ಪೂರ್ವಜರಿಗೆ ವಿಧಿಸಲಾದಂತೆ ನಿಮಗೆ ಸಹ ಉಪವಾಸ ವ್ರತವನ್ನು ವಿಧಿಸಲಾಗಿದೆ – ನೀವು (ನೈತಿಕ ಮತ್ತು ಆಧ್ಯಾತ್ಮಿಕ ನ್ಯೂನತೆಗಳಿಂದ ಸುರಕ್ಷಿತರಾಗುವಂತೆ) ದೋಷಬಾಧೆಯ ಬಗ್ಗೆ ಜಾಗರೂಕರಾಗಲಿಕ್ಕೋಸ್ಕರ."

– ಪವಿತ್ರ ಖುರ್‌ಆನ್ (2:184)

ವಿಷಯ ಸೂಚಿಕೆ — ಪುಟ


- ಉಪವಾಸದ ಉದ್ದೇಶ ಮತ್ತು ಉಪವಾಸಿಗನ ಕರ್ತವ್ಯ 1
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 2
- ಭಾರತದ ವಿಭಜನೆ 3
- ಧರ್ಮದಲ್ಲಿ ಬಲಾತ್ಕಾರವಿಲ್ಲ 11
- ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಭವಿಷ್ಯವಾಣಿ 18
- ಇಸ್ಲಾಮಿನ ಸತ್ಯಸಾಕ್ಷ್ಯ – 3 28
- ನೀನು ಮಾಡು – ಮಾಡಬೇಡ 32
- ಪೋಪ್ ಫ್ರಾನ್ಸಿಸ್‌ರಿಗೆ ಖಲೀಫರ ಪತ್ರ 35
- ಸಂಯುಕ್ತ ರಾಷ್ಟ್ರ ಸಂಘ (UNO) ಸೆಕ್ರೆಟರಿ ಜನರಲ್‌ಗೆ ಖಲೀಫರ ಪತ್ರ 37
- ಪವಿತ್ರ ಖುರ್‌ಆನ್ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪತ್ರಿಕಾ ಪ್ರಕಟಣೆ 39
- ನಿಧನ ವಾರ್ತೆಗಳು : • ಮೌಲಾನಾ ಮುಹಮ್ಮದ್ ಉಮರ್ ಸಾಹಿಬ್ • ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್ 40
- ಓದಿದ್ದು 41
  - ಹಳೆಯ "ಸೂಪರ್ ಅರ್ಥ್ ಪತ್ತೆ • ಕೊಕೇನ್ ಸಾಗಣೆ: ಬಿಜೆಪಿ ನಾಯಕಿ ಸೆರೆ • ಟ್ವಿಟರ್‌ನಲ್ಲಿ 'ರಿಪ್ಡ್ ಜೀನ್ಸ್' ಹವಾ
  - ಕಾಸರಗೋಡಿನ ಹುಡುಗಿಗೆ 13 ಚಿನ್ನ • ಅಮೆರಿಕ ಸೇನೆಗೆ ಮಹಿಳಾ ಮುಸ್ಲಿಂ ಆಧ್ಯಾತ್ಮ ಗುರು
  - ಮುಟ್ಟಾದ ಮಹಿಳೆ ಮಾಡಿದ ಆಹಾರ ತಿಂದ್ರೆ ಪಶುಜನ್ಮ ಪ್ರಾಪ್ತಿ ! • ಕುರಾನ್ ಕುರಿತ ಅರ್ಜಿ ಸುಪ್ರೀಂನಿಂದ ವಜಾ
  - ನೀವು ಹೇಳುವ ಹಿಂದುವಿನ ಯಾವ ಲಕ್ಷಣಗಳೂ ನನ್ನಲ್ಲಿಲ್ಲ
  - ಎಂ.ಎಸ್. ಗೋಲ್ವಲ್‌ಕರ್ ಉವಾಚ
- ಆರೋಗ್ಯ : ಕೊಲೆಸ್ಟರಾಲ್ ಎಂದರೇನು? 43
- ಕವನ: ಪ್ರಾರ್ಥನೆ 44
- ಪ್ರಿನ್ಸ್ ಫಿಲಿಪ್ ನಿಧನದ ಬಗ್ಗೆ ಖಲೀಫರ ಹೇಳಿಕೆ 44


ಯುಗರಶ್ಮಿ


"ಯುಗರಶ್ಮಿಗೆ" ಚಂದಾದಾರರಾಗಿರಿ

ವಾರ್ಷಿಕ ಚಂದಾ: ರೂ. 60/– ಅಂಚೆ ಮೂಲಕ : ರೂ. 70/–

ಸಂಪರ್ಕಿಸಿರಿ : 99 00 410 789


ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

ಜನಾಬ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು – ರೂ. 1000/–

ಮುಖಪುಟ ಚಿತ್ರ : ಅಹ್ಮದಿಯಾ ಮಸ್ಜಿದ್: ಬೈತುಸ್ಸಮೀ, ಹೂಸ್ಟನ್, ಯು.ಎಸ್.ಎ.


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–

ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575 001.

ಸಂಪರ್ಕಿಸಿರಿ : 9900410789

بسم الله الرحمن الرحيم
نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಎಪ್ರಿಲ್ 2021

| ಆರಂಭ : 1975 | ಸಂಪುಟ : 37 | ಶಹಾದತ್ : 1400 ಹಿಜರೀ ಶಮ್ಸೀ | ಸಂಚಿಕೆ : 3–4 |
|---|---|---|---|

## ಉಪವಾಸದ ಉದ್ದೇಶ ಮತ್ತು ಉಪವಾಸಿಗನ ಕರ್ತವ್ಯ

"ಇಸ್ಲಾಮಿನ ಕರ್ಮಾನುಷ್ಠಾನಗಳಲ್ಲಿ ಮೂರನೆಯದು ಉಪವಾಸವಾಗಿದೆ. ಉಪವಾಸದ ಯಥಾರ್ಥತೆಯ ಬಗ್ಗೆ ಜನರು ಅಜ್ಞರು. ವಾಸ್ತವವೇನೆಂದರೆ, ಹೋಗಿ ನೋಡಿಲ್ಲದ ದೇಶದ ಕುರಿತು ಮತ್ತು ಅರಿವಿಲ್ಲದ ಲೋಕದ ಬಗ್ಗೆ ಮನುಷ್ಯನಿಗೆ ಏನು ಹೇಳಲು ಸಾಧ್ಯ? ಮನುಷ್ಯನು ಹಸಿದು, ದಾಹಿಸಿ ಇರುವುದು ಮಾತ್ರವಲ್ಲ ಉಪವಾಸ, ಅದಕ್ಕೊಂದು ತತ್ವವಿದೆ; ಅದಕ್ಕೊಂದು ಪ್ರಭಾವವಿದೆ. ಅದು ಅನುಭವದಿಂದ ತಿಳಿಯಲು ಸಾಧ್ಯ. ಆಹಾರವನ್ನು ಕಡಿಮೆಗೊಳಿಸುವುದಕ್ಕೆ ಅನುಗುಣವಾಗಿ ಆತ್ಮ ಪರಿಶುದ್ಧವಾಗುತ್ತದೆಂಬುದು ಮನುಷ್ಯ ಪ್ರಕೃತಿಯಲ್ಲಿರುವುದಾಗಿದೆ. ದರ್ಶನ ಶಕ್ತಿ ವರ್ಧಿಸುತ್ತದೆ. ಭೌತಿಕಾಹಾರವನ್ನು ಕಡಿಮೆಮಾಡಿ ಆಧ್ಯಾತ್ಮಿಕಾಹಾರವನ್ನು ಹೆಚ್ಚಿಸಬೇಕು ಎಂಬುದನ್ನು ಅಲ್ಲಾಹನು ಈ ಮೂಲಕ ಉದ್ದೇಶಿಸುತ್ತಾನೆ. ಹಸಿವೆಯನ್ನು ಮಾತ್ರವಲ್ಲ ಅವನಿಂದ ಪ್ರತೀಕ್ಷಿಸುವುದೆಂಬ ವಿಚಾರ ಉಪವಾಸಿಗನ ದೃಷ್ಟಿಯಲ್ಲಿರಬೇಕು. ಅಷ್ಟೇ ಅಲ್ಲ, ಏಕಾಂತವಾಸ ಮತ್ತು ಭೌತಿಕತೆಯಿಂದ ಅಗಲಿಕೆ ಲಭಿಸಲಿಕ್ಕಾಗಿ ದೇವಸ್ಮರಣೆಯಲ್ಲಿ ಹೆಚ್ಚು ಹೆಚ್ಚು ಲೀನವಾಗಬೇಕು. ಕೇವಲ ಶರೀರಕ್ಕೆ ಪೋಷಣೆ ನೀಡುವ ಆಹಾರವನ್ನು ಬಿಟ್ಟು ಆತ್ಮದ ತೃಪ್ತಿಗೂ ಸಂಪುಷ್ಟಿಗೂ ಉಪಯುಕ್ತವಾದ ಆಹಾರ ಸ್ವೀಕರಿಸುವುದು ಉಪವಾಸದ ಉದ್ದೇಶ. ಒಂದು ಕಟ್ಟಳೆ ಮುಗಿಸುವುದೆಂಬ ರೀತಿಯಲ್ಲಿ ಅಲ್ಲದೆ ಯಾರು ಅಲ್ಲಾಹನಿಗೋಸ್ಕರ ಉಪವಾಸ ಮಾಡುತ್ತಾನೋ ಆತನು ಆಧ್ಯಾತ್ಮಿಕಾಹಾರ ಲಭಿಸಲಿಕ್ಕಾಗಿ ಅಲ್ಲಾಹನನ್ನು ಸ್ತುತಿಸುವುದರಲ್ಲೂ ಅವನನ್ನು ಪ್ರಕೀರ್ತಿಸುವುದರಲ್ಲೂ ಅವನ ಏಕತ್ವ ಕೀರ್ತನೆಯಲ್ಲೂ ಮಗ್ನನಾಗಬೇಕಾಗಿದೆ."

**(ಮಲ್‌ಫೂಝಾತ್ – ಸಂಪುಟ 9 ಪುಟ 123, ಮುದ್ರಣ 1984)**

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸ್ಥಾಪಕರು

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

♦ ಅಲ್ಲಾಹನು ಹೇಳಿದ್ದಾನೆ: ಉಪವಾಸ ಹೊರತು ಮನುಷ್ಯನ ಇತರೆಲ್ಲ ಕರ್ಮಗಳು ಅವನಿಗೋಸ್ಕರವಾಗಿದೆ. ಉಪವಾಸ ನನಗೆ. ನಾನು ಅದಕ್ಕೆ ಪ್ರತಿಫಲ ನೀಡುವೆನು. ಕೆಡುಕನ್ನು ತಡೆಯುವ ಒಂದು ಗುರಾಣಿಯಾಗಿದೆ ಉಪವಾಸ. ಉಪವಾಸಿಗನು ತಪ್ಪು ಮಾಡಬಾರದು; ಜಗಳ ಮಾಡಬಾರದು. ಯಾರಾದರೂ ಅವನನ್ನು ಬೈಯ್ದರೆ ಅಥವಾ ಅವನೊಡನೆ ಜಗಳಾಡಲು ಬಂದರೆ ನಾನು ಉಪವಾಸಿಗ ಎಂದು ಅವನು (ಎರಡು ಸಲ) ಹೇಳಲಿ. (ಬುಖಾರಿ, ಮುಸ್ಲಿಂ)

♦ ಉಪವಾಸಿಗನಿಗೆ ಎರಡು ಆನಂದಗಳಿವೆ. ಒಂದು, ಉಪವಾಸ ಮುಕ್ತಾಯಗೊಳಿಸುವಾಗ. ಇನ್ನೊಂದು, ತನ್ನ ಪ್ರಭುವನ್ನು ಭೇಟಿಯಾಗುವಾಗ. (ಬುಖಾರಿ, ಮುಸ್ಲಿಂ)

♦ ನೀವು ಸಹ್‌ರಿ ಉಣ್ಣಬೇಕು. ನಿಶ್ಚಯವಾಗಿಯೂ ಸಹ್‌ರಿ ಉಣ್ಣುವುದರಲ್ಲಿ ಅನುಗ್ರಹವಿದೆ. (ಬುಖಾರಿ, ಮುಸ್ಲಿಂ)

♦ ಅಲ್ಲಾಹನು ತಿಳಿಸಿದ್ದಾನೆ: ಅಸ್ತಮಾನದ ನಂತರ ಅವಸರದಲ್ಲಿ ಉಪವಾಸವನ್ನು ಮುಕ್ತಾಯಗೊಳಿಸುವವನು ನನ್ನ ದಾಸರ ಪೈಕಿ ನನಗೆ ಅತ್ಯಂತ ಮೆಚ್ಚುಗೆಯವನು. (ತಿರ್ಮಿದೀ)

♦ ಯಾರಾದರೂ ಸುಳ್ಳು ಹೇಳುವುದು ಮತ್ತು ಅದಕ್ಕನುಸಾರವಾಗಿ ವರ್ತಿಸುವುದನ್ನು ಬಿಟ್ಟು ಬಿಡುವುದಿಲ್ಲವಾದರೆ ಅವನು ಆಹಾರ ಪಾನೀಯಗಳನ್ನು ಬಿಟ್ಟು ಬಿಡುವುದರಲ್ಲಿ ಅಲ್ಲಾಹನಿಗೆ ಏನೂ ಆಸಕ್ತಿ ಇಲ್ಲ. (ಬುಖಾರಿ)

================================================================


## Statement about ownership and other particulars about the Newspaper Yugarashmi Quarterly (Form IV see Rule 8)

| | | |
|---|---|---|
| 1. Place of publication | : | Mangalore |
| 2. Period of its publication | : | Quarterly |
| 3. Printer's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 4. Publisher's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore – 575001 |
| 5. Editor's Name | : | Muhammad Yusuf |
| Whether citizen of india | : | Yes |
| Address | : | 10-23-1008/1, 1st Floor, Ansari Road, Bunder, Mangalore - 575001 |
| 6. Name and address of individuals who own the newspaper and partners or shareholders holding more than one percent of the Capital | : | Jamath Ahmadiyya, "Darussalam", Near Railway Level Crossing, Pandeshwar, Mangalore – 575001 |

I, Muhammad Yusuf hereby declare that the particulars given above are true to the best of my knowledge and belief.
Date : 1-4-2021 Sd/- Muhammad Yusuf

# ಭಾರತದ ವಿಭಜನೆ

## ಹಿಂದೂ ಮುಸ್ಲಿಮ್ ಐಕ್ಯಕ್ಕೋಸ್ಕರ ಅಹ್ಮದಿ ಮುಸ್ಲಿಮರು ಹೇಗೆ ಪರಿಶ್ರಮಿಸಿದರು

## ದೇಶಪ್ರೇಮ ಮತ್ತು ಸರಕಾರಕ್ಕೆ ವಿಧೇಯತೆ ಬಗ್ಗೆ ಇಸ್ಲಾಮಿನ ಉಪದೇಶಗಳು

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪರಿಪೂರ್ಣವಾಗಿ ಧಾರ್ಮಿಕ ಮತ್ತು ರಾಜಕೀಯೇತರ ಸಂಘಟನೆಯಾಗಿದ್ದು, ಯಾವಾಗಲೂ ಶಾಂತಿ ಸ್ಥಾಪನೆಗೋಸ್ಕರ ಪರಿಶ್ರಮಿಸುತ್ತಾ ಇದೆ. ಆದರೆ ಅದರ ಚರಿತ್ರೆಯ ಬಗ್ಗೆ ಅಜ್ಞಾತರಾಗಿರುವವರು ಈ ಜಮಾಅತ್ ಸಹ ಭಾರತದ ವಿಭಜನೆಗೆ ಹೊಣೆಯಾಗಿದೆ ಎಂದು ತಪ್ಪಾಗಿ ಭಾವಿಸುತ್ತಾರೆ.

ಭಾರತದ ವಿಭಜನೆ ಎಂಬುದು ವಿವಿಧ ರಾಜಕೀಯ ಮತ್ತು ರಾಜಕೀಯೇತರ ಪಕ್ಷಗಳು ಒಬ್ಬರಿನ್ನೊಬ್ಬರನ್ನು ತಮ್ಮ ಸ್ವಾರ್ಥ ಹಿತಾಸಕ್ತಿಗೋಸ್ಕರ ದೂಷಿಸುವ ಒಂದು ವಿಷಯವಾಗಿ ಪರಿಣಮಿಸಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪರಿಪೂರ್ಣವಾಗಿ ಧಾರ್ಮಿಕ ಮತ್ತು ರಾಜಕೀಯೇತರ ಸಂಘಟನೆಯಾಗಿದ್ದು ಶಾಂತಿ ಮತ್ತು ಭ್ರಾತೃತ್ವವನ್ನು ಪ್ರತಿಪಾದಿಸುವ ಬಗ್ಗೆ ಪ್ರಸಿದ್ಧವಾಗಿರುವ ಈ ಸಂಘಟನೆಯನ್ನು ಸಹ ಈ ದೂಷಣೆಯಿಂದ ಹೊರತುಪಡಿಸಿಲ್ಲ. ಆದರೆ ಚಾರಿತ್ರಿಕ ಸತ್ಯಾಂಶಗಳನ್ನು ನ್ಯಾಯನಿಷ್ಠೆಯಿಂದ ಪರಿಶೀಲಿಸುವುದಾದರೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸಹ ಭಾರತದ ವಿಭಜನೆಗೆ ಹೊಣೆಯಾಗಿದೆ ಎಂಬ ಕಲ್ಪನೆಯು ತಪ್ಪೆಂದು ಸ್ಪಷ್ಟವಾಗಿ ಸಾಬೀತು ಆಗುತ್ತದೆ.



Hadhrat Mirza Ghulam Ahmad Qadiani
The Promised Messiah (I)

ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ತಾನು ಮೃತನಾಗುವ ಕೆಲವು ದಿನಗಳ ಮೊದಲು ಪೈಗಾಮೆ ಸುಲ್‌ಹ್ (ಮೈತ್ರಿ ಸಂದೇಶ) ಎಂಬ ಪುಸ್ತಕ ಬರೆದಿದ್ದರು. ಅವರು ಆ ಪುಸ್ತಕದಲ್ಲಿ ತನ್ನ ಮಾತೃ ದೇಶದ ಬಗ್ಗೆ ತನಗಿರುವ ಪ್ರಾಮಾಣಿಕ ಪ್ರೇಮವನ್ನು ಸ್ಪಷ್ಟಪಡಿಸಿ ಭಾರತ ನಿವಾಸಿಗಳಾದ ಹಿಂದು ಮತ್ತು ಮುಸ್ಲಿಮ್ ಎಂಬ ಎರಡು ಮಹಾನ್ ಸಮುದಾಯಗಳು ಪರಸ್ಪರ ಐಕ್ಯತೆಯಿಂದಿರಲು ಅಪೇಕ್ಷಿಸಿದ್ದರು. ಅಹ್ಮದಿಯಾ ಜಮಾಅತಿನ ದಿವ್ಯ ಸ್ಥಾಪಕರು ಹೀಗೆ ಬರೆದಿದ್ದಾರೆ: "ನನ್ನ ದೇಶಬಾಂಧವರೇ, ಈ ಮೈತ್ರಿ ಸಂದೇಶವೆಂಬ ಚಿಕ್ಕ ಪುಸ್ತಕವನ್ನು ವಿನಯದಿಂದ ನಿಮ್ಮೆಲ್ಲರ ಮುಂದಿಡುತ್ತೇನೆ ಮತ್ತು ಸರ್ವಶಕ್ತನಾದ ದೇವನು ನಿಮ್ಮ ಹೃದಯಕ್ಕೆ ತನ್ನ ಸಂದೇಶವನ್ನು ಕಳುಹಿಸಿ ನನ್ನ ಸಹಾನುಭೂತಿಯ ರಹಸ್ಯವನ್ನು ನಿಮಗೆ ತಿಳಿಯಪಡಿಸಲೆಂದು ನಾನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಈ ಸ್ನೇಹದ ಕಾಣಿಕೆಯನ್ನು ನನ್ನ ಯಾವುದೇ ಸ್ವಾರ್ಥ ಅಥವಾ ಭೌತಿಕ ಉದ್ದೇಶದೊಂದಿಗೆ ನೀವು ಜೋಡಿಸದಂತೆ ದೇವನು ಮಾಡಲಿ. (ಮೈತ್ರಿ ಸಂದೇಶ ಕನ್ನಡ ಭಾಷಾಂತರ ಪುಟ 8).

ಅವರು ಮುಂದೆ ಹೀಗೆ ಬರೆದಿದ್ದಾರೆ:

### ಐಕ್ಯದ ಪ್ರಾಧಾನ್ಯ

ಯಾವುದೇ ರೀತಿಯಿಂದಲೂ ನಿವಾರಿಸಲು ಸಾಧ್ಯವಿಲ್ಲದ ವಿಪತ್ತುಗಳನ್ನೂ ಕಷ್ಟಗಳನ್ನೂ ಐಕ್ಯದಿಂದ ದೂರೀಕರಿಸಲು ಸಾಧ್ಯವೆಂಬುದು ಸ್ಪಷ್ಟ. ಐಕ್ಯದ ವರದಾನಗಳಿಂದ ತನ್ನನ್ನು ಬೇರ್ಪಡಿಸಲು ಯಾವನೇ ಬುದ್ಧಿವಂತನು ಸಿದ್ಧನಾಗಲಾರನು. ಹಿಂದು ಮತ್ತು ಮುಸ್ಲಿಮ್ ಈ ರಾಷ್ಟ್ರದ ಎರಡು ಸಮುದಾಯಗಳಾಗಿವೆ. ಇವುಗಳಲ್ಲಿ ಯಾವುದಾದರೂ ಒಂದು ಸಮುದಾಯವು ಯಾವಾಗಲಾದರೂ ಒಂದಾಗಿ ಇನ್ನೊಂದು ಸಮುದಾಯವನ್ನು ಎಂದರೆ, ಹಿಂದುಗಳು ಒಟ್ಟುಗೂಡಿ ಮುಸ್ಲಿಮರನ್ನೋ ಅಥವಾ ಮುಸ್ಲಿಮರು ಒಟ್ಟು ಸೇರಿ ಹಿಂದುಗಳನ್ನೋ ಈ ರಾಷ್ಟ್ರದಿಂದ ಹೊರದಬ್ಬಲು ಆಲೋಚಿಸುವುದಾದರೆ, ಅದು ಅಸಂಭವ ಹಾಗೂ ಭ್ರಮೆ ಮಾತ್ರವಾಗಿದೆ. ಬದಲಾಗಿ ಈ ಎರಡು ಸಮುದಾಯಗಳನ್ನು ಒಟ್ಟುಗೂಡಿಸುವ ಬಂಧವು ಭೇದಿಸಲಾಗದಷ್ಟು ಶಕ್ತಿಯುತವಾಗಿದೆ. ಇದರಲ್ಲಿ ಒಂದು ಸಮುದಾಯಕ್ಕೆ ಏನಾದರೂ ವಿಪತ್ತು ಸಂಭವಿಸಿದರೆ ಮತ್ತೊಂದು ಸಮುದಾಯಕ್ಕೆ ಸಹ ಅದರ ಬಾಧೆ ತಟ್ಟದಿರಲಿಕ್ಕಿಲ್ಲ. ಒಂದು ಸಮುದಾಯವು ಅಹಂಭಾವದಿಂದ ಮತ್ತೊಂದು ಸಮುದಾಯವನ್ನು ನಿಂದಿಸುವುದಾದರೆ ಅಥವಾ ಅವಹೇಳನ ಮಾಡುವುದಾದರೆ ಆ ಸಮುದಾಯವು ಸಹ ಅದೇ ರೀತಿಯ ನಿಂದನೆಗೂ ಅವಹೇಳನಕ್ಕೂ ಗುರಿಯಾಗುವುದು. ಒಂದು ಸಮುದಾಯವು ಇನ್ನೊಂದು ಸಮುದಾಯದೊಡನೆ ಅನುಕಂಪವನ್ನು ತೋರಿಸದಿದ್ದರೆ ಅವರಿಗೆ ಇವರ ಅನುಕಂಪ ಲಭಿಸಲಾರದು. ಒಂದು ಸಮುದಾಯದ ವ್ಯಕ್ತಿ ಇನ್ನೊಂದು ಸಮುದಾಯಕ್ಕೆ ನಾಶವನ್ನುಂಟು ಮಾಡಲು ನೋಡುವವನಾದರೆ, ತಾನು ಕುಳಿತಿರುವ ಮರದ ಕೊಂಬೆಯನ್ನು ತನ್ನ ಕೈಯಿಂದಲೇ ಕಡಿಯುವವನಂತಾಗುವನು. ದೇವಾನುಗ್ರಹದಿಂದ ನೀವೀಗ ವಿದ್ಯಾಸಂಪನ್ನರಾಗಿದ್ದೀರಿ. ಈ ಸಂದರ್ಭದಲ್ಲಿ ನೀವು ಎಲ್ಲ ವಿಧದ ಹಗೆ, ದ್ವೇಷಗಳನ್ನು ನಿಮ್ಮ ಹೃದಯಗಳಿಂದ ದೂರೀಕರಿಸಿ, ಪರಸ್ಪರ ಮೈತ್ರಿಯಿಂದಲೂ ಪ್ರೀತಿಯಿಂದಲೂ ಮುನ್ನಡೆಯುವುದು ವಿವೇಕಯುತವಾಗಿದೆ. ನಿರ್ದಾಕ್ಷಿಣ್ಯತೆಯನ್ನು ಬಿಟ್ಟು ಅನುಕಂಪಭಾವವನ್ನು ಕೈಗೊಳ್ಳಬೇಕಾದ ಸಮಯವು ಸನ್ನಿಹಿತವಾಗಿದೆ. ಐಹಿಕ ಜೀವನ ಯಾತ್ರೆಯು ಕಠಿಣವಾದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವುದಕ್ಕೆ ತುಲ್ಯವಾಗಿದೆ. ಆದುದರಿಂದ ದುರ್ಗಮ ಪಥದ ಈ ಯಾತ್ರೆಯ ಬಿಸಿಲನ್ನು ತಣಿಸಲಿಕ್ಕೂ ಆಯಾಸದ ಉಪಶಮನಕ್ಕೂ ಮೈತ್ರಿ ಎಂಬ ಶೀತಲ ಜಲ ನಿಮಗೆ ಅತ್ಯಾವಶ್ಯಕವಾಗಿದೆ. ಎರಡು ಪಕ್ಷಗಳಾಗಿರುವ ನಿಮಗೆ ಸಮಾಧಾನವೂ

ಶಾಂತಿಯೂ ಅತ್ಯಾವಶ್ಯಕವಾಗಿರುವ ಕಾಲಘಟ್ಟದಲ್ಲೇ ನಾನು ನಿಮ್ಮನ್ನು ಮೈತ್ರಿಗಾಗಿ ಆಮಂತ್ರಿಸುತ್ತಿದ್ದೇನೆ. (ಮೈತ್ರಿ ಸಂದೇಶ ಕನ್ನಡ ಭಾಷಾಂತರ ಪುಟ 9–10).

ಅಹ್ಮದಿ ಮುಸ್ಲಿಮರು ತಮ್ಮ ಜಮಾಅತಿನ ಸ್ಥಾಪಕರ ಹೆಜ್ಜೆ ಗುರುತುಗಳಲ್ಲಿ ಚಲಿಸಿ ಯಾವಾಗಲೂ ಹಿಂದು–ಮುಸ್ಲಿಮ್ ಐಕ್ಯತೆಯ ಪತಾಕೆಯನ್ನು ಎತ್ತಿಹಿಡಿದು ಪರಸ್ಪರ ಸಂಭವಿಸುವ ಒಡಕುಗಳನ್ನು ಕೊನೆಗೊಳಿಸಲು ಕಾರ್ಯತತ್ಪರಾಗಿರುತ್ತಾರೆ.

ಚರಿತ್ರೆಯನ್ನು ಅಧ್ಯಯನ ಮಾಡುವ ಪ್ರತಿಯೊಬ್ಬ ವ್ಯಕ್ತಿ ಕಂಡುಕೊಳ್ಳುವನು – ಅಹ್ಮದಿ ಮುಸ್ಲಿಮರು ಯಾವಾಗಲೂ ಹಿಂದುಗಳನ್ನೂ ಮುಸ್ಲಿಮರನ್ನೂ ಒಗ್ಗೂಡಿಸಲು ಪರಿಶ್ರಮಿಸುವವರಾಗಿದ್ದಾರೆ. ಹಿಂದು ಮತ್ತು ಮುಸ್ಲಿಮರ ಮಧ್ಯೆ ಯಾವುದಾದರೂ ವಿವಾದ ತಲೆದೋರಿದಾಗ ಅಹ್ಮದಿಯಾ ಜಮಾಅತಿನ ಖಲೀಫರು ಮತ್ತು ಮುಂದಾಳುಗಳು ವಿವಾದವನ್ನು ಪರಿಹರಿಸಲು ಪತ್ರಗಳ ಮೂಲಕ ಮತ್ತು ಸಲಹೆಗಳ ಮೂಲಕ ಹಾಗೂ ಈ ಎರಡು ಸಮುದಾಯಗಳ ನಾಯಕರನ್ನು ಭೇಟಿಯಾಗುವ ಮೂಲಕ ಅವರನ್ನು ಶಾಂತಿ ಸ್ಥಾಪನೆಗೆ ಒತ್ತು ನೀಡಲು ಯಾವಾಗಲೂ ಪರಿಶ್ರಮಿಸುತ್ತಿದ್ದರು.

## ಅವಿಭಜಿತ ಸ್ವತಂತ್ರ ಭಾರತ ಸ್ಥಾಪಿಸುವ ಅಭಿಲಾಷೆ


Hadhrat Mirza Bashir-ud-Din Mahmood Ahmad
Khalifatul Masih II

ಭಾರತ ಸ್ವಾತಂತ್ರ್ಯ ಗಳಿಸುವ ದಿನಗಳು ಸಮೀಪವಾದಾಗ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಂದಿನ ಜಾಗತಿಕ ಸರ್ವೋಚ್ಚ ನಾಯಕರೂ ದ್ವಿತೀಯ ಖಲೀಫರೂ ಆಗಿದ್ದ ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್(ರ) ಸಾಮಾಜಿಕ ಸೌಹಾರ್ದವನ್ನು ಸ್ಥಾಪಿಸುವ ಆವಶ್ಯಕತೆಯನ್ನು ಮನಗಂಡು ವಿಶಿಷ್ಟವಾಗಿ ಹಿಂದುಗಳ ಮತ್ತು ಮುಸ್ಲಿಮರ ಮಧ್ಯೆ ಸೌಹಾರ್ದ ಸ್ಥಾಪನೆಗೆ ಒತ್ತು ನೀಡಿ ಹೀಗೆ ಘೋಷಿಸಿದರು: “ಇಂದಿನ ವಿಷಮ ಪರಿಸ್ಥಿಯಲ್ಲಿ ನಾನು ನನ್ನ ದೇಶದ ನಿವಾಸಿಗಳೊಂದಿಗೆ ಒತ್ತಾಯ ಪೂರ್ವಕವಾಗಿ ಹೇಳಲು ಬಯಸುತ್ತೇನೆ. ಅವರು ತಮ್ಮ ಹೃದಯಗಳನ್ನು ಶತ್ರುತ್ವದಿಂದಲೂ ದ್ವೇಷದಿಂದಲೂ ಮುಕ್ತವನ್ನಾಗಿ ಮಾಡಬೇಕು. ಏಕೆಂದರೆ ಅಂತಹ ಭಾವನೆಗಳು ಸಿಹಿಯಾದುದೆಂದೂ ಸಂತೋಷಕರವೆಂದೂ ಭಾಸವಾಗಬಹುದಾದರೂ ಅವು ಅತ್ಯಂತ ಕಹಿಯಾಗಿವೆ ಮತ್ತು ಅತ್ಯಂತ ಹಾನಿಕಾರಕವಾಗಿವೆ.

“ಘಟನೆಗಳನ್ನು ನೋಡುವಾಗ ಭಾರತ ಸ್ವಾತಂತ್ರ್ಯ ಗಳಿಸುವ ದಿನಗಳು ಆಗಮಿಸಿವೆ ಎಂದು ತೋರುತ್ತದೆ. ದೇವನು ನಮ್ಮ ಹೃದಯಗಳಿಗೆ ಹೊಸ ಸ್ಫೂರ್ತಿಯನ್ನು ಅವತೀರ್ಣಗೊಳಿಸುತ್ತಿದ್ದಾನೆ. ಅಂಧಕಾರಮಯ ಮೋಡಗಳಿಂದ ಪ್ರತೀಕ್ಷೆ ನೀಡುವ ಕಿರಣಗಳು ಪ್ರಕಾಶಿಸುತ್ತಾ ಇವೆ. ಅಂಧಕಾರ ಕವಿಯುವಾಗ ನಿರಾಶೆ ಪಡಬೇಡಿರಿ. ಏಕೆಂದರೆ ಪ್ರಕಾಶ ಹೊರಹೊಮ್ಮುವಾಗ ಹೆಚ್ಚು ಪ್ರಕಾಶಮಾನವಾದ ಬೆಳಕುಗಳು ಬೆಳಗುವುದು ಮತ್ತು ದೈವಿಕ ವಿಧಿ ಪ್ರಕಟವಾಗುವುದು.

“ಆದುದರಿಂದ ನಿಮ್ಮ ಹೃದಯಗಳಲ್ಲಿರುವ ದ್ವೇಷ ದೇವನ ಕಾರುಣ್ಯವನ್ನು ಕ್ರೋಧವನ್ನಾಗಿಯೂ ಅವನ ರಮ್ಯತೆಯನ್ನು ಅವನ ಸಿಟ್ಟನ್ನಾಗಿಯೂ ಪರಿವರ್ತಿಸದಿರಲಿ. ಏಕೆಂದರೆ ಅವನು ಹಟಮಾರಿಯಾದವನನ್ನು ಮತ್ತು ಸತ್ಯದ ವಿರೋಧಿಯಾದವನನ್ನು ಇಷ್ಟಪಡುವುದಿಲ್ಲ..... ದೌರ್ಜನ್ಯ ಬ್ರಿಟಿಷ್ ವ್ಯಕ್ತಿ ಮಾಡಿದರೂ ಭಾರತೀಯನು ಮಾಡಿದರೂ ಅನುಚಿತವೇ ಆಗಿದೆ. ಆದುದರಿಂದ ಪ್ರೀತಿ ಮತ್ತು ಸಹಾನುಭೂತಿಯಿಂದ ಮತ್ತು ಎಲ್ಲ ವಿಧಗಳ ದ್ವೇಷಗಳಿಂದ ಹೃದಯಗಳನ್ನು ಶುದ್ಧೀಕರಿಸಿ ತೀರ್ಮಾನಕ್ಕೆ ಬನ್ನಿರಿ. ಪ್ರೀತಿ ಮತ್ತು ಐಕ್ಯತೆಯ ನವಯುಗಕ್ಕೆ ಒಯ್ಯುವಂತಹ ಸರಕಾರವನ್ನು ಸ್ಥಾಪಿಸಿರಿ. ನೀವು ನೆನಪಿಡಿರಿ, ಲೋಕವು ಒಂದು ಏಕ ಸ್ವರೂಪವಾಗಿದೆ. ವಿವಿಧ ದೇಶಗಳು ಅದರ ಅಂಗಾಂಗಗಳಾಗಿವೆ. ಆದುದರಿಂದ ಶಾಂತಿ ಮತ್ತು ಐಕ್ಯಭರಿತ ಲೋಕದ ಅಸ್ತಿಭಾರದ ಒಂದು ಬಲಿಷ್ಠ ಇಟ್ಟಿಗೆಯನ್ನಾಗಿ ಭಾರತವನ್ನು ಮಾಡಲು ಆವಶ್ಯಕ ಮಾರ್ಗಗಳನ್ನು ಕೈಗೊಳ್ಳಿರಿ.” (ಅನ್‌ವಾರುಲ್ ಉಲೂಮ್ ಸಂಪುಟ 11 ಪುಟ 237–238).

## ಹಿಂದುಗಳು ಮತ್ತು ಮುಸ್ಲಿಮರು ಪರಸ್ಪರ ಐಕ್ಯದಿಂದಿರಬೇಕು

1923 ನವೆಂಬರ್ ದಿನಾಂಕ 14ರಂದು ಲಾಹೋರಿನ ಬ್ರಾಡ್‌ಲೋ ಹಾಲ್‌ನಲ್ಲಿ ಹಿಂದುಗಳೂ ಮುಸ್ಲಿಮರೂ ಭಾಗವಹಿಸಿದ ಒಂದು ಬೃಹತ್ ಸಮಾವೇಶವನ್ನು ಸಂಬೋಧಿಸಿ ದ್ವಿತೀಯ ಖಲೀಫರು ಭಾಷಣ ಮಾಡಿದರು. ಪ್ರಚಲಿತ ಕಾಲದ ಪರಿಸ್ಥಿತಿಗಿರುವ ಏಕಮಾತ್ರ ಪರಿಹಾರ ಹಿಂದುಗಳು ಮತ್ತು ಮುಸ್ಲಿಮರು ಒಗ್ಗೂಡುವುದಾಗಿದೆ ಎಂದು ಅವರು ಹೇಳಿದರು. ಹಝ್‌ರತ್ ಖಲೀಫರು, ಹಿಂದುಗಳೂ ಮುಸ್ಲಿಮರೂ ಜೊತೆಗೂಡಿ ಜೀವಿಸಲು ಆವಶ್ಯಕವಾದ ಮಾರ್ಗದರ್ಶಕ ತತ್ವಗಳನ್ನು ಆ ಸಭೆಯಲ್ಲಿ ಪ್ರತಿಪಾದಿಸಿದರು. ಅಹ್ಮದಿಯರು ಜನರ ಮಧ್ಯೆ ಒಡಕುಂಟುಮಾಡುತ್ತಾರೆ ಎಂಬ ಆಪಾದನೆಯನ್ನು ನಿರಾಕರಿಸುತ್ತಾ ಅವರು ಹೇಳಿದರು:

“ನಾವು ಸಮಾಜದ ಅಸ್ತವ್ಯಸ್ತತೆಗೆ ಕಾರಣವೆಂದು ಕೆಲವರು ಯೋಚಿಸುತ್ತಾರೆ. ಸ್ನೇಹ ಸಂಬಂಧಗಳನ್ನು ತಡೆಯುವವರು ನಾವೆಂದು ಅವರು ಭಾವಿಸುತ್ತಾರೆ. ಆದರೆ ಸತ್ಯವೇನೆಂದರೆ ನಾವು ಒಡಕಿನ ಅತ್ಯಂತ ದೊಡ್ಡ ಶತ್ರುಗಳಾಗಿದ್ದೇವೆ. ಸಂಘರ್ಷವೆಂಬುದು ನಮ್ಮ ಹೃದಯದಿಂದ ಬಹಳ ದೂರವಾಗಿರುವುದಾಗಿದೆ. ಸಂಘರ್ಷವನ್ನುಂಟು ಮಾಡುವ ವರ್ತನೆಗಳನ್ನು ನಾವು ತಿರಸ್ಕರಿಸುತ್ತೇವೆ. ನಮ್ಮ ದೇಶದ ಸಮೃದ್ಧಿಯನ್ನು ವರ್ಧಿಸಲು ಉಪಯುಕ್ತವಾದುದನ್ನು ಮಾಡಲು ನಾವು ಯಾವ ತ್ಯಾಗವನ್ನೂ ಮಾಡಲು ಸದಾ ಸನ್ನದ್ಧರಾಗಿದ್ದೇವೆ.” (ಅನ್ವಾರುಲ್ ಉಲೂಮ್ ಸಂಪುಟ 7 ಪುಟ 297).

## ಧಾರ್ಮಿಕ ನಂಬಿಕೆಗಳ ವ್ಯತ್ಯಾಸ ಉತ್ತಮ ಸಂಬಂಧ ಸ್ಥಾಪಿಸಲು ತಡೆಯಾಗಲಾರದು

ಹಝ್‌ರತ್ ಖಲೀಫರು ತನ್ನ ಭಾಷಣದಲ್ಲಿ ಹೀಗೆ ಸಹ

ಹೇಳಿದರು: ಹಿಂದುಗಳು ಮತ್ತು ಮುಸ್ಲಿಮರ ನಡುವೆ ಇರುವ ಧಾರ್ಮಿಕ ನಂಬಿಕೆಗಳ ಭಿನ್ನತೆ ಈ ಎರಡು ಸಮುದಾಯಗಳ ಮಧ್ಯೆ ಲೌಕಿಕ ಸಂಬಂಧಗಳಿಗೆ ತಡೆಯಾಗಲಾರದು. ಅವರು ಹೀಗೆ ಹೇಳಿದರು: "ಧಾರ್ಮಿಕ ನಂಬಿಕೆಗಳ ಬಗ್ಗೆ ಭಿನ್ನಾಭಿಪ್ರಾಯಗಳು ಲೌಕಿಕವಾದ ಉತ್ತಮ ಸಂಬಂಧ ಸ್ಥಾಪಿಸಲು ತಡೆಯಾಗಲಾರದು...... ಮುಸ್ಲಿಮರು ತಮ್ಮ ಧಾರ್ಮಿಕ ನಂಬಿಕೆಗಳ ಭಿನ್ನತೆಯ ಕಾರಣದಿಂದ ಹಿಂದುಗಳೊಂದಿಗೆ ಲೌಕಿಕ ಸಂಬಂಧಗಳನ್ನು ವಿಚ್ಛೇದಿಸುವುದು ಸರಿಯಾದ ವರ್ತನೆಯಲ್ಲ. ಧಾರ್ಮಿಕ ನಂಬಿಕೆಗಳ ವ್ಯತ್ಯಾಸದ ಕಾರಣದಿಂದ ಸೌಹಾರ್ದದಿಂದ ಅವರೊಂದಿಗೆ ವರ್ತಿಸದಿರುವುದು ಸರಿಯಲ್ಲ. ಧರ್ಮಕ್ಕೆ ಸಂಬಂಧಿಸದ ವಿಷಯಗಳ ಬಗ್ಗೆ ಅನ್ಯ ಧರ್ಮದವರೊಂದಿಗೆ ಐಕ್ಯಮತ್ಯ ಹೊಂದುವುದನ್ನು ಯಾವ ಧರ್ಮವೂ ನಿಷಿದ್ಧಗೊಳಿಸಿಲ್ಲ. ಯಾವ ಧರ್ಮವೂ ಅನ್ಯ ಧರ್ಮದ ವಿರುದ್ಧ ಹೋರಾಡುತ್ತಾ ಇರಬೇಕೆಂದು ಉಪದೇಶಿಸುವುದಿಲ್ಲ. ಮಾನವೀಯ ಮನಸ್ಸಾಕ್ಷಿ ಆ ಅಭಿಪ್ರಾಯವನ್ನು ನಿರಾಕರಿಸುತ್ತದೆ. ಯಾವುದಾದರೂ ಧರ್ಮ ಆ ತತ್ವವನ್ನು ಪ್ರತಿಪಾದಿಸುವುದಾದರೆ ಮನುಷ್ಯನು ಆ ಧರ್ಮವನ್ನು ತಿರಸ್ಕರಿಸುವನು.

"ಆದುದರಿಂದ ಧಾರ್ಮಿಕ ನಂಬಿಕೆಗಳ ವಿಭಿನ್ನತೆ ಲೌಕಿಕ ವ್ಯವಹಾರಗಳಿಗೆ ಅಡ್ಡಿಯಾಗದಿರುವಾಗ ಹಿಂದುಗಳ ಮತ್ತು ಮುಸ್ಲಿಮರ ಮಧ್ಯೆ ಶತ್ರುತ್ವ ಏಕೆ? ಒಂದು ಕಡೆ, ಇಂದಿನ ಪರಿಸ್ಥಿತಿಯು ಅವರೆಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದು ಅಗತ್ಯಪಡಿಸುವಾಗ ಇನ್ನೊಂದು ಕಡೆ, ಅವರು ಸಹೋದರರಂತೆ ಬಾಳಬೇಕೆಂದು ಅವರ ಧರ್ಮಗಳು ಉಪದೇಶಿಸುತ್ತವೆ. ಹೀಗಿರುವಾಗ ಎರಡು ಸಮುದಾಯಗಳ ಮಧ್ಯೆ ಒಗ್ಗಟ್ಟಿನ ಬದಲು ಸಂಘರ್ಷವೇಕೆ? (ಅನುವಾರುಲ್ ಉಲೂಮ್ ಸಂಪುಟ 7 ಪುಟ 360).

ಮೇಲೆ ಉಲ್ಲೇಖಿಸಿದ ಭಾಷಣದಲ್ಲಿ ಹಝ್ರತ್ ಖಲೀಫರು, ಹಿಂದುಗಳು ಮತ್ತು ಮುಸ್ಲಿಮರು ಪರಸ್ಪರ ಹಕ್ಕುಗಳನ್ನು ಸಂರಕ್ಷಿಸಿ ಪರಸ್ಪರ ಗೌರವಾದರ ಭಾವನೆಯೊಂದಿಗೆ ಹೇಗೆ ಭಾರತದಲ್ಲಿ ಜೀವಿಸಬಹುದು ಎಂಬುದರ ಬಗ್ಗೆ ಮಾರ್ಗದರ್ಶನ ನೀಡಿದರು.

## ಪ್ರಥಮ ದುಂಡು ಮೇಜಿನ ಸಮ್ಮೇಳನಕ್ಕೆ ಸಂದೇಶ

ಭಾರತದಲ್ಲಿ ಸ್ವರಾಜ್ಯ ಸ್ಥಾಪಿಸಲು ಭಾರತೀಯರ ಬೇಡಿಕೆಗಳನ್ನು ಪರಿಗಣಿಸಲು ಕೆಲವು ದುಂಡು ಮೇಜಿನ ಸಮ್ಮೇಳನಗಳು ಇಂಗ್ಲೆಂಡಿನಲ್ಲಿ ಜರಗಿಸಲ್ಪಟ್ಟಿದ್ದುವು. ಪ್ರಥಮ ಸಮ್ಮೇಳನ 1930ರಲ್ಲಿ ಜರಗಿತು. ಹಿಂದುಗಳ ಮತ್ತು ಮುಸ್ಲಿಮರ ಅನೇಕ ಧುರೀಣರನ್ನು ಈ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಿಸಲಾಗಿತ್ತು. ಈ ಸಂದರ್ಭದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ದ್ವಿತೀಯ ಖಲೀಫರು "ದಿ ಸೊಲ್ಯೂಶನ್ ಆಫ್ ಕರೆಂಟ್ ಪೊಲಿಟಿಕಲ್ ಇಶ್ಯೂ ಆಫ್ ಇಂಡಿಯಾ" (ಭಾರತದ ಪ್ರಚಲಿತ ರಾಜಕೀಯ ವಿವಾದಾಂಶಕ್ಕೆ ಪರಿಹಾರ) ಎಂಬ ಶೀರ್ಷಿಕೆಯಲ್ಲಿ ಒಂದು ಚಿಕ್ಕ ಪುಸ್ತಕ ಬರೆದು ಅದು ಸಮ್ಮೇಳನದ ಸಮಯದಲ್ಲಿ ಅದರಲ್ಲಿ ಭಾಗವಹಿಸುವ ಸದಸ್ಯರಿಗೆ ಮತ್ತು ಬ್ರಿಟಿಷ್ ಸರಕಾರಕ್ಕೆ ಮಾರ್ಗದರ್ಶನ ದೊರೆಯುವಂತೆ ಮಾಡಲು ಅದನ್ನು ಇಂಗ್ಲೆಂಡಿಗೆ ತಲಪಿಸಿದರು.

ಹಝ್ರತ್ ಖಲೀಫರು ಆ ಪುಸ್ತಕದಲ್ಲಿ ಭಾರತದ ಅಂದಿನ ಸ್ಥಿತಿಯ ಬಗ್ಗೆ ಪಾರಂಗತ ವಿಶ್ಲೇಷಣೆ ನಡೆಸಿ ಅಂದಿನ ರಾಜಕೀಯ ಸಮಸ್ಯೆಗಳಿಗೆ ತೃಪ್ತಿದಾಯಕ ಪರಿಹಾರ ಮಾರ್ಗಗಳನ್ನು ಸೂಚಿಸಿದ್ದರು. ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಮತ್ತು ಸ್ವತಂತ್ರ ಭಾರತದಲ್ಲಿ ಅವರ ಸ್ಥಾನದ ಬಗ್ಗೆ ಗಮನ ಹರಿಸುವುದು ಅತ್ಯಂತ ಮುಖ್ಯ ವಿಷಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದರು. ಹಿಂದು–ಮುಸ್ಲಿಮ್ ಐಕ್ಯತೆ ಬಗ್ಗೆ ಅವರಿಗಿದ್ದ ಅತ್ಯಂತ ಪ್ರಾಮಾಣಿಕ ಅಭಿಲಾಷೆ ಅವರ ಈ ಕೆಳಗಿನ ಮಾತುಗಳಿಂದ ಸ್ಪಷ್ಟವಾಗುತ್ತದೆ:

"ದುಂಡು ಮೇಜಿನ ಸಮ್ಮೇಳನದ ಸದಸ್ಯರಿಗೆ, ಪಾರ್ಲಿಮೆಂಟ್ ಸದಸ್ಯರಿಗೆ, ಭಾರತ ಮತ್ತು ಬ್ರಿಟನಿನ ಎಲ್ಲ ಪತಿನಿಧಿಗಳಿಗೆ ನಾನು ನೆನಪಿಸಿ ಕೊಡಲು ಇಚ್ಛಿಸುತ್ತೇನೆ. ದೇವನು ಅವರ ಮೇಲೆ ಮಹತ್ತಾದ ಹೊಣೆಗಾರಿಕೆಯನ್ನು ಹೊರಿಸಿರುವನು. ಆದುದರಿಂದ ಅವರು ಪೂರ್ವಗ್ರಹಗಳಿಂದ ಮುಕ್ತರಾಗಿ ತಮ್ಮ ಹೊಣೆಗಾರಿಕೆಗಳನ್ನು ನಿಸ್ವಾರ್ಥ ಭಾವನೆಯಿಂದ ಈಡೇರಿಸಬೇಕು. ಅವರು ಹಾಗೆ ಮಾಡುವರಾದರೆ ಅವರ ಹೆಸರುಗಳು ಬಹಳ ಗೌರವಭಾವದಿಂದ ಸ್ಮರಿಸಲ್ಪಡುವುವು. ಅವರ ತೀರ್ಮಾನಗಳಿಂದ ಪ್ರಯೋಜನ ಪಡೆಯುವ ಮುಂದಿನ ಪೀಳಿಗೆಗಳು ಅವರಿಗೋಸ್ಕರ ಪ್ರಾರ್ಥಿಸುವುವು ಮತ್ತು ಅದಕ್ಕಿಂತ ಮಿಗಿಲಾಗಿ ದೇವನ ಅನುಗ್ರಹಗಳಿಗೆ ಅವರು ಪಾತ್ರರಾಗುವರು.

"ಸ್ವಾರ್ಥವು ತಾತ್ಕಾಲಿಕ ವಿಷಯಗಳಿಗೆ ಸಂಬಂಧಿಸಿದರೂ ಹಾನಿಕಾರವಾಗಿದೆ. ಸಾವಿರಾರು ವರ್ಷಗಳ ತನಕ ಮಿಲಿಯಗಟ್ಟಲೆ ಜನರನ್ನು ಬಾಧಿಸುವ ವಿಷಯಗಳಿಗೆ ಸಂಬಂಧಿಸಿ ಸ್ವಾರ್ಥ ಹಿತಾಸಕ್ತಿಗಳು ಮತ್ತು ವೈಯಕ್ತಿಕ ಶತ್ರುತ್ವವು ತೀರ್ಮಾನಗಳನ್ನು ಮಾಡುವುದಾದರೆ ಅದು ಬಹಳ ದೊಡ್ಡ ಅನ್ಯಾಯವಾಗುವುದು. ಆದುದರಿಂದ ದೇವನು ನಿಮ್ಮ ಉದ್ದೇಶಲಕ್ಷ್ಯಗಳನ್ನು ಪರಿಶುದ್ಧವಾಗಿರಿಸಲಿ. ನಿಮ್ಮ ನೈತಿಕ ಭಾವನೆ ಉನ್ನತವೂ ನಿಮ್ಮ ಬುದ್ಧಿಗಳು ತೀಕ್ಷ್ಣವೂ ಆಗುವಂತೆ ಮಾಡಲಿ. ಈ ಸಮ್ಮೇಳನ ಮತ್ತು ಅದರಲ್ಲಿ ಆಗುವ ತೀರ್ಮಾನಗಳು ಭಾರತ ಮತ್ತು ಬ್ರಿಟನ್ ಮಧ್ಯೆ ಶಾಂತಿ ಸ್ಥಾಪಿಸುವಂತಹದು ಹಾಗೂ ಹಿಂದು ಮತ್ತು ಮುಸ್ಲಿಮರ ಐಕ್ಯವನ್ನುಂಟುಮಾಡುವುದೂ ಆಗಲಿ. ಹಾಗೆ ಆದರೆ ನಾವು ಹೇಳಬಲ್ಲೆವು – ನಾವು ನಮ್ಮ ಹೊಣೆಗಾರಿಕೆಗಳನ್ನು ದೇವನಿಗೆ ಸಂಬಂಧಿಸಿಯೂ ಜನರಿಗೆ ಸಂಬಂಧಿಸಿಯೂ ಈಡೇರಿಸಿದೆವು; ಇಂದಿನ ಕಾಲಕ್ಕೆ ಸಂಬಂಧಿಸಿಯೂ ಮುಂದಿನ ಪೀಳಿಗೆಗಳಿಗೆ ಸಂಬಂಧಿಸಿಯೂ. (ಅನ್‌ವಾರುಲ್ ಉಲೂಮ್ ಸಂಪುಟ 11 ಪುಟ 493–494).

ಹಝ್ರತ್ ಖಲೀಫರು ಬರೆದ ಪುಸ್ತಕದ ಬಗ್ಗೆ ಬಹಳ ಉತ್ತಮ ಪ್ರತಿಕ್ರಿಯೆ ದೊರಕಿತು. ಅನೇಕ ಮುಂದಾಳುಗಳು ಕೃತಜ್ಞತೆ ಅರ್ಪಿಸಿದರು ಮತ್ತು ಖಲೀಫರ ಪ್ರಯತ್ನಗಳನ್ನೂ ಅಭಿಪ್ರಾಯಗಳನ್ನೂ ಅನುಮೋದಿಸಿ ಬರೆದರು.

## ಎಲ್ಲ ಸಮುದಾಯಗಳನ್ನು ಶಾಂತಿಯ ಕಡೆಗೆ ಆಮಂತ್ರಿಸಲಾಯಿತು

ದ್ವಿತೀಯ ದುಂಡು ಮೇಜಿನ ಸಮ್ಮೇಳನದಲ್ಲಿ ಇಂಡಿಯನ್ ನೇಶನಲ್ ಕಾಂಗ್ರೆಸ್ ಭಾಗವಹಿಸಿದುದರಿಂದ ಅದರ ಪರಿಣಾಮಗಳ ಬಗ್ಗೆ ಉತ್ತಮ ಪ್ರತೀಕ್ಷೆ ಇತ್ತು. ಸರ್ ಝಫರುಲ್ಲಾ ಖಾನ್(ರ) ಕಾಂಗ್ರೆಸ್

ಮತ್ತು ಮುಸ್ಲಿಮ್ ಲೀಗ್ ಮಧ್ಯೆ ಒಪ್ಪಂದವಾಗಲು ಬಹಳ ಪ್ರಯತ್ನಿಸಿದರೂ ಅವರ ಪ್ರಯತ್ನಗಳು ಫಲಕಾರಿಯಾಗಲಿಲ್ಲ.

ಅನಂತರ ಕ್ರಿಪ್ಸ್ ಮಿಶನ್ (Cripps Mission) ವೈಫಲ್ಯಗೊಂಡಾಗ ಭಾರತ ಮತ್ತು ಬ್ರಿಟನ್ ಮಧ್ಯೆ ವಿರುದ್ಧಾಭಿಪ್ರಾಯಗಳು ತಲೆದೋರಿ ಒಪ್ಪಂದವಾಗುವುದು ಅಸಾಧ್ಯವೆಂಬಂತೆ ಭಾಸವಾಯಿತು. ಆ ಸಂದರ್ಭದಲ್ಲಿ ದ್ವಿತೀಯ ಖಲೀಫರು ದೈವಿಕ ದರ್ಶನಗಳ ಮತ್ತು ಸಂದೇಶವಾಣಿಗಳ ಮೂಲಕ ಮಾರ್ಗದರ್ಶನ ಪಡೆದು ಎರಡು ರಾಷ್ಟ್ರಗಳು ಶಾಂತಿಗೋಸ್ಕರ ಪ್ರಯತ್ನಿಸಬೇಕೆಂದು ಒತ್ತಾಯಿಸಿದರು. ಅವರು ಹೇಳಿದರು: "ಬ್ರಿಟನ್ ತನ್ನ ಸಾಮ್ರಾಜ್ಯದಲ್ಲಿರುವ ದೇಶಗಳೊಂದಿಗೆ ಮತ್ತು ವಿಶಿಷ್ಟವಾಗಿ ಭಾರತದೊಂದಿಗೆ ಶಾಂತಿ ಸ್ಥಾಪಿಸುವ ಸಮಯ ಇದಾಗಿದೆ. ಅದು ಭಾರತದೊಂದಿಗಿರುವ ತನ್ನ ಹಿಂದಿನ ಭಿನ್ನತೆಯನ್ನು ಮರೆತುಬಿಡಬೇಕು ಮತ್ತು ಅದರೊಂದಿಗೆ ರಾಜಿಮಾಡಿಕೊಳ್ಳಬೇಕು. ಆ ಮೂಲಕ ಎರಡು ದೇಶಗಳೂ ಜಾಗತಿಕ ಪ್ರಗತಿ ಮತ್ತು ಶಾಂತಿಯನ್ನು ಬಲಪಡಿಸಬಹುದು.

"ಹೇ ಬ್ರಿಟನ್, ನೀನು ಭಾರತದೊಂದಿಗೆ ಶಾಂತಿ ಸ್ಥಾಪಿಸುವುದು ನಿನಗೆ ಉತ್ತಮವಾಗಿದೆ..... ಅದೇ ರೀತಿ ಭಾರತ ತನ್ನ ಹಿಂದಿನ, ಬ್ರಿಟನಿಗೆ ಸಂಬಂಧಿಸಿದ ವಿವಾದಗಳನ್ನು ತ್ಯಜಿಸಬೇಕೆಂದು ನಾನು ಸೂಚಿಸುತ್ತೇನೆ.

"ನಾನು ಲೋಕಕ್ಕೆ ಶಾಂತಿಯ ಸಂದೇಶ ನೀಡುತ್ತೇನೆ. ನಾನು ಬ್ರಿಟನನ್ನು ಬರಬೇಕೆಂದು ಆಮಂತ್ರಿಸಿ ಭಾರತದೊಂದಿಗೆ ಶಾಂತಿ ಸ್ಥಾಪಿಸಬೇಕೆಂದು ಹೇಳುತ್ತೇನೆ. ನಾನು ಭಾರತದೊಂದಿಗೆ ಅಪೇಕ್ಷಿಸುತ್ತೇನೆ ಬ್ರಿಟನ್‌ಗೆ ಹೋಗಿ ಶಾಂತಿ ಸ್ಥಾಪಿಸಬೇಕೆಂದು. ನಾನು ಭಾರತದ ಪ್ರತಿಯೊಂದು ಸಮುದಾಯದೊಂದಿಗೆ ವಿನಯದಿಂದಲೂ ಗೌರವ ಭಾವನೆಯಿಂದಲೂ ಅಪೇಕ್ಷಿಸುತ್ತೇನೆ ಅವರೆಲ್ಲರೂ ಪರಸ್ಪರ ರಾಜಿ ಮಾಡಿಕೊಳ್ಳಬೇಕೆಂದು. ನಾವು ಲೌಕಿಕ ವ್ಯವಹಾರಗಳಲ್ಲಿ ಪ್ರತಿಯೊಂದು ಸಮುದಾಯದೊಂದಿಗೆ ಶಾಂತಿ ಸ್ಥಾಪಿಸುವೆವು ಎಂದು ಖಾತರಿ ನೀಡುತ್ತೇನೆ. ನಮಗೆ ಯಾರೊಂದಿಗೂ ಶತ್ರುತ್ವವಿಲ್ಲವೆಂದು ಸ್ಪಷ್ಟಪಡಿಸುತ್ತೇನೆ. ನಾವು ಕಾಂಗ್ರೆಸಿನ ಅಥವಾ ಹಿಂದೂ ಮಹಾ ಸಭೆಯ ಶತ್ರುಗಳಲ್ಲ. ನಾವು ಮುಸ್ಲಿಮ್ ಲೀಗ್, ಯೂನಿಯನಿಸ್ಟ್ ಪಾರ್ಟಿ (ಝಮೀನ್‌ದಾರ್ ಲೀಗ್), ಖಾಕ್‌ಸಾರ್ ಚಳುವಳಿಗಳ ಶತ್ರುಗಳಲ್ಲ. ನಮಗೆ ಅಹ್‌ರಾರ್ ವಿರುದ್ಧ ಸಹ ಶತ್ರುತ್ವವಿಲ್ಲ. ನಾವು ಎಲ್ಲರ ಹಿತೈಷಿಗಳಾಗಿದ್ದೇವೆ. ನಮ್ಮ ಧರ್ಮಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವವರನ್ನು ಮಾತ್ರ ನಾವು ವಿರೋಧಿಸುತ್ತೇವೆ. ಹೀಗೆ ಹೊರತು ನಾವು ಯಾರ ವಿರೋಧಿಗಳೂ ಅಲ್ಲ. ನಾವು ಇಚ್ಛಿಸುವುದೇನೆಂದರೆ, ನಮ್ಮನ್ನು ದೇವನಿಗೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸಲು ಮತ್ತು ಅವನ ಸೃಷ್ಟಿಗಳಿಗೆ ಸೇವೆ ಮಾಡಲು ಬಿಟ್ಟುಬಿಡಬೇಕು. (ಅಲ್‌ಫಝ್ಲ್ 17 ಜನವರಿ 1945).

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಯಾವಾಗಲೂ ಶಾಂತಿ ಸ್ಥಾಪನೆಗೆ ಪ್ರಯತ್ನಿಸಿತ್ತೆಂದೂ ಅದು ಎಂದೂ ತದ್ವಿರುದ್ಧವಾಗಿ ಪ್ರಯತ್ನಿಸಿರಲಿಲ್ಲವೆಂದೂ ಮೇಲೆ ಉಲ್ಲೇಖಿಸಿದ ಹಝ್ರತ್ ಖಲೀಫರ ಮಾತುಗಳಿಂದ ಸಾಬೀತಾಗುತ್ತದೆ. ವಿವಾದಗಳು ಚರ್ಚೆ ಮತ್ತು ಮಾತುಕತೆಗಳಿಂದ ಪರಿಹರಿಸಲ್ಪಡುತ್ತವೆ ಎಂಬುದು ಸಾಮಾನ್ಯವಾಗಿ ತಿಳಿದಿರುವ ಅನುಭವವಾಗಿದೆ. ಈ ಪರಿಹಾರ ಮಾರ್ಗವನ್ನು ನಿರ್ಲಕ್ಷಿಸಿದರೆ ಮತ್ತು ಜಗಳ ಮಾಡುವ ಪಕ್ಷಗಳು ಅವುಗಳ ಮೂಲಕ ಶಾಂತಿಯನ್ನು ಸ್ಥಾಪಿಸಲು ವಿಫಲರಾದರೆ ಅದರ ದುಷ್ಪರಿಣಾಮಗಳು ಅನೇಕ ಪೀಳಿಗೆಗಳ ಕಾಲ ಮುಂದುವರಿಯುವುದು ಮತ್ತು ಅವುಗಳನ್ನು ಅನುಭವಿಸುವರು. ದುರದೃಷ್ಟಕರವಾಗಿ ಭಾರತದ ಉಪಭೂಖಂಡದಲ್ಲಿ ಹೀಗೆಯೇ ಸಂಭವಿಸಿದೆ.

1946ರಲ್ಲಿ ಕಾಂಗ್ರೇಸ್ ಮತ್ತು ಮುಸ್ಲಿಮ್ ಲೀಗ್ ಮಧ್ಯೆ ತೀವ್ರವಾಗಿ ವಿವಾದ ತಲೆದೋರಿತು. ಭಾರತದ ಸ್ವಾತಂತ್ರ್ಯ ಸಮೀಪಿಸುತ್ತಿರುವಾಗ ಭಿನ್ನಾಭಿಪ್ರಾಯಗಳನ್ನು ತಕ್ಷಣ ಪರಿಹರಿಸದಿದ್ದರೆ ಅದು ದಶಕಗಳ ಕಾಲದ ದೀರ್ಘ ಸಂಘರ್ಷಕ್ಕೆ ದಾರಿ ತೆರೆಯುತ್ತಿತ್ತು.

## ಭಾರತದ ಜನತೆಯ ಐಕ್ಯಮತ್ಯ ಭಾರತಕ್ಕೂ ಲೋಕಕ್ಕೂ ಹಿತಕರವಾಗುವುದು

ಹಝ್ರತ್ ಖಲೀಫರು ಹಿಂದುಗಳನ್ನೂ ಮುಸ್ಲಿಮರನ್ನೂ ಒಂದುಗೂಡಿಸಲು ತಮ್ಮ ಪ್ರಯತ್ನ ಮುಂದುವರಿಸಿದರು. 1946ರಲ್ಲಿ ಕ್ಯಾಬಿನೆಟ್ ಮಿಶನ್ ದೆಹಲಿಗೆ ಬಂದು ರಾಜಕೀಯ ಸಂಘರ್ಷಗಳನ್ನು ನಿವಾರಿಸಲು ಪ್ರಯತ್ನಿಸಿದಾಗ ಹಝ್ರತ್ ಖಲೀಫರು ಮಿಶನಿನ ಸದಸ್ಯರೊಂದಿಗೆ, ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್‌ನೊಂದಿಗೆ ಅವರ ಹೊಣೆಗಾರಿಕೆಗಳ ಕಡೆಗೆ ಗಮನ ಹರಿಸಿ ವಿವಾದಗಳನ್ನು ನ್ಯಾಯಬದ್ಧವಾಗಿ ಪರಿಹರಿಸಲು ಒತ್ತಾಯಿಸಿದರು. ಅವರು ಮಿಶನ್‌ನೊಂದಿಗೆ ಹೀಗೆ ಹೇಳಿದರು: "ನಾನು ಮಿಶನಿನ ಸದಸ್ಯರೊಂದಿಗೆ ಹೇಳಲು ಬಯಸುತ್ತೇನೆ. ಅವರು ನ್ಯಾಯನಿಷ್ಠರಾಗಿ ವರ್ತಿಸಿದರೆ ಅವರು ಹಿಂದುಗಳ ಮತ್ತು ಮುಸ್ಲಿಮರ ಮಧ್ಯೆ ಶಾಂತಿ ಸ್ಥಾಪಿಸಲು ಖಂಡಿತವಾಗಿ ಯಶಸ್ವಿಯಾಗುವರು..... ಭಾರತದಲ್ಲಿ ಸಂವಾದ ಮತ್ತು ಒಪ್ಪಂದ ಮೂಲಕ ಶಾಂತಿಯು ಸ್ಥಾಪಿತವಾದರೆ ಅದು ಭಾರತಕ್ಕೂ ಲೋಕಕ್ಕೂ ಹಿತಕರವಾಗುವುದು."

ಹಝ್ರತ್ ಖಲೀಫರು ಮುಸ್ಲಿಮರೊಂದಿಗೆ ಹೇಳಿದರು: "ನಾನು ಮುಸ್ಲಿಮ್ ಪ್ರತಿನಿಧಿಗಳೊಂದಿಗೆ ಹೇಳಲು ಬಯಸುತ್ತೇನೆ – ಭಾರತ ಹಿಂದುಗಳಿಗೆ ಸೇರಿದ ಹಾಗೆ ನಮಗೂ ಸೇರಿದೆ. ಕೆಲವು ಅಕ್ರಮಿಗಳ ಕೃತ್ಯಗಳು ನಮ್ಮ ದೇಶವನ್ನು ಬಲಹೀನಗೊಳಿಸುವಂತೆ ವರ್ತಿಸಲು ನಮ್ಮನ್ನು ಪ್ರಚೋದಿಸಬಾರದು. ಈ ಮಹಾನ್ ದೇಶವನ್ನು ಸ್ಥಾಪಿಸಲು ಮುಸ್ಲಿಮರಾದ ನಾವು ಪ್ರಮುಖ ಪಾತ್ರ ವಹಿಸಿದ್ದೇವೆ..... ನಾವು ಎಂಟುನೂರು ವರ್ಷಗಳ ಕಾಲ ಈ ದೇಶದ ಪ್ರಗತಿಗೋಸ್ಕರ ಪರಿಶ್ರಮಿಸಿದ್ದೇವೆ. ಈ ದೇಶಕ್ಕಾಗಿ ಪ್ರಾಣವನ್ನು ಅರ್ಪಿಸಿದ ದೇಶಭಕ್ತರ ಗೋರಿಗಳು ದೇಶದಾದ್ಯಂತ ಪೇಶಾವರದಿಂದ ಮಣಿಪುರ ತನಕ ಮತ್ತು ಹಿಮಾಲಯದಿಂದ ಮದರಾಸು ತನಕ ಕಾಣಬಹುದಾಗಿದೆ. ಹಾಗೆಯೇ ಇಸ್ಲಾಮಿನ ಸ್ಮಾರಕಗಳನ್ನು ಎಲ್ಲ ಪ್ರದೇಶಗಳಲ್ಲೂ ಕಾಣಬಹುದಾಗಿದೆ. ಏನು ನಾವು ಅವುಗಳನ್ನೆಲ್ಲ ಬಿಟ್ಟುಬಿಡಬೇಕೆ? ಭಾರತ ಹಿಂದುಗಳದ್ದು ಮಾತ್ರ ಎಂದು ನಾವು ಈಗಲೂ ಚಿಂತಿಸುತ್ತಿದ್ದೇವೆಯೇ? ಹಾಗೆ ಅಲ್ಲ, ಭಾರತ ಹಿಂದುಗಳಿಗೆ ಸೇರಿದ ಹಾಗೆ ನಮಗೂ ಸೇರಿದೆ."

ಹಝ್ರತ್ ಖಲೀಫರು ಹೇಳಿದರು: "ನಾವು ದೀರ್ಘ ಕಾಲದಿಂದ

ಜೀವಿಸುತ್ತಿದ್ದ ಹಾಗೆಯೇ ಮುಂದೆಯೂ ಒಪ್ಪಂದ ಮಾಡಿಕೊಂಡು ಜೀವಿತವನ್ನು ಮುಂದುವರಿಸಬೇಕೆಂದು ನಾನು ಇಚ್ಛಿಸುತ್ತೇನೆ..... ಆದುದರಿಂದ ಈ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಬೇಕೆಂದು ಮತ್ತು ಬಲಾತ್ಕಾರದಿಂದ ಪರಿಹರಿಸಲು ಪ್ರಯತ್ನಿಸಬಾರದೆಂದು ನಾನು ಸಲಹೆ ನೀಡುತ್ತೇನೆ. ನಾನು ಹಿಂದುಗಳ ಬಗ್ಗೆ ಪ್ರಾಮಾಣಿಕವಾಗಿ ಉತ್ತಮ ಭಾವನೆಗಳನ್ನು ಹೊಂದಿದ್ದೇನೆಂದು ಖಾತರಿಪಡಿಸುತ್ತೇನೆ. ಹಿಂದುಗಳೂ ಮುಸ್ಲಿಮರೂ ಐಕ್ಯದಿಂದಿರಬೇಕೆಂದೂ ಸವತಿಯ ಮಕ್ಕಳ ಹಾಗೆ ಇರುವವರು ಈ ದೇಶದಲ್ಲಿ ನೈಜ ಸಹೋದರರಾಗಿ ಜೀವಿಸಬೇಕೆಂದೂ ನಾನು ಇಚ್ಛಿಸುತ್ತೇನೆ..... ಭಾರತದ ಐಕ್ಯತೆಯನ್ನು ಸಂರಕ್ಷಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ."

ಹಝ್ರತ್ ಖಲೀಫರು ಹಿಂದುಗಳೊಂದಿಗೆ ಹೇಳಿದರು: "ನಾನು ಹಿಂದುಗಳೊಂದಿಗೆ ಮತ್ತು ವಿಶಿಷ್ಟವಾಗಿ ಕಾಂಗ್ರೆಸ್‌ನವರೊಂದಿಗೆ ಹೇಳಲು ಬಯಸುತ್ತೇನೆ – ನಮ್ಮ ತೀರ್ಮಾನಗಳು ಸಂಪೂರ್ಣವಾಗಿ ನೈತಿಕ ಅಸ್ತಿಭಾರವನ್ನು ಹೊಂದಿರಬೇಕು..... ಇಂದಿನ ವಿಷಮ ಪರಿಸ್ಥಿತಿಯಲ್ಲಿ ನೈತಿಕ ಅಸ್ತಿಭಾರದ ಮೇಲೆ ತೀರ್ಮಾನಗಳನ್ನು ಕೈಗೊಳ್ಳಿರಿ...... ನಾವು ಸ್ವಾತಂತ್ರ್ಯ ಹೇಗೆ ಗಳಿಸಬಹುದು ಎಂಬುದರ ಬಗ್ಗೆ ಮತ್ತು ಜನರು ಹೇಗೆ ಸುಖದಿಂದಿರಬಹುದು ಎಂಬುದರ ಬಗ್ಗೆ ಚಿಂತಿಸಬೇಕಾದ ಕಾಲ ಇದಾಗಿದೆ. ಹಾಗೆ ಮಾಡದಿದ್ದರೆ ನಮಗೆ ದೊರಕುವ ಸ್ವಾತಂತ್ರ್ಯ ಕೇವಲ ಬಂದೀಖಾನೆಗಳ ಬದಲಾವಣೆಗೆ ಸೀಮಿತವಾಗಿರುವುದು." (ತಾರೀಖೆ ಅಹ್ಮದಿಯ್ಯತ್ ಸಂಪುಟ 9 ಪುಟ 306–311).

## ಹಿಂದು – ಮುಸ್ಲಿಮ್ ಐಕ್ಯಕ್ಕೋಸ್ಕರ ಪ್ರಯತ್ನಗಳು

ಹಝ್ರತ್ ಖಲೀಫರ ಪ್ರಯತ್ನಗಳು ಕೇವಲ ಪತ್ರ ಬರಹಗಳಿಗೆ ಮತ್ತು ಸಂದೇಶ ರವಾನೆಗೆ ಸೀಮಿತವಾಗಿರಲಿಲ್ಲ. ಅವರು ಭಾರತದಲ್ಲಿ ಶಾಂತಿ ಸ್ಥಾಪಿಸಲು ಎಲ್ಲ ರೀತಿಗಳಲ್ಲೂ ಪ್ರಯತ್ನಿಸಿದರು. 1946 ಸೆಪ್ಟಂಬರ್‌ನಲ್ಲಿ ಹಝ್ರತ್ ಖಲೀಫರು ದೆಹಲಿಗೆ ಹೋದರು. ದೆಹಲಿ ಆಗ ರಾಜಕೀಯ ಚಟುವಟಿಕೆಗಳ ಕೇಂದ್ರವಾಗಿತ್ತು. ಅವರು ಮೌಲಾನ ಅಬುಲ್ ಕಲಾಮ್ ಆಝಾದ್, ಪಂಡಿತ್ ಜವಾಹರಲಾಲ್ ನೆಹರು, ಮಹಾತ್ಮಾಗಾಂಧಿ ಮತ್ತು ಇತರ ಅನೇಕ ನಾಯಕರನ್ನು ಭೇಟಿಯಾದರು. ಅನೇಕರಿಗೆ ಪತ್ರಗಳನ್ನು ಕಳುಹಿಸಿದರು.

ದೆಹಲಿಯಲ್ಲಿ ವಿವಿಧ ರಾಜಕೀಯ ನಾಯಕರೊಂದಿಗೆ ಭೇಟಿಯಾದ ಸಂದರ್ಭದಲ್ಲಿ ಹಝ್ರತ್ ಖಲೀಫರು ಹೇಳಿದರು: ಅವರ ಪರಸ್ಪರ ವಿರಸ ಉತ್ತಮವಲ್ಲ. ಕಾಂಗ್ರೆಸ್ ಕೆಲವು ವಿಷಯಗಳಿಗೆ ಸಂಬಂಧಿಸಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಅದೇ ರೀತಿ ಮುಸ್ಲಿಮ್ ಲೀಗ್ ಸಹ ಕೆಲವು ವಿಷಯಗಳಿಗೆ ಸಂಬಂಧಿಸಿ ಹೊಂದಾಣಿಕೆ ಮಾಡಿಕೊಳ್ಳಬೇಕು. ಹಾಗೆ ಮಾಡದಿದ್ದರೆ ಪರಸ್ಪರ ವಿರಸವು ಅಪಾಯಕಾರಿ ಸಂಘರ್ಷಕ್ಕೆ ಹೇತುವಾಗುವುದು. ಹಝ್ರತ್ ಖಲೀಫರು ಹೇಳಿದರು: "ನೀವು ಪರಸ್ಪರ ಹೋರಾಡುವಾಗ ಚಿಕ್ಕಪಟ್ಟಣಗಳಲ್ಲೂ ಗ್ರಾಮಗಳಲ್ಲೂ ವಾಸಿಸುವ ಸಾವಿರಗಟ್ಟಲೆ ಜನರ ಜೀವಿತವು ಬಾಧಿತವಾಗುತ್ತವೆ. ಅವರಿಗೆ ಸೌಹಾರ್ದದ ಪ್ರಜ್ಞೆಯೇ ಇಲ್ಲ. ಅವರು ಒಬ್ಬರಿನ್ನೊಬ್ಬರನ್ನು ಕೊಲ್ಲುವರು. ಪರಸ್ಪರ ಸ್ವತ್ತುಗಳನ್ನು ಲೂಟಿಮಾಡುವರು, ಪರಸ್ಪರ ಮನೆಗಳನ್ನು ಸುಟ್ಟು ಹಾಕುವರು. ಉದಾಹರಣೆಗೆ, ಡಾಕ್ಕಾದಲ್ಲಿ ಮುಸ್ಲಿಮ್ ಲೀಗ್ ಮತ್ತು ಕಾಂಗ್ರೆಸ್‌ನ ಮಧ್ಯದ ಸಂಘರ್ಷದ ಕಾರಣದಿಂದ ನಮ್ಮ ಗ್ರಂಥಾಲಯ ಮತ್ತು ಮಸ್‌ಜಿದ್ ಸುಟ್ಟು ಹಾಕಲಾಯಿತು. ಆದರೆ ನಾವು ಹೋರಾಟದಲ್ಲಿ ಭಾಗವಹಿಸಿರಲಿಲ್ಲ. ನಾವು ಸಾಮಾಜಿಕ ಅಸ್ತವ್ಯಸ್ತತೆ ಸೃಷ್ಟಿಸುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ. ಆದರೆ ನಮ್ಮ ಮಸ್‌ಜಿದನ್ನು ಮತ್ತು ಗ್ರಂಥಾಲಯವನ್ನು ಸುಟ್ಟು ಹಿಂದುಗಳು ತಾವು ಏನೋ ಮಹತ್ವಪೂರ್ಣವಾದುದನ್ನು ಸಾಧಿಸಿದುದಾಗಿ ಯೋಚಿಸಿದರು. ಇದರಿಂದ ತಿಳಿಯುವುದೇನೆಂದರೆ, ಇಂತಹ ಭಿನ್ನಾಭಿಪ್ರಾಯಗಳು ಮನುಷ್ಯನ ಮನಸ್ಸಾಕ್ಷಿಯನ್ನು ಕುರುಡುಗೊಳಿಸುತ್ತವೆ ಮತ್ತು ಅವನು ಸರಿ ಯಾವುದು ತಪ್ಪು ಯಾವುದು ಎಂಬುದರ ವ್ಯತ್ಯಾಸ ಗುರುತಿಸಲು ಅಸಮರ್ಥನಾಗುತ್ತಾನೆ. (ಅಲ್‌ಫಝ್ಲ್ 13 ನವೆಂಬರ್ 1946).

ಹಝ್ರತ್ ಖಲೀಫರು ರಾಜಕೀಯ ನಾಯಕರೊಂದಿಗೆ ಸಮಸ್ಯೆ ಪರಿಹಾರಕ್ಕೆ ಏನನ್ನಾದರೂ ಮಾಡಲು ಹೇಳಿದಾಗ ಆ ನಾಯಕರು ಹೇಳಿದರು – ನಿಮಗೆ ಅದನ್ನು ಮಾಡಲು ಸಾಧ್ಯವಿದೆ, ನಮಗಲ್ಲ. (ಅಲ್‌ಫಝ್ಲ್ 13 ನವೆಂಬರ್ 1946).

ಹಝ್ರತ್ ಖಲೀಫರು ಮುನ್ನೆಚ್ಚರಿಕೆಯಾಗಿ ಹೇಳಿದ ಪ್ರತಿಯೊಂದು ಮಾತು ಅನಂತರ ಅಕ್ಷರಶಃ ಈಡೇರಿದುದಾಗಿ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಮಧ್ಯೆ ಐಕ್ಯವಾಗಲಿ ಹೊಂದಾಣಿಕೆಯಾಗಲಿ ಭಾರತ ಸ್ವಾತಂತ್ರ್ಯ ಗಳಿಸುವ ತನಕ ಸಾಧ್ಯವಾಗಲಿಲ್ಲ. ಆದುದರಿಂದ ಎಲ್ಲ ಜನರ ಹಕ್ಕುಗಳನ್ನು ಸಂರಕ್ಷಿಸಲು ಪಂಜಾಬಿನಲ್ಲಿದ್ದ ಅಹ್ಮದಿಯಾ ಸಮುದಾಯ ತಮ್ಮ ಮಾತೃಭೂಮಿಯನ್ನು ಬಿಟ್ಟು ಹೋಯಿತು. ಆ ಸಂದರ್ಭದಲ್ಲೂ ಅನಿವಾರ್ಯವಾದ ಘಟನೆಗಳ ಕಾರಣದಿಂದ ಸಂಭವಿಸುವ ಹಾನಿಗಳನ್ನು ಕಡಿಮೆ ಮಾಡಲು ಹಝ್ರತ್ ಖಲೀಫರು ಎಲ್ಲ ವಿಧಗಳಲ್ಲಿಯೂ ಪ್ರಯತ್ನಿಸಿದರು. ಪಂಜಾಬಿನ ನೆಲವು ರಕ್ತದಿಂದ ವರ್ಣರಂಜಿತವಾಯಿತು. ಈ ಪ್ರದೇಶದ ಚರಿತ್ರೆಯಲ್ಲಿ ಇಂತಹ ಉದಾಹರಣೆ ಎಂದೂ ಕಾಣಲು ಸಾಧ್ಯವಿಲ್ಲ. ಮಿಲಿಯಗಟ್ಟಲೆ ಜನರು ಸಾಮೂಹಿಕವಾಗಿ ಹತ್ಯೆ ಮಾಡಲ್ಪಟ್ಟರು. ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಜನರು ತಮ್ಮ ಜೀವ ರಕ್ಷಣೆಗೆ ತಮ್ಮ ಮಾತೃಭೂಮಿಯನ್ನು ತ್ಯಜಿಸಿ ಹೋಗಬೇಕಾಯಿತು.

ಅಹ್ಮದಿಯಾ ಮುಸ್ಲಿಮ್ ಸಮುದಾಯ ಯಾವಾಗಲೂ ಶಾಂತಿ ಮತ್ತು ಐಕ್ಯತೆಗೋಸ್ಕರ ಪರಿಶ್ರಮಿಸಿದೆ. ಆದರೆ ಈ ಸಮುದಾಯ ವಿಭಜನೆಗೆ ಪ್ರೋತ್ಸಾಹಿಸಿದೆ ಎಂದು ಆಪಾದಿಸುವುದು ದುರದೃಷ್ಟಕರವಾಗಿದೆ. ಕೆಲವು ಚಾರಿತ್ರಿಕ ಸಾಕ್ಷ್ಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಅವುಗಳನ್ನು ನ್ಯಾಯನಿಷ್ಠೆಯಿಂದ ಪರಿಶೀಲಿಸುವವನಿಗೆ ಸತ್ಯವನ್ನು ತಲಪಲು ಅವು ಸಹಕಾರಿಯಾಗುವುವು.

## ಸರಕಾರಕ್ಕೆ ಅವಿಧೇಯತೆ ಅಂಗೀಕಾರಾರ್ಹವಲ್ಲ


ಸರಕಾರಕ್ಕೆ ವಿಧೇಯತೆ ಸರಕಾರ ಮುಸ್ಲಿಮರದಾಗಿರಲಿ, ಮುಸ್ಲಿಮೇತರದಾಗಿರಲಿ, ಮುಸ್ಲಿಮನಿಗೆ ಕಡ್ಡಾಯ ಕರ್ತವ್ಯವಾಗಿದೆ. ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರು ಹೇಳುತ್ತಾರೆ: "ಪವಿತ್ರ ಪೈಗಂಬರರು ಸರಕಾರಕ್ಕೆ ಅಥವಾ ಆಡಳಿತಾಧಿಕಾರಿಗೆ

ವಿಧೇಯರಾಗಬೇಕೆಂದು ಮುಸ್ಲಿಮರೊಂದಿಗೆ ಒತ್ತಿ ಆಜ್ಞಾಪಿಸಿದ್ದಾರೆ. 'ಸುಖದ ಕಾಲದಲ್ಲೂ ಕಷ್ಟದ ಕಾಲದಲ್ಲೂ ಸಂತೋಷದ ಕಾಲದಲ್ಲಿಯೂ ಬೇಸರಪಡುವ ಕಾಲದಲ್ಲಿಯೂ ನಿಮಗಿಂತ ಇನ್ನೊಬ್ಬನಿಗೆ ತಪ್ಪಾಗಿ ಆದ್ಯತೆ ನೀಡುವಾಗಲೂ ನೀವು ಆಡಳಿತೆಯ ಅಧಿಕಾರಿಯ ಮಾತುಗಳನ್ನು ಆಲಿಸಿ ಅತನಿಗೆ ವಿಧೇಯನಾಗಿರುವುದು ನಿಮ್ಮ ಕಡ್ಡಾಯ ಕರ್ತವ್ಯವಾಗಿದೆ' ಎಂದು ಹಝ್ರತ್ ಪೈಗಂಬರರು[ಸ] ಹೇಳಿದರು. (ಸಹೀಹ್ ಮುಸ್ಲಿಮ್).

ಇನ್ನೊಂದು ಹದೀಸು ವರದಿ ಹೀಗಿದೆ: ಹಝ್ರತ್ ಪೈಗಂಬರರೊಂದಿಗೆ ಶಿಷ್ಯರು ಕೇಳಿದರು: 'ಅಲ್ಲಾಹನ ಪೈಗಂಬರರೇ, ನಮ್ಮನ್ನು ಆಳುವವರು ನಾವು ಅವರಿಗೆ ಸಂಬಂಧಿಸಿದ ಹೊಣೆಗಾರಿಕೆಗಳನ್ನು ಈಡೇರಿಸಬೇಕೆಂದು ಆವಶ್ಯಪಡುವಾಗ ನಮ್ಮನ್ನು ಆಳುವವರು ನಮಗೆ ಸಂಬಂಧಿಸಿದ ಅವರ ಹೊಣೆಗಾರಿಕೆಗಳನ್ನು ಈಡೇರಿಸದಿದ್ದರೆ ನಾವೇನು ಮಾಡಬೇಕೆಂದು ನೀವು ಆಜ್ಞಾಪಿಸುವಿರಿ?' ಹಝ್ರತ್ ಪೈಗಂಬರರು ತಕ್ಷಣ ಉತ್ತರ ನೀಡಲಿಲ್ಲ. ಆದರೆ ಪ್ರಶ್ನೆಯನ್ನು ಪುನರಾವರ್ತಿಸಿದಾಗ ಹೇಳಿದರು: 'ನೀವು ಅವರ ಮಾತುಗಳನ್ನು ಆಲಿಸಿರಿ ಮತ್ತು ಅನುಸರಿಸಿರಿ. ಏಕೆಂದರೆ ಅವರ ಮೇಲೆ ಅವರ ಭಾರ ಹೊರಿಸಲ್ಪಡುವುದು. ನೀವು ನಿಮ್ಮ ಭಾರ ಹೊರಬೇಕಾಗುವುದು.' (ಸಹೀಹ್ ಮುಸ್ಲಿಮ್).

ಮೇಲಿನ ಹದೀಸುಗಳಲ್ಲಿ ಮುಸ್ಲಿಮ್ ಆಡಳಿತೆಗಾರರಿಗೆ ಮಾತ್ರ ಮುಸ್ಲಿಮರು ವಿಧೇಯರಾಗಬೇಕೆಂಬ ಯಾವ ಸೂಚನೆಯೂ ಇಲ್ಲ. ಒಬ್ಬನು ಒಂದು ದೇಶದಲ್ಲಿ ಮತ್ತು ವಿಶಿಷ್ಟ ಆಡಳಿತೆಗಾರನಿಗೆ ಅಧೀನವಾಗಿ ಜೀವಿಸಬೇಕೆಂಬ ನಿರ್ಬಂಧವಿಲ್ಲವೆಂಬುದನ್ನು ನೆನಪಿನಲ್ಲಿರಿಸಬೇಕು. ಆದರೆ ಒಬ್ಬನು ಒಂದು ದೇಶವನ್ನು ಜೀವಿಸಲು ಆಯ್ಕೆಮಾಡುವನಾದರೆ ಆ ದೇಶದ ನಿಯಮಗಳಿಗೆ ಬದ್ಧನಾಗಬೇಕಾದುದು ಆವಶ್ಯಕವಾಗಿದೆ.

## ದೇಶನಿಷ್ಠೆ ಮತ್ತು ದೇಶಪ್ರೇಮ




ಅಹ್ಮದಿಯಾ ಮುಸ್ಲಿಮ್ ಜಮಾಅತ್ ಈಗ ಇನ್ನೂರ ಹತ್ತಕ್ಕಿಂತ ಹೆಚ್ಚು ದೇಶಗಳಲ್ಲಿ ಸ್ಥಾಪಿತವಾಗಿದೆ. ಅಹ್ಮದಿಯಾ ಜಮಾಅತಿನ ಸದಸ್ಯರು ಅವರು ಯಾವ ದೇಶದ ನಿವಾಸಿಗಳಾಗಿದ್ದರೂ ತಾವು ವಾಸಿಸುವ ದೇಶದಲ್ಲಿ ಪ್ರೀತಿ, ಭ್ರಾತೃತ್ವವನ್ನು ಪ್ರೋತ್ಸಾಹಿಸುತ್ತಾ ದೇಶಕ್ಕೆ ನಿಷ್ಠಾವಂತರಾಗಿರುತ್ತಾರೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಇಸ್ಲಾಮಿನ ಈ ಸಂದೇಶವನ್ನು ಲೋಕದಾದ್ಯಂತ ಹರಡುತ್ತಿದ್ದಾರೆ. ಅವರು ಜರ್ಮನಿಯ ಮಿಲಿಟರಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಮಾಡಿದ ಭಾಷಣದಿಂದ ಕೆಲವು ಉದ್ಧರಣೆಗಳನ್ನು ಓದುಗರ ಮುಂದೆ ಇರಿಸಲಾಗುತ್ತಿದೆ. ಅವರು ಹೇಳಿದರು:

"ದೇಶನಿಷ್ಠೆ ಮತ್ತು ದೇಶಪ್ರೇಮ ಎಂದು ಹೇಳುವುದು ಸುಲಭವಾಗಿದೆ. ವಾಸ್ತವಿಕವಾಗಿ ಈ ಶಬ್ದಗಳಲ್ಲಿ ವಿಶಾಲ ಸುಂದರ ತಳಸ್ಪರ್ಶಿ ಅರ್ಥಗಳು ಇವೆ. ಈ ಪದಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಪೂರ್ಣವಾಗಿ ಮನವರಿಕೆ ಮಾಡಿಕೊಳ್ಳುವುದು ಮತ್ತು ಅವು ನಮ್ಮಿಂದ ಏನನ್ನು ಬಯಸುತ್ತವೆ ಎಂದು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಕಷ್ಟಕರವೇ ಆಗಿದೆ. ಹೀಗಿದ್ದರೂ ನನಗೆ ದೊರೆತಿರುವ ಸಮಯಾವಕಾಶದಲ್ಲಿ ಇಸ್ಲಾಮ್ ಧರ್ಮ ದೇಶ ಭಕ್ತಿ ಮತ್ತು ದೇಶ ಪ್ರೇಮದ ಬಗ್ಗೆ ಉಪದೇಶಿಸಿರುವುದನ್ನು ವಿವರಿಸಲು ಪ್ರಯತ್ನಿಸುವೆನು.

"ಮೊದಲನೆಯದಾಗಿ ಇಸ್ಲಾಮ್ ಉಪದೇಶಿಸುವ ಮೂಲ ತತ್ವವೇನೆಂದರೆ ಮನುಷ್ಯನ ಮಾತು ಮತ್ತು ಕೃತಿ ಇಬ್ಬಗೆಯದಾಗಿರಬಾರದು ಅಥವಾ ಕಾಪಟ್ಯಭಾವ ಹೊಂದಿರಬಾರದು. ನಿಜವಾದ ದೇಶಭಕ್ತಿ ಪ್ರಾಮಾಣಿಕವಾದ ಸಂಬಂಧವನ್ನು ಮತ್ತು ಸತ್ಯ ಸಂಧತೆಯನ್ನು ಆವಶ್ಯಪಡುತ್ತದೆ. ಮನುಷ್ಯನು ಹೊರಗೆ ಪ್ರಕಟಿಸುವ ಅಭಿಪ್ರಾಯ ಅವನ ಒಳಗೆ ಸಹ ಅದೇ ರೀತಿ ಇರಬೇಕು. ದೇಶ ಭಕ್ತಿಗೆ ಸಂಬಂಧಿಸಿ ಈ ತತ್ವಗಳು ಮುಖ್ಯವಾಗಿವೆ. ಆದುದರಿಂದ ಒಂದು ದೇಶದ ನಾಗರಿಕನಾಗಿರುವವನು ತನ್ನ ದೇಶದೊಂದಿಗೆ ವಾಸ್ತವಿಕವಾದ ಪ್ರೇಮ ಮತ್ತು ನಿಷ್ಠೆ ಹೊಂದುವುದು ಅತ್ಯಾವಶ್ಯಕವಾಗಿದೆ. ಒಬ್ಬನು ಜನ್ಮತಃ ನಾಗರಿಕತೆ ಗಳಿಸಿದವನಾಗಿದ್ದರೂ ವಲಸೆ ಬಂದ ಕಾರಣದಿಂದ ಅಥವಾ ಬೇರೆ ಯಾವುದೇ ಕಾರಣದಿಂದ ಇನ್ನೊಂದು ದೇಶದ ನಾಗರಿಕನಾದರೂ ಅವನು ತಾನು ನಾಗರಿಕನಾಗಿರುವ ದೇಶಕ್ಕೆ ನಿಷ್ಠಾವಂತನಾಗಿರಬೇಕೆಂಬುದು ಇಸ್ಲಾಮ್ ಅಗತ್ಯಪಡಿಸುತ್ತದೆ.

"ನಿಷ್ಠೆ ಅತ್ಯಂತ ಶ್ರೇಷ್ಠ ಗುಣವಾಗಿದೆ. ಅದನ್ನು ಅತ್ಯಂತ ಸಮರ್ಪಕವಾಗಿ ಪ್ರಕಟಿಸಿದವರು ದೇವನು ನೇಮಿಸಿದ ಪ್ರವಾದಿಗಳಾಗಿದ್ದಾರೆ. ಅವರು ದೇವನೊಂದಿಗೆ ಹೊಂದಿದ್ದ ನಿಕಟ ಸಂಬಂಧ ಮತ್ತು ಪ್ರೇಮ ಎಷ್ಟು ಶಕ್ತಿಯುತವಾಗಿತ್ತೆಂದರೆ ಎಲ್ಲ ವಿಷಯಗಳ ಬಗ್ಗೆ ದೇವನು ನೀಡಿದ ಆಜ್ಞೆಗಳನ್ನು ಪರಿಪೂರ್ಣ ನಿಷ್ಠೆಯಿಂದ ಪಾಲಿಸಲು ಕಠಿಣ ಪರಿಶ್ರಮ ಮಾಡುತ್ತಿದ್ದರು. ಅವರ ವರ್ತನೆ ಅವರಿಗೆ ದೇವನ ಬಗ್ಗೆ ಇದ್ದ ನಿಷ್ಠೆ ಮತ್ತು ಅವರ ಉನ್ನತ ಮಟ್ಟವನ್ನು ಪ್ರತಿಬಿಂಬಿಸುತ್ತಿದ್ದುವು. ಆದುದರಿಂದ ಪ್ರವಾದಿಗಳು ಪ್ರಕಟಿಸಿದ ಮಾದರಿಯನ್ನು ನಾವು ಅವಲಂಬಿಸಬೇಕು. ಆದಾಗ್ಯೂ ಇದರ ಬಗ್ಗೆ ಹೆಚ್ಚಿನ ವಿವರಣೆ ನೀಡುವ ಮೊದಲು ದೇಶಪ್ರೇಮ ಮತ್ತು ದೇಶನಿಷ್ಠೆ ಎಂದರೇನೆಂದು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ.

"ಇಸ್ಲಾಮ್ ಧರ್ಮದ ಪ್ರಕಾರ ದೇಶ ನಿಷ್ಠೆಯ ನಿಜವಾದ ಅರ್ಥ ಪ್ರಜೆಯು ತನ್ನ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ನಿಸ್ಸಂದಿಗ್ಧವಾಗಿ ಎಲ್ಲ ಸಂದರ್ಭಗಳಲ್ಲೂ ಕಷ್ಟಗಳನ್ನು ಪರಿಗಣಿಸದೆ ಈಡೇರಿಸಬೇಕೆಂದಾಗಿದೆ. ಇಸ್ಲಾಮ್ ಆವಶ್ಯಪಡುವ ವಿಧೇಯತೆಯ ನಿಜವಾದ ಮಟ್ಟ ಇದೇ ಆಗಿದೆ. ಪವಿತ್ರ ಖುರ್‌ಆನ್ ವಿವಿಧ ಸಂದರ್ಭಗಳಲ್ಲಿ ಮುಸ್ಲಿಮರು ತಮ್ಮ ಪ್ರತಿಜ್ಞೆಗಳನ್ನೂ ಒಪ್ಪಂದಗಳನ್ನೂ ಈಡೇರಿಸಬೇಕೆಂದೂ ಅವರು ತಮ್ಮ ಹೊಣೆಗಾರಿಕೆಗಳ ಬಗ್ಗೆ ಪ್ರಶ್ನಿಸಲ್ಪಡುವರೆಂದೂ ಹೇಳಿದೆ. ಮುಸ್ಲಿಮರು ದೇವನಿಗೆ ಸಂಬಂಧಿಸಿದ ತಮ್ಮ ಕರ್ತವ್ಯಗಳನ್ನೂ ಪ್ರತಿಜ್ಞೆಗಳನ್ನೂ ಈಡೇರಿಸಬೇಕೆಂದು ಸಹ

ಉಪದೇಶಿಸಲಾಗಿದೆ.

"ಈ ವಿಷಯಕ್ಕೆ ಸಂಬಂಧಿಸಿ ಒಂದು ಸಂದೇಹ ಜನರಲ್ಲಿ ತಲೆದೋರಬಹುದಾಗಿದೆ. ಅದು ಹೀಗೆ: ಮುಸ್ಲಿಮರ ನಂಬಿಕೆ ಪ್ರಕಾರ ಅವರ ದೇವನು ಮತ್ತು ಅವರ ಧರ್ಮ ಅವರಿಗೆ ಎಲ್ಲವುಗಳಿಗಿಂತ ಮುಖ್ಯವಾಗಿವೆ. ಹಾಗೆ, ದೇವನಿಗೆ ಸಂಬಂಧಿಸಿದ ಅವರ ನಿಷ್ಠೆ ಇತರ ಎಲ್ಲದವುಗಳಿಗಿಂತ ಆದ್ಯತೆ ಗಳಿಸಿರುವುದು. ಆದುದರಿಂದ ಅವರು ಇತರ ಎಲ್ಲ ಪ್ರತಿಜ್ಞೆಗಳ ಈಡೇರಿಕೆಗಳಿಗಿಂತ ದೇವನಿಗೆ ಸಂಬಂಧಿಸಿದ ತಮ್ಮ ಪ್ರತಿಜ್ಞೆಗಳಿಗೆ ಆದ್ಯತೆ ನೀಡುವರು. ಈ ಕಾರಣದಿಂದ ಒಬ್ಬ ಮುಸ್ಲಿಮನಿಗೆ ತನ್ನ ದೇಶದ ಬಗ್ಗೆ ಇರುವ ನಿಷ್ಠೆ ಮತ್ತು ದೇಶದ ನಿಯಮಗಳ ಪಾಲನೆ ಅವನ ದೃಷ್ಟಿಯಲ್ಲಿ ದ್ವಿತೀಯ ಸ್ಥಾನದಲ್ಲಿರುವುದು. ಹಾಗೆ ಕೆಲವು ಸಂದರ್ಭಗಳಲ್ಲಿ ಅವನು ತನ್ನ ದೇಶ ನಿಷ್ಠೆಯನ್ನು ಬಲಿಯರ್ಪಿಸಲು ಸಿದ್ಧನಾಗಬಹುದು.

"ಈ ಸಂದೇಹ ನಿವಾರಣೆಗೆ ಸಂಬಂಧಿಸಿ ನಾನು ಮೊತ್ತ ಮೊದಲು ಹಝ್ರತ್ ಮುಹಮ್ಮದ್ ಪೈಗಂಬರರು(ಸ) ಸ್ವತಃ ಕಲಿಸಿದುದನ್ನು ಹೇಳಲು ಬಯಸುತ್ತೇನೆ. ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: 'ದೇಶ ಪ್ರೇಮವು ಸತ್ಯವಿಶ್ವಾಸದ ಅವಿಭಾಜ್ಯ ಭಾಗವಾಗಿದೆ.' ಇದರಿಂದ ತಿಳಿಯುವುದೇನೆಂದರೆ ಪ್ರಾಮಾಣಿಕವಾದ ದೇಶಭಕ್ತಿಯನ್ನು ಇಸ್ಲಾಮ್ ಧರ್ಮ ಮುಸ್ಲಿಮರಿಂದ ಆವಶ್ಯಪಡುತ್ತದೆ. ಸೃಷ್ಟಿಕರ್ತನಾದ ದೇವನನ್ನು ಪ್ರೀತಿಸುವವನು ತನ್ನ ದೇಶವನ್ನು ಪ್ರೀತಿಸಬೇಕು. ಆದುದರಿಂದ ಮುಸ್ಲಿಮನು ದೇವನನ್ನು ಪ್ರೀತಿಸುವುದರಲ್ಲೂ ಅದರ ಜೊತೆಗೆ ದೇಶವನ್ನು ಪ್ರೀತಿಸುವುದರಲ್ಲೂ ಯಾವುದೇ ವೈರುಧ್ಯವಿರುವುದಿಲ್ಲ. ದೇಶ ಪ್ರೇಮವನ್ನು ಇಸ್ಲಾಮ್ ಧರ್ಮದ ಒಂದು ಭಾಗವನ್ನಾಗಿ ಮಾಡಿರುವುದರಿಂದ ಮುಸ್ಲಿಮನು ತನ್ನ ದೇಶ ಪ್ರೇಮವನ್ನು ಉನ್ನತ ಮಟ್ಟಕ್ಕೆ ಏರಿಸುವುದಕ್ಕೋಸ್ಕರ ಕಠಿಣ ಪರಿಶ್ರಮ ಪಡಬೇಕು. ಏಕೆಂದರೆ ದೇವನ ಸಾಮೀಪ್ಯ ಗಳಿಸುವ ಮಾರ್ಗ ಸಹ ಇದು ಆಗಿದೆ. ಆದುದರಿಂದ ಒಬ್ಬ ನೈಜ ಮುಸ್ಲಿಮನು ದೇವನ ಬಗ್ಗೆ ಹೊಂದಿರುವ ಪ್ರೀತಿ ಮತ್ತು ನಿಷ್ಠೆಯು ಅವನನ್ನು ತನ್ನ ದೇಶಕ್ಕೆ ಪ್ರೀತಿ ಮತ್ತು ನಿಷ್ಠೆ ಪ್ರದರ್ಶಿಸುವುದಕ್ಕೆ ಅಡ್ಡಿಯಾಗುವುದು ಅಸಾಧ್ಯವೇ ಆಗಿದೆ.

"ದುರದೃಷ್ಟಕರವಾಗಿ, ಕೆಲವು ದೇಶಗಳಲ್ಲಿ ಧಾರ್ಮಿಕ ಹಕ್ಕುಗಳಲ್ಲಿ ಹಸ್ತಕ್ಷೇಪ ಮಾಡಲಾಗಿದೆ. ಅಥವಾ ಅವುಗಳನ್ನು ಸಂಪೂರ್ಣವಾಗಿ ಕಸಿಯಲಾಗಿದೆ. ಈ ಕಾರಣದಿಂದ ಇನ್ನೊಂದು ಪ್ರಶ್ನೆ ಉದಿಸುತ್ತದೆ. ಒಂದು ದೇಶದ ಸರಕಾರದಿಂದ ಹಿಂಸಾಚಾರಗಳಿಗೆ ಗುರಿಯಾಗುವ ಜನರು ಆ ದೇಶಕ್ಕೆ ಪ್ರೀತಿ ಮತ್ತು ನಿಷ್ಠೆಯನ್ನು ಮುಂದುವರಿಸಲು ಸಾಧ್ಯವೇ? ಇಂತಹ ಅತ್ಯಂತ ತೀವ್ರ ಪರಿಸ್ಥಿತಿಗಳಲ್ಲಿ ದೇಶದ ವಿಶಿಷ್ಟ ನಿಯಮ ಮತ್ತು ದೇಶಭಕ್ತಿ ಹಾಗೂ ನಿಷ್ಠೆ ಎರಡು ವಿಭಿನ್ನ ವಿಷಯಗಳಾಗುತ್ತವೆ. ನಮ್ಮ ನಂಬಿಕೆ ಪ್ರಕಾರ ಧರ್ಮವು ಪ್ರತಿಯೊಬ್ಬನ ವೈಯಕ್ತಿಕ ವಿಚಾರವಾಗಿದೆ. ಅವನು ತನಗಿಷ್ಟವಿರುವ ಧರ್ಮವನ್ನು ಅವಲಂಬಿಸಬಹುದು. ಧರ್ಮದ ವಿಷಯದಲ್ಲಿ ಬಲಾತ್ಕಾರವಿರಬಾರದು. ಆದುದರಿಂದ ಒಂದು ನಿಯಮವು ಮನುಷ್ಯನ ಈ ವೈಯಕ್ತಿಕ ಹಕ್ಕಿನ ಮೇಲೆ ಹಸ್ತಕ್ಷೇಪ ನಡೆಸಿದರೆ ಅದು ಅತ್ಯಂತ ದೊಡ್ಡ ಕ್ರೌರ್ಯವೂ ಹಿಂಸಾಚಾರವೂ ಆಗುತ್ತದೆ. ಇಂತಹ ಪರಿಸ್ಥಿತಿ ತಲೆದೋರಿದರೆ ಇಸ್ಲಾಮ್ ಹೀಗೆ ವರ್ತಿಸಬೇಕೆಂದು ಉಪದೇಶಿಸುತ್ತದೆ: ಹಿಂಸಾಚಾರ ಮಿತಿಮೀರಿದಾಗ ಮತ್ತು ಸಹಿಸಲು ಅಸಾಧ್ಯವಾದಾಗ ಹಿಂಸೆಗೆ ಗುರಿಯಾದವರು ತಾವು ವಾಸಿಸುತ್ತಿರುವ ಪ್ರದೇಶವನ್ನು ಅಥವಾ ದೇಶವನ್ನು ಬಿಟ್ಟು ಧರ್ಮವನ್ನು ಶಾಂತಿಯಿಂದ ಆಚರಿಸಲು ಸಾಧ್ಯವಿರುವಲ್ಲಿಗೆ ವಲಸೆ ಹೋಗಬೇಕು. ಈ ಮೇಲಿನ ಮಾರ್ಗದರ್ಶನದೊಂದಿಗೆ ಇಸ್ಲಾಮ್ ಹೀಗೆ ಸಹ ಉಪದೇಶಿಸುತ್ತದೆ: ಯಾವನೇ ವ್ಯಕ್ತಿ ನಿಯಮವನ್ನು ತನ್ನ ಕೈಗೆ ತೆಗೆದುಕೊಳ್ಳಬಾರದು ಮತ್ತು ದೇಶದ ವಿರುದ್ಧ ಗೂಢ ಪಿತೂರಿಗಳಲ್ಲಿ ಭಾಗವಹಿಸಬಾರದು. ಇದು ಇಸ್ಲಾಮ್ ಧರ್ಮ ವಿಧಿಸುವ ಸ್ಪಷ್ಟ ನಿಸ್ಸಂದಿಗ್ಧ ಆದೇಶವಾಗಿದೆ.

"ಪವಿತ್ರ ಖುರ್‌ಆನ್ ದೇಶದ ನಿಷ್ಠೆಗೆ ಸಂಬಂಧಿಸಿ ನೀಡುವ ಇನ್ನೊಂದು ಉಪದೇಶವೇನೆಂದರೆ, ಜನರು ತಮ್ಮನ್ನು ಅಸಭ್ಯ, ಅನಿಷ್ಟಕರ ಮತ್ತು ಎಲ್ಲ ರೀತಿಯ ವಿದ್ರೋಹ ಕೃತ್ಯಗಳಿಂದ ದೂರವಿರಿಸಬೇಕು. ಇಸ್ಲಾಮ್ ಧರ್ಮದ ಸುಂದರವೂ ವೈಶಿಷ್ಟ್ಯ ಪೂರ್ಣವೂ ಆಗಿರುವ ನಿಲುವೇನೆಂದರೆ ಕೊನೆಯ ಅಪಾಯಕಾರಿ ಸನ್ನಿವೇಶಗಳಿಗೆ ತಲಪುವಂತಹ ಕೃತ್ಯಗಳನ್ನು ಅದರ ಪ್ರಥಮ ಹೆಜ್ಜೆಯಲ್ಲಿಯೇ ತಡೆಗಟ್ಟುತ್ತದೆ. ಆದುದರಿಂದ ಇಸ್ಲಾಮಿನ ಮಾರ್ಗದರ್ಶನವನ್ನು ಸರಿಯಾದ ರೀತಿಯಲ್ಲಿ ಅನುಸರಿಸುವುದಾದರೆ ಯಾವುದೇ ಸನ್ನಿವೇಶವು ಅಪಾಯಕಾರಿ ಹಂತವನ್ನು ತಲಪುವ ಮೊದಲೇ ಅದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

"ಉದಾಹರಣೆಗೆ, ದೇಶಕ್ಕೆ ಬಹಳ ಹಾನಿಯನ್ನುಂಟುಮಾಡುವ ಒಂದು ವಿಷಯ ವ್ಯಕ್ತಿಗಳ ಆರ್ಥಿಕ ಲಾಭದ ಲಾಲಸೆಯಾಗಿದೆ. ಲೌಕಿಕ ಲಾಭದ ದುರಾಸೆಗಳಿಂದ ಜನರು ಪೀಡಿತರಾಗುತ್ತಾರೆ ಮತ್ತು ಅದು ಅನಿಯಂತ್ರಿತವಾಗಿ ಮುಂದುವರಿಯುತ್ತದೆ. ಅಂತಹ ದುರಾಸೆಗಳು ಅವರನ್ನು ದೇಶಕ್ಕೆ ಹಾನಿಕಾರವಾಗಿ ವರ್ತಿಸುವಂತೆ ಮಾಡುತ್ತದೆ. ಕೊನೆಗೆ ಅದು ದೇಶವನ್ನು ವಂಚಿಸುವುದಕ್ಕೆ ಕಾರಣವಾಗುತ್ತದೆ. ಇದನ್ನು ಅರಬಿ ಭಾಷೆಯಲ್ಲಿ ಬಘಾ ಎಂದು ಹೇಳುತ್ತಾರೆ. ದೇಶಕ್ಕೆ ಹಾನಿಯನ್ನುಂಟುಮಾಡುವ ವಿದ್ರೋಹಕರ ಕೃತ್ಯಗಳು 'ಬಘಾ' ಆಗಿವೆ. ಕೆಟ್ಟ ಕೆಲಸ ಮಾಡುವವರನ್ನೂ ಇತರರಿಗೆ ಹಾನಿಯನ್ನುಂಟುಮಾಡುವವರನ್ನೂ ಈ ಪದ ಸೂಚಿಸುತ್ತದೆ. ವಿಶ್ವಾಸ ದ್ರೋಹದ ಮೂಲಕ ಅನ್ಯಾಯದಿಂದ ಸಂಪತ್ತು ಗಳಿಸುವುದು ಸಹ ಇದರಲ್ಲಿ ಸೇರುತ್ತದೆ. ಅತಿರೇಕದಿಂದ ವರ್ತಿಸಿ ಹಾನಿಯನ್ನುಂಟುಮಾಡುವವರು ಇವರಾಗಿದ್ದಾರೆ. ಈ ರೀತಿ ವರ್ತಿಸುವವರು ದೇಶಕ್ಕೆ ನಿಷ್ಠಾವಂತರಾಗಲಾರರೆಂದು ಇಸ್ಲಾಮ್ ಉಪದೇಶಿಸುತ್ತಿದೆ. ಏಕೆಂದರೆ ದೇಶ ನಿಷ್ಠೆಯು ಉನ್ನತ ನೈತಿಕ ಗುಣಗಳೊಂದಿಗೆ ಹಾಸುಹೊಕ್ಕಾಗಿರುತ್ತದೆ. ಉನ್ನತ ನೈತಿಕ ಗುಣಗಳಿಲ್ಲದಿದ್ದರೆ ದೇಶ ನಿಷ್ಠೆಯು ಉಂಟಾಗಲಾರದು. ದೇಶ ನಿಷ್ಠೆ ಇಲ್ಲದಿದ್ದರೆ ಉನ್ನತ ನೈತಿಕ ಗುಣಗಳು ಉಂಟಾಗಲಾರವು. ಬೇರೆ ಬೇರೆ ಗುಂಪಿನ ಜನರು ಉನ್ನತ ನೈತಿಕ ಗುಣಗಳ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ಹೊಂದಿರಬಹುದೆಂಬುದು ಸತ್ಯವಾಗಿದೆ. ಆದರೆ ಇಸ್ಲಾಮ್ ಧರ್ಮವು ದೇವನ ಪ್ರೀತಿ ಗಳಿಸುವ ಏಕಮಾತ್ರ ಉದ್ದೇಶಲಕ್ಷ್ಯವನ್ನು ಹೊಂದಿದೆ. ಆದುದರಿಂದ ಮುಸ್ಲಿಮರು ಅಲ್ಲಾಹನ ಸಂಪ್ರೀತಿ ಗಳಿಸುವ ರೀತಿಯಲ್ಲಿ ಯಾವಾಗಲೂ ವರ್ತಿಸಬೇಕು ಎಂದು ಉಪದೇಶಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ದೇಶದ ವಿರುದ್ಧ ಅಥವಾ ಸರಕಾರದ ವಿರುದ್ಧ ಮಾಡುವ ಎಲ್ಲ ರೀತಿಯ ವಿದ್ರೋಹಕರ ಕೃತ್ಯಗಳನ್ನು ದೇವನು ನಿಷಿದ್ಧಗೊಳಿಸಿದ್ದಾನೆ. ದೇಶದ ವಿರುದ್ಧ ವಿದ್ರೋಹ

ಮಾಡುವುದು ದೇಶದಲ್ಲಿ ಗಲಭೆ ದೊಂಬಿಗಳನ್ನು ಹುಟ್ಟು ಹಾಕುತ್ತದೆ ಮತ್ತು ಶಾಂತಿಯನ್ನು ಕೆಡಿಸಿ ದೇಶದ ಭದ್ರತೆಗೆ ಅಪಾಯ ಉಂಟುಮಾಡುತ್ತದೆ. ಒಂದು ದೇಶದಲ್ಲಿ ಆಂತರಿಕ ಗಲಭೆಗಳು ಮತ್ತು ವಿದ್ರೋಹಕರ ಕೃತ್ಯಗಳು ನಡೆಯುವಾಗ ಬಾಹ್ಯ ಶತ್ರುಗಳು ಧೈರ್ಯಗೊಂಡು ಆ ದೇಶದಲ್ಲಿ ಹಸ್ತಕ್ಷೇಪ ನಡೆಸಲು ಮುಂದಾಗುತ್ತಾರೆ. ಆದುದರಿಂದ ತನ್ನ ದೇಶದ ವಿರುದ್ಧ ಮಾಡುವ ವಿದ್ರೋಹಗಳ ಕಾರಣದಿಂದ ಅತ್ಯಂತ ತೀವ್ರ ಅಪಾಯಕರ ಪರಿಣಾಮಗಳು ತಲೆದೋರಬಹುದು. ಈ ಎಲ್ಲ ವಿಧಗಳ ಹಾನಿಕಾರಕ ಕೃತ್ಯಗಳು ಬಘಾ ಶಬ್ದದಲ್ಲಿ ಸೇರಿವೆ. ಒಟ್ಟಾರೆ ಹೇಳುವುದಾದರೆ, ಒಂದು ದೇಶದ ಬಗ್ಗೆ ನಿಷ್ಠೆ ಮತ್ತು ಭಕ್ತಿ ತೋರಿಸಬೇಕಾದುದು ಸಹನೆದೋರುವುದರ ಮೂಲಕ, ನೈತಿಕ ಗುಣಗಳನ್ನು ಅವಲಂಬಿಸುವ ಮೂಲಕ ಮತ್ತು ದೇಶದ ನಿಯಮಗಳನ್ನು ಅನುಸರಿಸುವ ಮೂಲಕವಾಗಿದೆ.

"ಸಾಮಾನ್ಯವಾಗಿ ಹೇಳುವುದಾದರೆ, ಇಂದಿನ ಕಾಲದಲ್ಲಿ ಬಹುತೇಕ ದೇಶಗಳು ಪ್ರಜಾಪ್ರಭುತ್ವ ಹೊಂದಿವೆ. ಆದುದರಿಂದ ಒಬ್ಬ ವ್ಯಕ್ತಿ ಅಥವಾ ಗುಂಪು ಸರಕಾರವನ್ನು ಬದಲಾಯಿಸಲು ಬಯಸುವುದಾದರೆ ಪ್ರಜಾಪ್ರಭುತ್ವ ವಿಧಾನವನ್ನು ಬಳಸಿ ಹಾಗೆ ಮಾಡಬಹುದು. ಅವರು ಚುನಾವಣೆ ಮೂಲಕ ತಮ್ಮ ಅಭಿಪ್ರಾಯವನ್ನು ಪ್ರಕಟಿಸಬೇಕು. ಚುನಾವಣೆಯಲ್ಲಿ ಮತದಾನ ಮಾಡುವಾಗ ಸ್ವಾರ್ಥ ಉದ್ದೇಶವನ್ನು ಹೊಂದದೆ ದೇಶದ ಹಿತವನ್ನು ಪರಿಗಣಿಸಬೇಕೆಂದು ಇಸ್ಲಾಮ್ ಹೇಳುತ್ತದೆ. ಯಾವ ಉಮೇದುವಾರನಿಂದ ಅಥವಾ ಯಾವ ಪಕ್ಷದಿಂದ ತನಗೆ ಪ್ರಯೋಜನ ಸಿಗುವುದು ಎಂದು ಪರಿಗಣಿಸದೆ ಯಾವ ವ್ಯಕ್ತಿಯಿಂದ ಅಥವಾ ಯಾವ ಪಕ್ಷದಿಂದ ದೇಶಕ್ಕೆ ಪ್ರಯೋಜನ ಸಿಗುವುದು ಎಂಬುದನ್ನು ಪರಿಗಣಿಸಿ ಮತದಾನ ಮಾಡಬೇಕು. ಸರಕಾರದ ನಿರ್ಮಾಣಕ್ಕೆ ಸಿಗುವ ಮತಗಳು ಒಂದು ವಿಶ್ವಸ್ತ ನಿಧಿಯಾಗಿದೆ. ಅದನ್ನು ಅರ್ಹರಾದವರಿಗೆ ಮಾತ್ರ ನೀಡಬೇಕಾಗಿದೆ. ನೈಜ ಇಸ್ಲಾಮ್ ಇದನ್ನೇ ಉಪದೇಶಿಸುತ್ತದೆ. ಇದೇ ನಿಜವಾದ ದೇಶ ನಿಷ್ಠೆ ಮತ್ತು ದೇಶ ಭಕ್ತಿಯಾಗಿದೆ.

"ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 59ರಲ್ಲಿ ಅಲ್ಲಾಹನು ಹೇಳಿರುವುದೇನೆಂದರೆ, ಜನರು ವಿಶ್ವಸ್ತ ನಿಧಿಗಳನ್ನು ಅದಕ್ಕೆ ಅರ್ಹರಾದವರಿಗೆ ನೀಡಬೇಕೆಂದೂ ಅಧಿಕಾರಿಗಳು ತೀರ್ಪು ನೀಡುವಾಗ ನ್ಯಾಯಯುತವಾಗಿಯೂ ಪ್ರಾಮಾಣಿಕತೆಯಿಂದಲೂ ತೀರ್ಪು ನೀಡಬೇಕೆಂದೂ ಆಗಿದೆ. ದೇಶಕ್ಕೆ ನಿಷ್ಠರಾದ ದೇಶಭಕ್ತರು ಮತದಾನದ ಮೂಲಕ ಅಧಿಕಾರ ನೀಡುವಾಗ ಅರ್ಹರಾದವರಿಗೆ ಅಧಿಕಾರ ನೀಡಿದರೆ ದೇಶವು ಪ್ರಗತಿ ಹೊಂದಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸೇರುವುದು.

## ಪ್ರತಿಭಟನೆಗಳು ಮುಷ್ಕರಗಳು

"ಲೋಕದ ಅನೇಕ ದೇಶಗಳಲ್ಲಿ ಸರಕಾರದ ವಿರುದ್ಧ ಜನರು ಮುಷ್ಕರಗಳಲ್ಲೂ ಪ್ರತಿಭಟನೆಗಳಲ್ಲೂ ಭಾಗವಹಿಸುವುದು ಕಾಣುತ್ತದೆ. ತೃತೀಯ ದೇಶಗಳಲ್ಲಿ ಪ್ರತಿಭಟನೆ ನಡೆಸುವ ಪ್ರದರ್ಶನಕಾರರು ಸರಕಾರಿ ಆಸ್ತಿಗಳನ್ನೂ ಜನರ ಆಸ್ತಿಗಳನ್ನೂ ಧ್ವಂಸಗೊಳಿಸುತ್ತಾರೆ. ಇಂತಹ ಕೃತ್ಯಗಳಿಗೆ ದೇಶನಿಷ್ಠೆಯೊಂದಿಗೆ ಯಾವ ಸಂಬಂಧವೂ ಇರುವುದಿಲ್ಲ. ಮುಷ್ಕರಗಳನ್ನೂ ಪ್ರತಿಭಟನೆ ಪ್ರದರ್ಶನಗಳನ್ನೂ ಶಾಂತಿಯುತವಾಗಿ ನಡೆಸಿದರೂ ಅದರ ಪರಿಣಾಮ ಹಾನಿಕರವೇ ಆಗಿರುತ್ತದೆ. ಶಾಂತಿಯುತ ಮುಷ್ಕರಗಳಿಂದಲೂ ಹೆಚ್ಚಿನ ಸಂದರ್ಭಗಳಲ್ಲಿ ಮಿಲಿಯಗಟ್ಟಲೆ ಹಣದ ಆರ್ಥಿಕ ನಷ್ಟವುಂಟಾಗುತ್ತದೆ. ಯಾವ ಸಂದರ್ಭದಲ್ಲಿಯೂ ಇಂತಹ ಪ್ರತಿಭಟನೆಗಳನ್ನು ದೇಶಕ್ಕೆ ನಿಷ್ಠೆ ಎಂದು ಪರಿಗಣಿಸಲಾಗದು. ಅಹ್ಮದಿಯಾ ಜಮಾಅತಿನ ಸ್ಥಾಪಕರು ಒಂದು ಸುವರ್ಣ ತತ್ವವನ್ನು ಪ್ರತಿಪಾದಿಸಿದ್ದಾರೆ. ನಾವು ಎಲ್ಲ ಸಂದರ್ಭಗಳಲ್ಲೂ ಅಲ್ಲಾಹನಿಗೆ, ಅವನ ಸಂದೇಶವಾಹಕರಿಗೆ ಮತ್ತು ದೇಶವನ್ನು ಆಳುವವರಿಗೆ ವಿಧೇಯರಾಗಬೇಕೆಂಬುದೇ ಈ ತತ್ವವಾಗಿದೆ. ಅದು ಪವಿತ್ರ ಖುರ್‌ಆನ್ ಉಪದೇಶಿಸುವ ತತ್ವವೇ ಆಗಿದೆ. ಆದುದರಿಂದ ಮುಷ್ಕರಗಳಿಗೆ ಅನುಮತಿ ಇರುವ ದೇಶಗಳಲ್ಲೂ ಮುಷ್ಕರಗಳನ್ನೂ ಪ್ರತಿಭಟನೆಗಳನ್ನೂ ಹೇಗೆ ನಡೆಸಬೇಕೆಂದರೆ ಅದರಿಂದ ದೇಶಕ್ಕೆ ಮತ್ತು ಆರ್ಥಿಕ ವ್ಯವಸ್ಥೆಗೆ ಯಾವ ಹಾನಿಯೂ ಉಂಟಾಗಬಾರದು.

"ಒಟ್ಟಿನಲ್ಲಿ, ಇವು ನೈಜ ಮುಸ್ಲಿಮರನ್ನು ದೇಶಭಕ್ತಿ ಮತ್ತು ದೇಶನಿಷ್ಠೆಯ ಯಥಾರ್ಥ ಆವಶ್ಯಕತೆ ಕಡೆಗೆ ಮಾರ್ಗದರ್ಶನ ವನ್ನೀಯುವ ಇಸ್ಲಾಮಿಕ ಪಾಠಗಳ ಕೆಲವು ಅಂಶಗಳಾಗಿವೆ.

## ಜಾಗತಿಕ ನಾಯಕರ ಹೊಣೆಗಾರಿಕೆಗಳು

"ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ, ಇಂದು ಲೋಕವು ಒಂದು ಜಾಗತಿಕ ಗ್ರಾಮವಾಗಿರುವುದಾಗಿ ನಾವು ಕಾಣುತ್ತೇವೆ. ಮಾನವರೆಲ್ಲರೂ ಪರಸ್ಪರ ಬಹಳ ಹತ್ತಿರವಾಗಿರುವರು. ಎಲ್ಲ ದೇಶಗಳಲ್ಲೂ ಎಲ್ಲ ಜನಾಂಗಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಸಂಸ್ಕೃತಿಗಳ ಜನರನ್ನು ಕಾಣಬಹುದಾಗಿದೆ. ಆದ್ದರಿಂದ ಪ್ರತಿ ದೇಶದ ನಾಯಕರು ತಮ್ಮ ದೇಶದ ನಿವಾಸಿಗಳಾದ ಎಲ್ಲರ ಭಾವನೆಗಳನ್ನು ಗೌರವಿಸಬೇಕು. ರಾಜಕಾರಣಿಗಳು ಮತ್ತು ಸರಕಾರಗಳು ಸತ್ಯ ಮತ್ತು ನ್ಯಾಯಪಾಲನೆ ಮಾಡುವಂತಹ ನಿಯಮಗಳನ್ನು ರಚಿಸಲು ಕಠಿಣ ಪ್ರಯತ್ನ ಮಾಡಬೇಕು. ಜನರಿಗೆ ಕಷ್ಟಕರವಾದ ಮತ್ತು ನಿರಾಶದಾಯಕ ನಿಯಮಗಳನ್ನು ರಚಿಸಬಾರದು. ಅನ್ಯಾಯ ಮತ್ತು ದೌರ್ಜನ್ಯವನ್ನು ಅಳಿಸಿ ಬಿಡಬೇಕು ಮತ್ತು ನಿಜವಾದ ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸಬೇಕು.

## ಲೋಕ ತನ್ನ ಸೃಷ್ಟಿಕರ್ತನನ್ನು ಗುರುತಿಸಬೇಕು

"ಇದಕ್ಕಿರುವ ಉತ್ತಮ ಮಾರ್ಗ ಸೃಷ್ಟಿಕರ್ತನಾದ ದೇವನನ್ನು ಲೋಕ ಗುರುತಿಸಬೇಕು ಎಂಬುದಾಗಿದೆ. ಎಲ್ಲ ರೀತಿಯ ನಿಷ್ಠೆಗಳು ದೇವನೊಂದಿಗೆ ಇರುವ ನಿಷ್ಠೆಯೊಂದಿಗೆ ಜೋಡಿಸಲ್ಪಡಬೇಕು. ಹೀಗೆ ಮಾಡಲು ಸಾಧ್ಯವಾದರೆ ಅತ್ಯುನ್ನತ ಮಟ್ಟದ ದೇಶನಿಷ್ಠೆಯು ಎಲ್ಲ ದೇಶಗಳಲ್ಲಿ ಸ್ಥಾಪಿತವಾಗುವುದನ್ನು ನಾವು ಕಾಣುವೆವು. ಲೋಕದಾದ್ಯಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗುವ ಮಾರ್ಗಗಳು ತೆರೆದುಕೊಳ್ಳುವುವು."

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋನ್ನತ ಜಾಗತಿಕ ನಾಯಕರೂ ಪಂಚಮ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಜರ್ಮನಿಯ ಮಿಲಿಟರಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಮಾಡಿದ ಭಾಷಣದಿಂದ ಮೇಲೆ ನೀಡಲಾದ

**17ನೇ ಪುಟಕ್ಕೆ**

# ಧರ್ಮದಲ್ಲಿ ಬಲಾತ್ಕಾರವಿಲ್ಲ

♦ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

ಒಂದು ಧರ್ಮ ತಾನು ಸಾರ್ವಲೌಕಿಕವೆಂದೂ ಅಂತರ್ರಾಷ್ಟ್ರೀಯವೆಂದೂ ಜಾಗತಿಕವೆಂದೂ ವಾದಿಸಿ ಯಾವುದೇ ಸಂಘರ್ಷಕ್ಕೆ ಎಡೆಕೊಡದಿರುವುದು ಹೇಗೆ? ಸಾರ್ವಲೌಕಿಕವಾದ ಸಂದೇಶವನ್ನು ಹೊಂದಿರುವ ಧರ್ಮ, ಜಗತ್ತಿನ ಮಾನವರನ್ನೆಲ್ಲ ಒಂದು ಪತಾಕೆಯಡಿಯಲ್ಲಿ ಒಗ್ಗೂಡಿಸಲು ಆಶಿಸುವ ಧರ್ಮ ತನ್ನ ಸಂದೇಶವನ್ನು ಪ್ರಚಾರಗೊಳಿಸಲು ಬಲಪ್ರಯೋಗ ಮಾಡುವ ಬಗ್ಗೆ ಒಂದು ಕ್ಷಣದಷ್ಟು ಸಮಯವಾದರೂ ಯೋಚಿಸಲು ಸಾಧ್ಯವಿದೆಯೇ?

**ಖಡ್ಗಗಳು ಭೂಪ್ರದೇಶಗಳನ್ನು ಜಯಿಸಬಲ್ಲವು ಆದರೆ ಹೃದಯಗಳನ್ನಲ್ಲ. ಬಲಪ್ರಯೋಗವು ತಲೆಯನ್ನು ಬಾಗಿಸಬಲ್ಲದು ಆದರೆ ಮನಸ್ಸನ್ನಲ್ಲ.**

ಇಸ್ಲಾಮ್ ತನ್ನ ಸಂದೇಶವನ್ನು ಪ್ರಚಾರಗೊಳಿಸಲು ಖಡ್ಗವನ್ನು ಬಳಸಲು ಅನುಮತಿ ನೀಡುವುದಿಲ್ಲ. ಅದು ಹೀಗೆ ಘೋಷಿಸಿದೆ: "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ. ಖಂಡಿತವಾಗಿಯೂ ಸನ್ಮಾರ್ಗವು ದುರ್ಮಾರ್ಗದಿಂದ ಭಿನ್ನವಾಗಿದೆ." (ಪವಿತ್ರ ಖುರ್‌ಆನ್ 2:257).

ಯಾವುದೇ ರೀತಿಯ ಬೆದರಿಕೆಯ ಆವಶ್ಯಕತೆ ಇಲ್ಲ. ಸತ್ಯ ಎಲ್ಲಿದೆ ಎಂದು ತೀರ್ಮಾನಿಸಲು ಮನುಷ್ಯನಿಗೆ ಸ್ವಾತಂತ್ರ್ಯ ನೀಡಬೇಕು. ಸಮಾಜ ಸುಧಾರಣೆಗೆ ಬಲಪ್ರಯೋಗ ಮಾಡುವುದನ್ನು ಸ್ಪಷ್ಟವಾಗಿ ತಡೆದು ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಆಜ್ಞಾಪಿಸಿದನು. ಅವರು ಸುಧಾರಕರ ಸ್ಥಾನವನ್ನು ಮಾತ್ರ ಹೊಂದಿರುವುದಾಗಿ ಸ್ಪಷ್ಟವಾಗಿ ಅಲ್ಲಾಹನು ಈ ಕೆಳಗಿನ ವಚನದಲ್ಲಿ ಹೇಳಿರುವನು: "ಆದ್ದರಿಂದ ನೀನು ಉಪದೇಶಿಸು; ನೀನಾದರೋ ಕೇವಲ ಉಪದೇಶಕನಾಗಿರುವೆ. ನೀನು ಅವರ ಮೇಲೆ ಕಾವಲುಗಾರನಲ್ಲ" (ಪವಿತ್ರ ಖುರ್‌ಆನ್ 88:22,23).

ಇದೇ ವಿಷಯವನ್ನು ಮುಂದುವರಿಸಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಹೀಗೆ ನೆನಪಿಸಿಕೊಡಲಾಗಿದೆ: "ಇನ್ನು ಅವರು ವಿಮುಖರಾಗಿ ಹೋಗುವರಾದರೆ, ನಾವು ನಿನ್ನನ್ನು ಅವರ ಕಾವಲುಗಾರನಾಗಿ ನೇಮಿಸಿಲ್ಲ. ಸಂದೇಶವನ್ನು ತಲಪಿಸುವುದು ಮಾತ್ರವೇ ನಿನ್ನ ಕರ್ತವ್ಯ." (ಪವಿತ್ರ ಖುರ್‌ಆನ್ 42:49).

ಹಝ್ರತ್ ಪೈಗಂಬರರ(ಸ) ಕರ್ತವ್ಯ ಸಂದೇಶವನ್ನು ತಲಪಿಸುವುದು ಮಾತ್ರವೆಂದೂ ಆ ಸಂದೇಶವನ್ನು ಪ್ರಭಾವಶಾಲಿಯನ್ನಾಗಿ ಮಾಡುವ ವಿಷಯವನ್ನು ಅಲ್ಲಾಹನಿಗೆ ವಹಿಸಿ ಕೊಡಬೇಕೆಂದೂ ಈ ವಚನದಲ್ಲಿ ಆದೇಶಿಸಲಾಗಿದೆ.

ಹೊಸ ಸಿದ್ಧಾಂತದ ಪ್ರಚಾರ ನಡೆಸುವಾಗ ಜಗಳಗಳು ತಲೆದೋರಿ ಹಿಂಸಾತ್ಮಕ ಪ್ರತಿಕ್ರಿಯೆ ಉಂಟಾದರೂ ಸಹನೆದೋರಬೇಕೆಂದು ಇಸ್ಲಾಮ್ ತನ್ನ ಅನುಯಾಯಿಗಳಿಗೆ ಶಕ್ತಿಯುತವಾಗಿ ಉಪದೇಶಿಸುತ್ತದೆ. ಜಗತ್ತಿಗೆ ಇಸ್ಲಾಮಿನ ಸಂದೇಶ ತಲಪಿಸುವಾಗ ಪಾಲಿಸಬೇಕಾದ ನಡೆವಳಿಕೆ ಕ್ರಮಗಳ ಬಗ್ಗೆ ಇಸ್ಲಾಮ್ ಸ್ಪಷ್ಟವಾಗಿ ಆದೇಶಿಸುತ್ತದೆ. ಇದಕ್ಕೆ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿರುವ ಅನೇಕ ವಚನಗಳಿಂದ ಈ ಕೆಳಗಿನ ಕೆಲವನ್ನು ಈ ವಿಷಯವನ್ನು ಚಿತ್ರೀಕರಿಸಲು ಆಯ್ಕೆ ಮಾಡಲಾಗಿದೆ:

"ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದು ಅವನು ಚೆನ್ನಾಗಿ ತಿಳಿದಿರುತ್ತಾನೆ." (16:126).

ಇನ್ನೊಂದು ವಚನ: "ಒಳಿತಿನ ಮೂಲಕ ನೀನು ಕೆಡುಕನ್ನು ದೂರಮಾಡು. ಅವರು ಹೇಳುವ ವಿಚಾರಗಳನ್ನೆಲ್ಲ ನಾವು ಚೆನ್ನಾಗಿ ಬಲ್ಲೆವು." (23:97).

ಒಳಿತು ಎಂದು ಭಾಷಾಂತರಿಸಲಾದ ಅರಬಿ ಪದ **ಅಹ್‌ಸನ್** ಎಂದಾಗಿದೆ. ಇದರ ಅರ್ಥ ಅತ್ಯುತ್ತಮವಾದುದು, ಅತ್ಯಂತ ಆಕರ್ಷಕವಾದುದು ಮತ್ತು ಸುಂದರವಾಗಿರುವುದು ಎಂದಾಗಿದೆ.

ಸತ್ಯ ವಿಶ್ವಾಸಿಗಳು ಸಂದೇಶ ನೀಡುವಾಗ ಅನುಸರಿಸಬೇಕಾದ ವರ್ತನೆಯ ರೀತಿಯ ಬಗ್ಗೆ ಪವಿತ್ರ ಖುರ್‌ಆನ್ ಇನ್ನೊಂದು ವಚನದಲ್ಲಿ ಹೀಗೆ ಹೇಳಿದೆ: "ನಾವು ಆ ಕಾಲಘಟ್ಟವನ್ನು ಸಾಕ್ಷಿಯಾಗಿ ಕರೆಯುತ್ತೇವೆ. ಆಗ ಮಾನವರೆಲ್ಲರೂ ನಷ್ಟ ಹೊಂದಿದವರಾಗಿರುವರು – ವಿಶ್ವಾಸ ಹೊಂದಿ ಸತ್ಕರ್ಮ ನಿರತರಾಗಿದ್ದು ಸತ್ಯಕ್ಕೋಸ್ಕರ ಪರಸ್ಪರ ಉಪದೇಶಿಸುವವರೂ ತಾಳ್ಮೆಗೋಸ್ಕರ ಅನ್ಯೋನ್ಯ ಉಪದೇಶಿಸುವವರೂ ಹೊರತು." (103:2–4).

ಇನ್ನೊಂದು ವಚನ ಹೀಗಿದೆ: "ಹಾಗೂ ಅವನು ಸತ್ಯ ವಿಶ್ವಾಸ ಹೊಂದಿದವರಲ್ಲಿ ಸೇರಿದವನಾಗಿರಬೇಕು; ಅವನು ಸಹನೆದೋರಲು ಪರಸ್ಪರ ಉಪದೇಶಿಸುವ ಮತ್ತು ಕರುಣೆದೋರಲು ಅನ್ಯೋನ್ಯ ಬೋಧಿಸುವ ಜನರಲ್ಲಿ ಸೇರಿದವನೂ ಆಗಿರಬೇಕು." (90:18).

## ಯೋಗ್ಯತೆಯುಳ್ಳವರು ಬದುಕಿ ಉಳಿಯುವರು

ಪವಿತ್ರ ಖುರ್‌ಆನ್ ಪ್ರಕಾರ ಒಂದು ಸಂದೇಶ ಬಾಕಿಯಾಗಿ ಉಳಿಯುವುದು ಮತ್ತು ಅದರ ಅಂತಿಮ ಜಯ ಸಾಧ್ಯವಾಗುವುದು ಆ ಸಂದೇಶದಲ್ಲಿ ಅಡಕವಾಗಿರುವ ವಾದಗಳ ಶಕ್ತಿ ಸಾಮರ್ಥ್ಯಗಳಿಂದಲೇ ಹೊರತು ಅದು ಬಳಸಬಹುದಾದ ಲೌಕಿಕ ಸಾಮಗ್ರಿಗಳ ಶಕ್ತಿಯ ಮೂಲಕವಲ್ಲ. ಈ ವಿಷಯದ ಬಗ್ಗೆ ಪವಿತ್ರ ಖುರ್‌ಆನ್ ಸ್ಪಷ್ಟವಾಗಿ ಒತ್ತಿ ಹೇಳಿದೆ. ಸತ್ಯವನ್ನು ನಾಶಮಾಡಲು ಮತ್ತು ಸುಳ್ಳನ್ನು ಬೆಂಬಲಿಸಲು ಅತ್ಯಂತ ಬಲಶಾಲಿಯಾದ ಶಕ್ತಿಯನ್ನು ಬಳಸಿದರೂ ಅಂತಹ

ಪ್ರಯತ್ನಗಳು ಖಂಡಿತವಾಗಿಯೂ ಸೋಲಿಸಲ್ಪಡುವುವು ಮತ್ತು ಅದಕ್ಕೆ ಕಾರ್ಯಸಾಧನೆ ಅಸಾಧ್ಯವಾಗುವುದು. ಲೌಕಿಕ ಆಯುಧಗಳ ಶಕ್ತಿ ಪ್ರಯೋಗಗಳ ಮೇಲೆ ಬುದ್ಧಿಯು ಯಾವಾಗಲೂ ಜಯಶಾಲಿಯಾಗುವುದು. ಉದಾಹರಣೆಗೆ, ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

"ಆದರೆ (ಒಂದು ದಿನ) ತಾವು ಅಲ್ಲಾಹನನ್ನು ಸಂಧಿಸಲಿದ್ದೇವೆಂದು ದೃಢವಾಗಿ ನಂಬುವವರು ಹೇಳಿದರು: 'ಎಷ್ಟೆಷ್ಟೋ ಸಣ್ಣ ಪಂಗಡಗಳು ಅಲ್ಲಾಹನ ಆಜ್ಞೆಯಂತೆ ದೊಡ್ಡ ಪಂಗಡಗಳನ್ನು ಜಯಿಸಿವೆ. ಅಲ್ಲಾಹನು ಸಹನಶೀಲರ ಜೊತೆಗಿರುತ್ತಾನೆ' " (2:250).

ಇಸ್ಲಾಮ್ ಧರ್ಮದ ಶ್ರೇಷ್ಠತೆಯ ಮೇಲೆ ಜಯಗಳಿಸುವ ಕಲ್ಪನೆಯನ್ನು ಮೇಲಿನ ವಚನದಲ್ಲಿ ಪ್ರಸ್ತಾಪಿಸಲಾದ ದೈವಿಕ ಆಜ್ಞೆಯ ಬೆಳಕಿನಲ್ಲಿ ಮನವರಿಕೆ ಮಾಡಿಕೊಳ್ಳಬೇಕು.

ಖುರ್‌ಆನಿನ ಇನ್ನೊಂದು ವಚನದಲ್ಲಿ ಹೀಗೆ ಹೇಳಲಾಗಿದೆ: "ಅಲ್ಲಾಹನು ಅವರ ಬಗ್ಗೆ ಸಂತುಷ್ಟನಾಗಿರುತ್ತಾನೆ. ಅವರು ಸಹ ಅವನ ಬಗ್ಗೆ ಸಂತುಷ್ಟರಾಗಿರುತ್ತಾರೆ. ಅವರು ಅಲ್ಲಾಹನ ಪಂಗಡದವರು. ತಿಳಿದುಕೊಳ್ಳಿರಿ, ಅಲ್ಲಾಹನ ಪಂಗಡದವರೇ ವಿಜಯಶಾಲಿಗಳು." (58:23).

ಇಸ್ಲಾಮಿನ ಚರಿತ್ರೆಯ ಪ್ರಥಮ ಯುದ್ಧವಾದ ಬದ್ರ್ ಯುದ್ಧದಲ್ಲಿ ಮಕ್ಕದ ಬಹುದೈವಾರಾಧಕರ ಶಕ್ತಿ ಬಲವು ಚಿಕ್ಕ ಸಂಖ್ಯೆಯ ಮುಸ್ಲಿಮರೆದುರಿಗೆ ನಿಂತಿದ್ದಿತು. ಮುಸ್ಲಿಮರ ಸಂಖ್ಯೆ ಅವರ ಶತ್ರುಗಳಿಗಿಂತ ಎಷ್ಟೋ ಕಡಿಮೆಯಾಗಿತ್ತು. ಮುಸ್ಲಿಮರ ಆಯುಧ ಮತ್ತು ಉಪಕರಣಗಳು ಬಹಳ ಕಡಿಮೆಯಾಗಿದ್ದುವು. ಮುಸ್ಲಿಮರು ಪ್ರತಿರೋಧಕ ಯುದ್ಧ ಮಾಡಲು ನಿರ್ಬಂಧಿತರಾದರು. ಅವರು ಹೋರಾಡಿದುದು ತಮ್ಮ ಸಿದ್ಧಾಂತಗಳ ರಕ್ಷಣೆಗಾಗಿಯೇ ಹೊರತು ತಮ್ಮ ಆತ್ಮ ರಕ್ಷಣೆಗೋಸ್ಕರವಾಗಿರಲಿಲ್ಲ. ಇದರ ಬಗ್ಗೆ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಅಲ್ಲಾಹನು ತಾನು ನಿರ್ಧರಿಸಿದ್ದು ನೆರವೇರುವಂತಾಗಲು ಹೀಗೆ ಸಂಭವಿಸಿತು – ದೃಷ್ಟಾಂತ ಮೂಲಕ ನಾಶ ಹೊಂದಬೇಕಾದವನು ನಾಶ ಹೊಂದಲಿಕ್ಕೂ ದೃಷ್ಟಾಂತ ಮೂಲಕ ಬದುಕಬೇಕಾದವನು ಬದುಕಲಿಕ್ಕೂ. ನಿಶ್ಚಯವಾಗಿಯೂ ಅಲ್ಲಾಹನು ಎಲ್ಲವನ್ನು ಆಲಿಸುವವನೂ ಎಲ್ಲ ಬಲ್ಲವನೂ ಆಗಿದ್ದಾನೆ." (8:43).

ಮನುಷ್ಯನ ಜೀವ ವಿಕಾಸದಲ್ಲಿ ಈ ಶಾಶ್ವತ ಸಿದ್ಧಾಂತವು ಅತ್ಯಂತ ಮುಖ್ಯ ಪಾತ್ರ ವಹಿಸಿದೆ. ಅತ್ಯಂತ ಶಕ್ತಿವಂತರು ಬದುಕುಳಿಯುತ್ತಾರೆ ಎಂಬುದೇ ಈ ಸಂದೇಶದ ಮುಖ್ಯ ತತ್ವವಾಗಿದೆ. ಇದು ವಾಸ್ತವಿಕವಾಗಿ ಜೀವ ವಿಕಾಸ ಪ್ರಕ್ರಿಯೆಯ ವಿಧಾನವಾಗಿದೆ.

## ಅಭಿಪ್ರಾಯ ಸ್ವಾತಂತ್ರ್ಯ

ಅಭಿಪ್ರಾಯ ಸ್ವಾತಂತ್ರ್ಯವು ಸಂದೇಶಗಳ ಪ್ರಚಾರಕ್ಕೆ ಮತ್ತು ಮನುಷ್ಯನ ಗೌರವವನ್ನು ಪುನಃ ಸ್ಥಾಪಿಸಲು ಅತ್ಯಾವಶ್ಯಕವಾದುದಾಗಿದೆ. ಮನುಷ್ಯನ ಗೌರವವನ್ನು ಪುನಃ ಸ್ಥಾಪಿಸಲು ಮತ್ತು ರಕ್ಷಿಸಲು ಪ್ರಯತ್ನಿಸದ ಯಾವುದೇ ಧರ್ಮವು ಗಮನಾರ್ಹವಲ್ಲ.

ಇಸ್ಲಾಮ್ ಹಾಗಿರುವ ಧರ್ಮವು ಅಭಿಪ್ರಾಯ ಸ್ವಾತಂತ್ರ್ಯವನ್ನು ನಿರಾಕರಿಸುವುದು ಅಸಾಧ್ಯವಾದುದಾಗಿದೆ. ವಾಸ್ತವಿಕವಾಗಿ ಇಸ್ಲಾಮ್ ಈ ತತ್ವವನ್ನು ಎಷ್ಟು ಚೆನ್ನಾಗಿ ಮತ್ತು ಎಷ್ಟು ಧೈರ್ಯದಿಂದ ಬಳಸುತ್ತಿದೆ ಎಂದರೆ ಲೋಕದ ಬೇರೆ ಯಾವುದೇ ತತ್ವಶಾಸ್ತ್ರದಲ್ಲಿ ಅಥವಾ ಧರ್ಮದಲ್ಲಿ ಇದು ಅಪೂರ್ವವಾಗಿ ಕಾಣಿಸುತ್ತದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ:

"ಯಹೂದ ಅಥವಾ ಕ್ರಿಸ್ತೀಯನ ಹೊರತು ಯಾರೂ ಸ್ವರ್ಗವನ್ನು ಪ್ರವೇಶಿಸಲಾರ ಎಂದು ಅವರು (ಯಹೂದಿಯರೂ ಕ್ರೈಸ್ತರೂ) ಹೇಳುತ್ತಾರೆ. ಇದು ಅವರ ವ್ಯಥಾ ವ್ಯಾಮೋಹವಾಗಿದೆ. 'ನೀವು ಹೇಳುವುದು ಸತ್ಯವೆಂದಾದರೆ ಪುರಾವೆ ತನ್ನಿರಿ' ಎಂದು ಹೇಳು." (2:112).

ಇನ್ನೊಂದು ವಚನ: "ಅವನ (ಅಲ್ಲಾಹನ) ಹೊರತು ಬೇರೆ ದೇವರುಗಳನ್ನು ಅವರು ಕೈಗೊಂಡಿರುವರೇ? ಹೇಳು: 'ನಿಮ್ಮ ಸಾಕ್ಷ್ಯಾಧಾರವನ್ನು ತನ್ನಿರಿ. ಇದು (ಖುರ್‌ಆನ್) ನನ್ನ ಜೊತೆಗಿರುವವರಿಗೆ ಮಹತ್ವ ನೀಡುವಂಥದ್ದು ಹಾಗೂ ನನ್ನ ಹಿಂದಿನವರಿಗೆ ಮಹತ್ವ ನೀಡುವಂಥದ್ದೂ ಆಗಿದೆ.' ಆದರೆ ಅವರ ಪೈಕಿ ಹೆಚ್ಚಿನವರು ಸತ್ಯವನ್ನು ಮನಗಾಣುವುದಿಲ್ಲ. ಆದುದರಿಂದ ಅವರು ವಿಮುಖರಾಗುತ್ತಾರೆ." (21:25).

ಮತ್ತೊಂದು ವಚನ: "ಪ್ರತಿಯೊಂದು ಜನಾಂಗದಿಂದ ಒಂದೊಂದು ಸಾಕ್ಷಿಯನ್ನು ನಾವು ಹೊರತಂದು, 'ನಿಮ್ಮ ಪುರಾವೆಯನ್ನು ತನ್ನಿರಿ' ಎಂದು ಹೇಳುವೆವು. ಆಗ ಸತ್ಯವು ಅಲ್ಲಾಹನಿಗೆ ಸೇರಿದ್ದೆಂದು ಅವರಿಗೆ ಮನವರಿಕೆಯಾಗುವುದು. ಅವರ ಸುಳ್ಳು ಸೃಷ್ಟನೆಗಳೆಲ್ಲ ಅವರಿಂದ ದೂರ ಸರಿಯುವುವು." (28:76).

ಮಗದೊಂದು ವಚನ: "ಅಥವಾ ನಿಮ್ಮ ಬಳಿ ಸ್ಪಷ್ಟವಾದ ಆಧಾರವೇನಾದರೂ ಇದೆಯೇ? ಹಾಗಿದ್ದರೆ, ನೀವು ಸತ್ಯವಂತರೆಂದಾದರೆ, ನಿಮ್ಮ ಗ್ರಂಥವನ್ನು ತನ್ನಿರಿ." (37:157,158).

## ಪ್ರಚಲಿತ ಲೋಕ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯ ಮತ್ತು ವಿಮೋಚನೆ

ಸ್ವಾತಂತ್ರ್ಯ ಮತ್ತು ವಿಮೋಚನೆ ಎನ್ನುವುದು ಎರಡು ಮುಖ್ಯ ಘೋಷಣೆಯ ಶಬ್ದಗಳಾಗಿದ್ದು ಇವು ಲೋಕವನ್ನೆಲ್ಲ ವಿವಿಧ ಅರ್ಥಗಳಲ್ಲಿ ವಿವಿಧ ತೀವ್ರತೆಯಲ್ಲಿ ಲೋಕದ ವಿವಿಧ ಪ್ರದೇಶಗಳಲ್ಲಿ ಪ್ರಭಾವಿಸುತ್ತಾ ಇರುತ್ತವೆ. ಸ್ವಾತಂತ್ರ್ಯದ ಬಗ್ಗೆ ಮನುಷ್ಯರು ಹೆಚ್ಚಿನ ಜಾಗೃತಿಯನ್ನೂ ಹೆಚ್ಚಿನ ಪ್ರಜ್ಞೆಯನ್ನೂ ಗಳಿಸುತ್ತಾ ಇದ್ದಾರೆ ಎನ್ನುವುದು ಸಂಶಯಾತೀತವಾಗಿದೆ. ಲೋಕದ ಎಲ್ಲ ಪ್ರದೇಶಗಳಲ್ಲೂ ವಿಮೋಚನೆಯ ಆವಶ್ಯಕತೆ ಬಗ್ಗೆ ತೀವ್ರವಾಗಿ ಚಿಂತಿಸಲಾಗುತ್ತಿದೆ. ಆದರೆ ಈ ವಿಮೋಚನೆ ಯಾವುದರಿಂದ? ಅದು ವಿದೇಶಿಯರ ಆಡಳಿತೆಯಿಂದ ವಿಮೋಚನೆಯೇ, ನಿರಂಕುಶ ಪ್ರಭುಗಳಿಂದ ವಿಮೋಚನೆಯೇ, ದಬ್ಬಾಳಿಕೆಯಿಂದ ವಿಮೋಚನೆಯೇ, ಧಾರ್ಮಿಕ ಅಥವಾ ಭಂಡವಾಳಶಾಹಿ ಪ್ರಭುತ್ವದಿಂದ ವಿಮೋಚನೆಯೇ, ಕ್ರೂರವಾಗಿ ವರ್ತಿಸುವ ಪ್ರಜಾಪ್ರಭುತ್ವದಿಂದ ವಿಮೋಚನೆಯೇ, ಭ್ರಷ್ಟ ನೌಕರಶಾಹಿಯಿಂದ ವಿಮೋಚನೆಯೇ, ಶ್ರೀಮಂತ ದೇಶಗಳು ಬಡ ರಾಷ್ಟ್ರಗಳನ್ನು ಆರ್ಥಿಕವಾಗಿ ಉಸಿರುಗಟ್ಟಿಸುವುದರಿಂದ

ವಿಮೋಚನೆಯೇ, ಅಜ್ಞಾನ, ಅಂಧ ವಿಶ್ವಾಸ ಅಥವಾ ಮಾಟಗಾರಿಕೆಯಿಂದ ವಿಮೋಚನೆಯೇ?

ಈ ಎಲ್ಲ ಸಂಕಟಗಳಿಂದ ಸ್ವಾತಂತ್ರ್ಯವನ್ನು ಇಸ್ಲಾಮ್ ದೊರಕಿಸಿಕೊಡಲು ಕಾರ್ಯೋನ್ಮುಖವಾಗುತ್ತದೆ. ಆದರೆ ಅಶಾಂತಿ, ಅರಾಜಕತೆ, ಸೇಡು ತೀರಿಸುವಿಕೆ ಮತ್ತು ನಿಷ್ಕಳಂಕರಾದ ಜನರಿಗೆ ಕಷ್ಟ ಉಂಟಾಗದ ರೀತಿಯಲ್ಲಿ ಇದನ್ನು ನೆರವೇರಿಸುತ್ತದೆ. "ದೇವನು ಅಶಾಂತಿಯನ್ನು, ಅವ್ಯವಸ್ಥೆಯನ್ನು ಇಷ್ಟಪಡುವುದಿಲ್ಲ" ಎನ್ನುವುದು ಇಸ್ಲಾಮಿನ ಸಂದೇಶವಾಗಿದೆ. (ಪವಿತ್ರ ಖುರ್‌ಆನ್ 2:206).

ಇಸ್ಲಾಮ್ ಬೇರೆ ಪ್ರತಿಯೊಂದು ಧರ್ಮದ ಹಾಗೆ ಸಮತೋಲನದ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. ಸಾಮಾಜಿಕವಾಗಿ ಪರಿಪೂರ್ಣವಾದ ಸ್ವಾತಂತ್ರ್ಯ ಎನ್ನುವುದು ಪೊಳ್ಳಾದುದೂ ವಿಲಕ್ಷಣವಾದುದೂ ಅವಾಸ್ತವಿಕವಾದುದೂ ಆಗಿದೆ. ಕೆಲವು ಸಾರಿ ಸ್ವಾತಂತ್ರ್ಯವನ್ನು ಹೇಗೆ ತಪ್ಪಾಗಿ ಭಾವಿಸಿ ಬಳಸುತ್ತಾರೆಂದರೆ ಅಭಿಪ್ರಾಯ ಸ್ವಾತಂತ್ರ್ಯವೆಂಬ ಮನೋಹರ ಸಿದ್ಧಾಂತವು ವಿಕೃತಗೊಳಿಸಲ್ಪಟ್ಟು ನಿಂದಿಸಲು, ಬೈಯ್ಯಲು ಮತ್ತು ದೇವನಿಂದೆ ಮಾಡಲು ಸ್ವಾತಂತ್ರ್ಯವಾಗಿ ಬಳಸಲ್ಪಡುತ್ತದೆ.

## ದೇವನಿಂದೆ

ಮನುಷ್ಯನಿಗೆ ಅಭಿಪ್ರಾಯ ಸ್ವಾತಂತ್ರ್ಯ ನೀಡುವುದರಲ್ಲಿ ಇಸ್ಲಾಮ್ ಇತರ ಧರ್ಮಗಳಿಗಿಂತ ಒಂದು ಹೆಜ್ಜೆ ಮುಂದಿದೆ. ದೇವ ನಿಂದೆಯನ್ನು ನೈತಿಕವಾಗಿ ಅದು ಖಂಡಿಸುತ್ತಿದೆಯಾದರೂ ಅದಕ್ಕೋಸ್ಕರ ಶಾರೀರಿಕ ಶಿಕ್ಷೆಯನ್ನು ಅದು ವಿಧಿಸಿಲ್ಲ. ಆದರೆ ಇದಕ್ಕೆ ವಿರುದ್ಧವಾದ ಅಭಿಪ್ರಾಯವನ್ನು ಇಸ್ಲಾಮಿನ ಬಗ್ಗೆ ಸಮಕಾಲೀನ ಲೋಕವು ಹೊಂದಿದೆ.

ಪವಿತ್ರ ಖುರ್‌ಆನನ್ನು ಪದೇ ಪದೇ ಗಾಢವಾಗಿ ಅಧ್ಯಯನ ಮಾಡಿದ ನಂತರ ಸಹ ದೇವನಿಂದೆ ಮನುಷ್ಯನಿಂದ ಶಿಕ್ಷಿಸಲ್ಪಡಬೇಕಾದ ಅಪರಾಧವೆಂದು ಸೂಚಿಸುವ ಒಂದೇ ಒಂದು ವಚನ ಕೂಡ ಕಾಣಲು ನನಗೆ ಸಾಧ್ಯವಾಗಲಿಲ್ಲ.

ಪವಿತ್ರ ಖುರ್‌ಆನ್ ಅಸಭ್ಯ ನಡೆವಳಿಕೆಯನ್ನು ಅಥವಾ ಅಶ್ಲೀಲ ಮಾತುಗಳನ್ನು ಅಥವಾ ಅನ್ಯರನ್ನು ಕಾರಣವಿದ್ದರೂ ಇಲ್ಲದಿದ್ದರೂ ನೋಯಿಸುವುದನ್ನು ತೀವ್ರವಾಗಿ ನಿರುತ್ಸಾಹ ಪಡಿಸುತ್ತಿದೆಯಾದರೂ ಇಸ್ಲಾಮ್ ದೇವನಿಂದೆಗೆ ಇಹಲೋಕದಲ್ಲಿ ಶಿಕ್ಷೆ ನೀಡುವುದನ್ನು ಪ್ರತಿಪಾದಿಸುವುದಿಲ್ಲ. ಆ ಅಪರಾಧಕ್ಕೆ ಶಿಕ್ಷೆ ನೀಡುವ ಅಧಿಕಾರ ಯಾರಿಗೂ ನೀಡುವುದೂ ಇಲ್ಲ. ಪವಿತ್ರ ಖುರ್‌ಆನಿನಲ್ಲಿ ದೇವ ನಿಂದೆಯ ಕುರಿತು ಐದು ಕಡೆಗಳಲ್ಲಿ ಪ್ರಸ್ತಾಪಿಸಲಾಗಿದೆ:

1. ದೇವನಿಂದೆಗೆ ಸಂಬಂಧಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಅಲ್ಲಾಹನ ದೃಷ್ಟಾಂತಗಳನ್ನು ಅಲ್ಲಗಳೆಯುತ್ತಲೂ ಅಪಹಾಸ್ಯ ಮಾಡುತ್ತಲೂ ಇರುವುದನ್ನು ನೀವು ಕೇಳಿದರೆ, ಅವರು ಅದನ್ನು ಬಿಟ್ಟು ಮತ್ತೊಂದು ವಿಷಯವನ್ನು ತೊಡಗುವ ವರೆಗೆ ನೀವು ಅವರೊಂದಿಗೆ ಕುಳಿತುಕೊಳ್ಳಬಾರದೆಂದು ಅವನು (ಅಲ್ಲಾಹನು) ಈ ಗ್ರಂಥದಲ್ಲಿ ನಿಮಗೆ ಆದೇಶಿಸಿದ್ದಾನೆ. (ಅವರೊಂದಿಗೆ ನೀವು ಕುಳಿತುಕೊಂಡರೆ) ಖಂಡಿತವಾಗಿಯೂ ನೀವು ಸಹ ಅವರಂತೆಯೇ (ಎಂದು ಪರಿಗಣಿಸಲಾಗುವುದು). ನಿಸ್ಸಂದೇಹವಾಗಿಯೂ ಅಲ್ಲಾಹನು ಕಪಟ ವಿಶ್ವಾಸಿಗಳನ್ನೂ ಅವಿಶ್ವಾಸಿಗಳನ್ನೂ ನರಕದಲ್ಲಿ ಒಟ್ಟು ಸೇರಿಸುವನು." (4:141).

"ನಮ್ಮ ದೃಷ್ಟಾಂತಗಳ ಕುರಿತು (ವಿಮರ್ಶೆ ಮಾಡುತ್ತಾ) ನಿರರ್ಥಕವಾಗಿ ಮಾತನಾಡುವವರನ್ನು ನೀನು ಕಂಡರೆ ಅವರು ಬೇರೊಂದು ಮಾತುಕತೆಯಲ್ಲಿ ತೊಡಗುವ ವರೆಗೆ ನೀನು ಅವರಿಂದ ಅಗಲಿ ನಿಲ್ಲು. ಶೈತಾನನು ಯಾವಾಗಲಾದರೂ ನಿನಗೆ ಮರೆವು ಉಂಟಾಗುವಂತೆ ಮಾಡಿದರೆ ನೆನಪುಂಟಾದ ನಂತರ ನೀನು ಅಧರ್ಮಿಗಳೊಂದಿಗೆ ಕುಳಿತುಕೊಳ್ಳಬಾರದು." (6:69).

ದೇವನಿಂದೆಯಂತಹ ವಿಕೃತ ರೂಪಕ್ಕೆ ಎಷ್ಟು ಸುಂದರವಾದ ಪ್ರತಿಕ್ರಿಯೆ! ದೇವನಿಂದೆ ಮಾಡುವವನಿಗೆ ಶಿಕ್ಷೆ ನೀಡುವ ಅಧಿಕಾರ ಇಸ್ಲಾಮ್ ಯಾವ ಮನುಷ್ಯನಿಗೂ ನೀಡುವುದಿಲ್ಲ. ಧಾರ್ಮಿಕ ಮೌಲ್ಯಗಳನ್ನು ಪರಿಹಾಸ ಮಾಡುವ ಸಭೆಗಳಿಂದ ಸತ್ಯ ವಿಶ್ವಾಸಿಗಳು ಹೊರಗೆ ಹೋಗಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಶಿಕ್ಷೆ ನೀಡುವ ವಿಷಯ ಬಿಡಿ, ದೇವ ನಿಂದಕರನ್ನು ಸ್ಥಿರವಾಗಿ ಬಹಿಷ್ಕರಿಸಬೇಕೆಂದು ಕೂಡ ಇಸ್ಲಾಮ್ ಹೇಳುವುದಿಲ್ಲ. ದೇವ ನಿಂದಕರನ್ನು ಬಹಿಷ್ಕರಿಸುವುದು ಅವರು ನಿಂದಿಸುವ ಕಾಲಕ್ಕೆ ಮಾತ್ರ ಸೀಮಿತವಾಗಿದೆ ಎಂದು ಪವಿತ್ರ ಖುರ್‌ಆನ್ ಬಹಳ ಸ್ಪಷ್ಟವಾಗಿ ಹೇಳುತ್ತದೆ.

2. ಪವಿತ್ರ ಖುರ್‌ಆನಿನ ಅಲ್ ಅನ್‌ಆಮ್ ಎಂಬ ಅಧ್ಯಾಯದಲ್ಲಿ ದೇವನನ್ನು ಮಾತ್ರವಲ್ಲ ವಿಗ್ರಹಗಳನ್ನೂ ಕಾಲ್ಪನಿಕ ಪ್ರತಿಬಿಂಬಗಳನ್ನೂ ಕೂಡ ನಿಂದಿಸಬಾರದೆಂದು ಹೇಳಿದೆ. ಪವಿತ್ರ ಖುರ್‌ಆನಿನ ಉಪದೇಶಗಳ ಸೌಂದರ್ಯದಿಂದ ನಾವು ಭಾವ ಪರವಶರಾಗುತ್ತೇವೆ. ಈ ವಚನ ನೋಡಿರಿ:

"ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುವವರನ್ನು ನೀವು ಹೀಯಾಳಿಸಬೇಡಿರಿ. ಆಗ ವಿರೋಧದಿಂದ ಅವರು ಸಹ ತಿಳುವಳಿಕೆಯಿಲ್ಲದೆ ಅಲ್ಲಾಹನನ್ನು ನಿಂದಿಸುವರು. ಹೀಗೆ ನಾವು ಪ್ರತಿಯೊಂದು ಸಮುದಾಯದವರಿಗೂ ಅವರ ಕೃತ್ಯವನ್ನು ಚಲೋದಾಗಿ ತೋರಿಸಿಕೊಟ್ಟಿದ್ದೇವೆ. ಆ ಮೇಲೆ ಅವರ ಪ್ರಭುವಿನ ಕಡೆಗೆಯೇ ಅವರ ಮರಳಿಕೆಯಾಗಿದೆ. ಆಗ ಅವರ ಕೃತ್ಯಗಳ ಬಗ್ಗೆ ಅವರಿಗೆ ಅವನು ವಿವರಿಸಿಕೊಡುವನು." (6:109).

ಮೇಲೆ ಉಲ್ಲೇಖಿಸಿದ ವಚನದಲ್ಲಿ ಮುಸ್ಲಿಮರನ್ನು ಸಂಬೋಧಿಸಲಾಗಿದೆ. ವಿಗ್ರಹಗಳನ್ನೂ ಕಾಲ್ಪನಿಕ ದೇವರುಗಳನ್ನೂ ನಿಂದಿಸಬಾರದೆಂದು ಮುಸ್ಲಿಮರಿಗೆ ಆದೇಶಿಸಲಾಗಿದೆ. ಯಾರಾದರೂ ನಿಂದಿಸುವವರಾದರೆ ಆ ವಿಗ್ರಹಾರಾಧಕರು ಏಕದೇವನನ್ನು ನಿಂದಿಸಿ ಪ್ರತಿಭಟಿಸುವರು ಎಂದು ಎಚ್ಚರಿಸಲಾಗಿದೆ. ದೇವನಿಂದನೆಯ ಬಗ್ಗೆ ಸೈದ್ಧಾಂತಿಕ ನಿಲುವನ್ನು ಪ್ರಕಟಿಸುವಾಗ ದೇವನಿಂದೆಯನ್ನೂ ವಿಗ್ರಹಗಳ ನಿಂದೆಯನ್ನೂ ಸಮಾನವಾಗಿ ಪ್ರಸ್ತಾಪಿಸಲಾಗಿದೆ. ಆದರೆ ಯಾವುದೇ ಶಾರೀರಿಕ ಶಿಕ್ಷೆಯನ್ನು ಇದಕ್ಕೆ ವಿಧಿಸಲಾಗಿಲ್ಲ.

ಈ ಉಪದೇಶದ ನೀತಿಪಾಠವು ಬುದ್ಧಿ ವೈಭವದಿಂದ ಭರಿತವಾಗಿದೆ. ಒಬ್ಬನು ಇನ್ನೊಬ್ಬನ ಆಧ್ಯಾತ್ಮಿಕ ಭಾವನೆಗೆ ನೋವನ್ನುಂಟುಮಾಡುವನಾದರೆ ನೋವನ್ನು ಅನುಭವಿಸಿದವನು ಅದಕ್ಕೆ ಅದೇ ರೀತಿಯಲ್ಲಿ ಪ್ರತಿಕ್ರಿಯೆ ನೀಡಬಹುದಾಗಿದೆ. ಇಲ್ಲಿ

ಆಧ್ಯಾತ್ಮಿಕ ಭಾವನೆ ಸರಿಯೋ ತಪ್ಪೋ ಎಂಬ ಪ್ರಶ್ನೆ ಉದಿಸಲಾರದು. ಆದರೆ ಯಾರಿಗೂ ಬೇರೆ ರೀತಿಯಲ್ಲಿ ಪ್ರತಿಕ್ರಿಯೆ ಸೂಚಿಸುವ ಅನುಮತಿ ಇರುವುದಿಲ್ಲ. ಇದರಿಂದ ತಿಳಿಯುವುದೇನೆಂದರೆ, ಆಧ್ಯಾತ್ಮಿಕ ಅಪರಾಧಗಳಿಗೆ ಆಧ್ಯಾತ್ಮಿಕವಾದ ಪ್ರತಿಕ್ರಿಯೆ ನೀಡಬೇಕು, ಶಾರೀರಿಕ ಅಪರಾಧಕ್ಕೆ ಶಾರೀರಿಕವಾಗಿ, ಆದರೆ ಅತಿರೇಕವಿಲ್ಲದೆ ಸೇಡು ತೀರಿಸಬಹುದಾಗಿದೆ.

3. ದೇವನಿಂದೆಯ ಇನ್ನೊಂದು ಪ್ರಸ್ತಾಪ ಯೇಸು ಕ್ರಿಸ್ತರ (ಈಸಾ ಮಸೀಹರ) ಬಗ್ಗೆ ಮತ್ತು ಅವರ ತಾಯಿ ಮೇರಿ (ಮರ್‌ಯಮರ) ಬಗ್ಗೆಯಾಗಿದೆ. ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ಅವರ ಅವಿಶ್ವಾಸ ಮತ್ತು ಮರ್ಯಮಳ ಹೆಸರಿನಲ್ಲಿ ಗುರುತರವಾದ ಅಪವಾದ ಹೊರಿಸುವ ಕಾರಣದಿಂದಲೂ" (4:157).

ಪವಿತ್ರ ಖುರ್‌ಆನಿನ ಈ ವಚನ ಈಸಾ ಮಸೀಹರ ಕಾಲದ ಯಹೂದಿಯರ ಚಾರಿತ್ರಿಕ ಅಭಿಪ್ರಾಯದ ಬಗ್ಗೆ ಪ್ರಸ್ತಾಪಿಸುತ್ತದೆ. ಮರ್‌ಯಮರನ್ನು ಚಾರಿತ್ರ್ಯಹೀನೆ ಎಂದೂ ಈಸಾ ಮಸೀಹರನ್ನು ವ್ಯಭಿಚಾರ ಪುತ್ರನೆಂದೂ ಹೇಳಿದ ಯಹೂದಿಯರು ಗುರುತರವಾದ ನಿಂದೆ ಮಾಡಿರುವರೆಂದು ಪವಿತ್ರ ಖುರ್‌ಆನ್ ಹೇಳುತ್ತದೆ.

ಅರಬಿ ಭಾಷೆಯಲ್ಲಿ ಬುಹ್‌ತಾನನ್ ಅಝೀಮ (ಗುರುತರವಾದ ಅಪವಾದ ಎಂದು ಭಾಷಾಂತರಿಸಲಾಗಿದೆ) ಎಂದು ಹೇಳಿ ಯಹೂದಿಯರು ಬಹಳ ಘೋರ ಅಪರಾಧ ಮಾಡಿದ್ದಾರೆ ಎಂದು ಪ್ರಕಟಿಸಲಾಗಿದೆ. ಆದರೆ ಅವರ ಈ ಅಪರಾಧಕ್ಕೆ ಶಾರೀರಿಕ ಶಿಕ್ಷೆಯನ್ನು ಸೂಚಿಸಿಲ್ಲ ಎನ್ನುವುದು ಗಮನಾರ್ಹವಾಗಿದೆ.

4. ಗಮನಾರ್ಹವಾದ ವಿಷಯವೇನೆಂದರೆ, ಈಸಾ ಮಸೀಹರನ್ನೂ ಅವರ ತಾಯಿ ಮರ್‌ಯಮರನ್ನೂ ಯಹೂದಿಯರು ನಿಂದಿಸಿ ಗುರುತರ ಅಪರಾಧ ಮಾಡಿದ್ದಾರೆಂದು ಪವಿತ್ರ ಖುರ್‌ಆನ್ ಹೇಳಿರುವುದರ ಜೊತೆಗೆ ಒಬ್ಬ ಮಾನವ ಸ್ತ್ರೀಯಿಂದ ದೇವನಿಗೆ ಒಬ್ಬ ಪುತ್ರನು ಜನಿಸಿದನೆಂದು ಹೇಳಿದುದರಿಂದ ಕ್ರಿಸ್ತೀಯರು ಸಹ ದೇವನಿಂದೆ ಮಾಡಿರುವರೆಂದು ಪವಿತ್ರ ಖುರ್‌ಆನ್ ಹೇಳಿದೆ. ಕ್ರಿಸ್ತೀಯರು ಇಂತಹ ಪ್ರಸ್ತಾಪ ಮಾಡುವುದು ಸಹ ಗುರುತರವಾದ ಅಪರಾಧವೆಂದು ಪವಿತ್ರ ಖುರ್‌ಆನ್ ಈ ಕೆಳಗೆ ಉಲ್ಲೇಖಿಸಲಾಗುವ ವಚನದಲ್ಲಿ ಹೇಳಿದ್ದರೂ ಈ ಅಪರಾಧಕ್ಕೆ ಯಾವುದೇ ಶಾರೀರಿಕ ಶಿಕ್ಷೆಯನ್ನು ವಿಧಿಸಿಲ್ಲ. ಈ ಅಪರಾಧಕ್ಕೆ ಶಿಕ್ಷೆ ನೀಡುವ ಅಧಿಕಾರ ಯಾರಿಗೂ ನೀಡಿಯೂ ಇಲ್ಲ. ಪವಿತ್ರ ಖುರ್‌ಆನಿನ ವಚನ ಹೀಗಿದೆ: "ಅವರಿಗಾಗಲಿ, ಅವರ ತಂದೆ ತಾತಂದಿರಿಗಾಗಲಿ ಆ ಬಗ್ಗೆ ಏನೂ ತಿಳುವಳಿಕೆ ಇಲ್ಲ. ಅವರ ಬಾಯಿಯಿಂದ ಹೊರಡುವ ಮಾತುಗಳು ಅತಿ ಕಠೋರವಾಗಿವೆ. ಸುಳ್ಳು ಹೊರತು ಅವರು ಹೇಳುವುದಿಲ್ಲ." (18:6).

5. ಕೊನೆಯದಾಗಿ ದೇವನಿಂದೆಗೆ ಸಂಬಂಧಿಸಿ ಅತ್ಯಂತ ಸಂವೇದನಶೀಲ ವಿಷಯಕ್ಕೆ ಬರುತ್ತೇನೆ. ಮುಸ್ಲಿಮರು ಇಂದಿನ ಕಾಲದಲ್ಲಿ ಇಸ್ಲಾಮಿನ ಪ್ರವಾದಿಯನ್ನು ನಿಂದಿಸುವ ಬಗ್ಗೆ ಎಷ್ಟು ಸಂವೇದನಶೀಲರಾಗಿರುವರೆಂದರೆ ಅವರು ಬೇರೆ ಯಾರ ನಿಂದೆಯ ಬಗ್ಗೆಯೂ ತಲೆಕೆಡಿಸಿಕೊಳ್ಳುವುದಿಲ್ಲ – ಏಕ ದೇವನ ನಿಂದೆ ಬಗ್ಗೆ ಕೂಡ.

ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಕಪಟ ವಿಶ್ವಾಸಿಗಳ ನಾಯಕನಾದ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ನಿಂದಿಸಿದುದು ಎಷ್ಟು ಗಂಭೀರ ಅಪರಾಧವಾಗಿತ್ತೆಂದರೆ ಅದರ ಬಗ್ಗೆ ಪವಿತ್ರ ಖುರ್‌ಆನ್ ಸಹ ಪ್ರಸ್ತಾಪಿಸಿದೆ. ಒಂದು ಯುದ್ಧಕ್ಷೇತ್ರದಿಂದ ಮರಳಿ ಬರುವಾಗ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್ ತನ್ನ ಸಂಗಡಿಗರೊಂದಿಗೆ ಹೇಳಿದನು: "ನಾವು ಮದೀನಕ್ಕೆ ಮರಳಿದ ನಂತರ ಅತ್ಯಂತ ಮಹನೀಯ ವ್ಯಕ್ತಿಯೊಬ್ಬನು ಅತ್ಯಂತ ಹೀನನಾದ ಒಬ್ಬನನ್ನು ಅಲ್ಲಿಂದ ಹೊರಕ್ಕಟ್ಟುವನು."

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: " 'ನಾವು ಮದೀನಕ್ಕೆ ಹಿಂತೆರಳಿದರೆ ಅತ್ಯಂತ ಮಹನೀಯ ವ್ಯಕ್ತಿಯೊಬ್ಬನು ಅತ್ಯಂತ ಹೀನನಾದ ಒಬ್ಬ ವ್ಯಕ್ತಿಯನ್ನು ಅಲ್ಲಿಂದ ಹೊರಕ್ಕಟ್ಟುವನು' ಎಂದು ಅವರು ಹೇಳುತ್ತಾರೆ. (ನಿಜವಾದ) ಗೌರವವಾದರೋ ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಸಲ್ಲುತ್ತದೆ. ಆದರೆ ಕಪಟವಿಶ್ವಾಸಿಗಳು (ಅದನ್ನು) ತಿಳಿಯುವುದಿಲ್ಲ." (63:9)

ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ಅಪಮಾನಿಸಲು ಉದ್ದೇಶಿಸಿ ಈ ನಿಂದೆಯನ್ನು ಮಾಡಲಾಗಿತ್ತೆಂದು ಎಲ್ಲರೂ ತಿಳಿದಿದ್ದರು. ಅವರು ಎಷ್ಟು ದೋಷಭರಿತರಾಗಿದ್ದರೆಂದರೆ, ಅನುಮತಿ ದೊರಕುವುದಾದರೆ ಅಬ್ದುಲ್ಲಾ ಬಿನ್ ಉಬಯ್ಯ್‌ನನ್ನು ಅವರು ಕೊಂದೇ ಬಿಡುತ್ತಿದ್ದರು. ಈ ಘಟನೆಯ ಬಗ್ಗೆ ಸತ್ಯಸಂಧವಾದ ವರದಿ ಹೀಗೆ ವಿವರಿಸುತ್ತದೆ: ಜನರೆಲ್ಲರೂ ಎಷ್ಟು ಕೋಪಾವಿಷ್ಟರಾಗಿದ್ದರೆಂದರೆ ಅಬ್ದುಲ್ಲಾ ಬಿನ್ ಉಬಯ್ಯ್‌ನ ಪುತ್ರ ಹಝ್ರತ್ ಪೈಗಂಬರರ(ಸ) ಸಮೀಪಕ್ಕೆ ಹೋಗಿ ತನ್ನ ತಂದೆಯನ್ನು ಕೊಲ್ಲಲು ತನಗೆ ಅನುಮತಿ ನೀಡಬೇಕೆಂದು ಬೇಡಿಕೊಂಡನು. ಪುತ್ರನು ಹೀಗೆ ಹೇಳಿದನು: "ಬೇರೆ ಯಾರಾದರೂ ನನ್ನ ತಂದೆಯನ್ನು ಕೊಂದರೆ ಮುಂದೆ ಯಾವಾಗಲಾದರೂ ಅಜ್ಞಾನದಿಂದ, ನನ್ನ ತಂದೆಯನ್ನು ಕೊಂದವನ ವಿರುದ್ಧ ಸೇಡು ತೀರಿಸಲು ನಾನು ಮುಂದಾಗಬಹುದು." ಶತಮಾನಗಳ ಕಾಲ ಅರಬಿಗಳ ಸಂಪ್ರದಾಯ ಹೇಗಿತ್ತೆಂದರೆ, ತಮ್ಮ ಸಂಬಂಧಿಕರಿಗೆ ಸ್ವಲ್ಪ ಮಟ್ಟಿಗೆ ನಿಂದೆ ಉಂಟುಮಾಡಿದವರ ವಿರುದ್ಧವೂ ಅವರು ಸೇಡು ತೀರಿಸಿಕೊಳ್ಳುತ್ತಿದ್ದರು. ಈ ವಿಷಯ ಪುತ್ರನ ಮನಸ್ಸಿನಲ್ಲಿದ್ದಿರಬಹುದು. ಆದರೆ ಹಝ್ರತ್ ಪೈಗಂಬರರು(ಸ) ಆತನಿಗೆ ಅನುಮತಿ ನೀಡಲಿಲ್ಲ. ಆ ಕಪಟವಿಶ್ವಾಸಿಯನ್ನು ಶಿಕ್ಷಿಸಲು ಬೇರೆ ಯಾರಿಗೂ ಅಧಿಕಾರ ನೀಡಲೂ ಇಲ್ಲ. (ಇಬ್ನು ಹಿಶಾಮರ ಅಸ್ಸೀರತುನ್ನಬವಿಯ್ಯ).

ಮದೀನಕ್ಕೆ ಮರಳಿದ ನಂತರ ಅಬ್ದುಲ್ಲಾ ಬಿನ್ ಉಬಯ್ಯ್ ಶಾಂತಿಯಿಂದ ಜೀವಿಸಿದನು. ಅವನು ಸಹಜವಾಗಿ ಮೃತನಾದಾಗ ಹಝ್ರತ್ ಪೈಗಂಬರರು(ಸ) ತನ್ನ ಅಂಗಿಯನ್ನು ಆತನ ಮೃತ ಶರೀರಕ್ಕೆ ಹೊದಿಸಲು ಆತನ ಮಗನಿಗೆ ಕೊಟ್ಟು ಜನರು ಆಶ್ಚರ್ಯಚಕಿತರಾಗುವಂತೆ ಮಾಡಿದರು. ಈ ಕೊಡುಗೆ ಎಷ್ಟು ಮಹತ್ವಪೂರ್ಣವಾಗಿತ್ತೆಂದರೆ ಪುತ್ರನಿಂದ ಅದನ್ನು ಪಡೆಯಲು ಶಿಷ್ಯರು ಅದರ ಬದಲಿಗೆ ತಮ್ಮ ಸಂಪತ್ತನ್ನು ಕೊಡಲು ಸಹ ಸಿದ್ಧರಾಗಿ ಆಶಿಸುವಂತಹದ್ದಾಗಿತ್ತು. ಇಷ್ಟುಮಾತ್ರವಲ್ಲ, ಹಝ್ರತ್ ಪೈಗಂಬರರು(ಸ) ಮೃತನಿಗೋಸ್ಕರ ಜನಾಝು ನಮಾಝ್ ಮಾಡಲು ಸಿದ್ಧರಾದರು. ಹಝ್ರತ್ ಪೈಗಂಬರರ(ಸ) ಈ ನಿರ್ಧಾರ ಶಿಷ್ಯರೆಲ್ಲರಿಗೂ ಬಹಳ

ಅತೃಪ್ತಿಕರವಾಗಿತ್ತು. ಏಕೆಂದರೆ ಅವರು ಅಬ್ದುಲ್ಲಾ ಬಿನ್ ಉಬಯ್ಯ್‌ಹಝ್ರತ್ ಪೈಗಂಬರರನ್ನು(ಸ) ಅಪಮಾನಿಸಿದುದನ್ನು ಕ್ಷಮಿಸಲು ಸಿದ್ಧರಾಗಿರಲಿಲ್ಲ. ಹಝ್ರತ್ ಉಮರ್(ರ) – ಅವರು ಮುಂದೆ ಇಸ್ಲಾಮಿನ ದ್ವಿತೀಯ ಖಲೀಫರಾದರು – ಶಿಷ್ಯರ ಅಭಿಪ್ರಾಯಕ್ಕೆ ಧ್ವನಿಗೂಡಿಸಿದರು.

ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರರು(ಸ) ಜನಾಝ ನಮಾಝಿಗೆ ನಿಂತಾಗ ಹಝ್ರತ್ ಉಮರ್(ರ) ಮುಂದೆ ಬಂದು ತನ್ನ ನಿರ್ಧಾರವನ್ನು ಬದಲಾಯಿಸಲು ಹಝ್ರತ್ ಪೈಗಂಬರರೊಂದಿಗೆ(ಸ) ವಿನಂತಿಸಿದರು. ಹಝ್ರತ್ ಉಮರ್(ರ) ಪವಿತ್ರ ಖುರ್‌ಆನಿನ ಒಂದು ವಚನವನ್ನು ಉಲ್ಲೇಖಿಸಿ ಹೇಳಿದರು: ಎಪ್ಪತ್ತು ಸಾರಿ ಕಪಟ ವಿಶ್ವಾಸಿಗಳಿಗೋಸ್ಕರ ಕ್ಷಮೆ ನೀಡಲು ಪ್ರವಾದಿ(ಸ) ಪ್ರಾರ್ಥಿಸಿದರೂ ಆ ಪ್ರಾರ್ಥನೆ ಅಲ್ಲಾಹನು ಅಂಗೀಕರಿಸಲಾರನು ಎಂದು ಆ ವಚನದಲ್ಲಿದೆ. (ಎಪ್ಪತ್ತು ಎಂದರೆ ಅರಬಿ ಭಾಷೆಯ ಪ್ರಕಾರ ಅನೇಕ ಬಾರಿ ಎಂದಾಗಿದೆ).

ಹಝ್ರತ್ ಪೈಗಂಬರರು(ಸ) ಹಝ್ರತ್ ಉಮರರೊಡನೆ ಹೇಳಿದರು: "ಎಪ್ಪತ್ತು ಸಾರಿ ನಾನು ಕ್ಷಮೆಯಾಚನೆ ಮಾಡಿದರೂ ಅಲ್ಲಾಹನು ಕ್ಷಮಿಸಲಾರನು ಎಂದು ನಾನು ತಿಳಿದಿರುವೆನು. ಆದರೆ ನಾನು ಅಬ್ದುಲ್ಲಾ ಬಿನ್ ಉಬಯ್ಯ್‌ಗೋಸ್ಕರ ಎಪ್ಪತ್ತಕ್ಕಿಂತ ಹೆಚ್ಚು ಸಾರಿ ಪ್ರಾರ್ಥಿಸುವೆನು." ಅನಂತರ ಹಝ್ರತ್ ಪೈಗಂಬರರು ಅಬ್ದುಲ್ಲಾ ಬಿನ್ ಉಬಯ್ಯ್‌ಗೋಸ್ಕರ ಜನಾಝ ಪ್ರಾರ್ಥನೆಗೆ ನೇತೃತ್ವ ವಹಿಸಿದರು. (ಬುಖಾರಿ).

ಹಝ್ರತ್ ಮುಹಮ್ಮದ್ ಪೈಗಂಬರರನ್ನು(ಸ) ನಿಂದಿಸುವವರಿಗೆ ಮರಣ ದಂಡನೆ ಹೊರತು ಬೇರೆ ಅದಕ್ಕಿಂತ ಕಡಿಮೆ ಮಟ್ಟದ ಶಿಕ್ಷೆ ನೀಡಬಾರದು ಎಂದು ಕರ್ಕಶವಾಗಿ ಕೂಗುತ್ತಿರುವವರಿಗೆ ಈ ಘಟನೆ ತಕ್ಕುದಾದ ಪ್ರತ್ಯುತ್ತರ ನೀಡುತ್ತದೆ. ಹಝ್ರತ್ ಪೈಗಂಬರರ(ಸ) ಮನೋಭಾವ ಹೊಂದಿರುವ ಧರ್ಮಕ್ಕೆ ಮಾತ್ರ ಅಂತರ್ ಧರ್ಮೀಯ ಶಾಂತಿ ಲೋಕದಲ್ಲಿ ಸ್ಥಾಪಿಸಲು ಸಾಧ್ಯ.

## ಅಂತರ್ ಧರ್ಮೀಯ ಸಹಕಾರ

ಅಂತರ್ ಧರ್ಮೀಯ ಸಹಕಾರದ ನಿಟ್ಟಿನಲ್ಲೂ ಇಸ್ಲಾಮ್ ಒಂದು ಹೆಜ್ಜೆ ಮುಂದೆಯೇ ಇದೆ. ಅದು ಹೀಗೆ ಘೋಷಿಸುತ್ತದೆ: "ಒಂದು ಜನತೆ ನಿಮ್ಮನ್ನು ಪವಿತ್ರ ಮಸ್‌ಜಿದ್‌ನಿಂದ ತಡೆಗಟ್ಟಿ (ನಿಮ್ಮೊಡನೆ) ತೋರಿಸಿದ ವಿರೋಧವು ಅವರೊಡನೆ ಅನ್ಯಾಯದಿಂದ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯ ಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ." (ಪವಿತ್ರ ಖುರ್‌ಆನ್ 5:3).

ಧಾರ್ಮಿಕ ಕಾರಣದಿಂದ ದೌರ್ಜನ್ಯ ಮಾಡಿದ ಶತ್ರುಗಳ ವಿರುದ್ಧ ಕೂಡ ಅನ್ಯಾಯದಿಂದ ವರ್ತಿಸಲು ಮುಸ್ಲಿಮರನ್ನು ಪವಿತ್ರ ಖುರ್‌ಆನ್ ಅನುಮತಿಸುವುದಿಲ್ಲ.

ಮುಸ್ಲಿಮರ ವಿರುದ್ಧ ಅವಿಶ್ವಾಸಿಗಳು ನಡೆಸಿದ ಯುದ್ಧಗಳಲ್ಲಿ ನೇರವಾಗಿ ಭಾಗವಹಿಸದ ಅವಿಶ್ವಾಸಿಗಳ ಜೊತೆ ಹೇಗೆ ವರ್ತಿಸಬೇಕೆಂದು ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: "ನಿಮಗೂ ಅವರ ಪೈಕಿ ನೀವು ದ್ವೇಷಿಸುವವರಿಗೂ ಮಧ್ಯೆ ಅಲ್ಲಾಹನು (ಮುಂದೊಮ್ಮೆ) ಪ್ರೀತಿ ಹುಟ್ಟಿಸಲೂಬಹುದು. ಅಲ್ಲಾಹನು ಸರ್ವಶಕ್ತನು. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

"ಧರ್ಮದ ಕಾರಣದಿಂದ ನಿಮ್ಮೊಡನೆ ಯುದ್ಧ ಮಾಡದವರೊಡನೆ ಮತ್ತು ನಿಮ್ಮ ಮನೆಗಳಿಂದ ನಿಮ್ಮನ್ನು ಹೊರಕ್ಕಟ್ಟದವರೊಡನೆ ನೀವು ಒಳಿತಿನಿಂದಲೂ ನ್ಯಾಯಯುತವಾಗಿಯೂ ವರ್ತಿಸುವುದನ್ನು ಅಲ್ಲಾಹನು ನಿಮಗೆ ವಿರೋಧಿಸುವುದಿಲ್ಲ. ಖಂಡಿತವಾಗಿಯೂ ನ್ಯಾಯ ಪಾಲಿಸುವವರನ್ನು ಅಲ್ಲಾಹನು ಪ್ರೀತಿಸುತ್ತಾನೆ." (60:8,9).

ಮುಸ್ಲಿಮರಿಗೆ ಹೀಗೆ ಕಲಿಸಲಾಗಿದೆ: ಏಕದೇವ ವಿಶ್ವಾಸವನ್ನು ಮುಸ್ಲಿಮರೂ ಯಹೂದಿಯರೂ ಹೊಂದಿರುವುದರಿಂದ ಏಕದೇವ ವಿಶ್ವಾಸದ ಸಂದೇಶವನ್ನು ಪ್ರಚಾರಗೊಳಿಸಲು ಸಹಕಾರ ನೀಡಲು ಯಹೂದಿಯರನ್ನು ಮುಸ್ಲಿಮರು ಆಮಂತ್ರಿಸಬೇಕು. ಕೆಳಗೆ ಉಲ್ಲೇಖಿಸಲಾಗುವ ವಚನ ಸೂಚಿಸುವುದೇನೆಂದರೆ, ವಿವಿಧ ಧರ್ಮಗಳ ಮಧ್ಯೆ ಇರುವ ಸಮಾನ ವಿಚಾರಗಳನ್ನು ಮಾನವರ ಹಿತಕ್ಕೋಸ್ಕರ ಉಪಯೋಗಿಸಲು ಪರಸ್ಪರ ಸಹಕಾರ ನೀಡಬೇಕು. ಪರಸ್ಪರ ಇರುವ ಭಿನ್ನಾಭಿಪ್ರಾಯಗಳನ್ನು ಮುಂದೊಡ್ಡಿ ಸಂಘರ್ಷಕ್ಕೆ ಎಡೆಗೊಡಬಾರದು. ಪವಿತ್ರ ಖುರ್‌ಆನ್ ವಚನ ಹೀಗಿದೆ:

"ಹೇಳು: 'ಓ ಗ್ರಂಥದವರೇ, (ಕನಿಷ್ಠಪಕ್ಷ) ನಮಗೂ ನಿಮಗೂ ಮಧ್ಯೆ ಒಪ್ಪಿಗೆಯಿರುವ ವಿಚಾರದೆಡೆಗೆ – (ಅಂದರೆ) ಅಲ್ಲಾಹನಲ್ಲದೆ ಯಾರನ್ನೂ ನಾವು ಆರಾಧಿಸುವುದಿಲ್ಲ, ಅವನಿಗೆ ಯಾರನ್ನೂ ಸಹಭಾಗಿಯಾಗಿ ಭಾವಿಸಲಿಕ್ಕಿಲ್ಲ, ಅಲ್ಲಾಹನನ್ನು ಹೊರತು ನಮ್ಮಲ್ಲಿ ಕೆಲವರು ಬೇರೆ ಕೆಲವರನ್ನು ಒಡೆಯರನ್ನಾಗಿ ಪರಿಗಣಿಸಲಿಕ್ಕಿಲ್ಲ ಎಂಬ ವಿಚಾರದೆಡೆಗೆ – ಬನ್ನಿರಿ' ಅವರು ವಿಮುಖರಾದರೆ, 'ನಾವು (ಅಲ್ಲಾಹನಿಗೆ) ಸಂಪೂರ್ಣವಾಗಿ ವಿಧೇಯರಾಗಿದ್ದೇವೆ ಎಂಬುದಕ್ಕೆ ನೀವು ಸಾಕ್ಷ್ಯ ವಹಿಸಿರಿ' ಎಂದು ಹೇಳಿರಿ." (3:65).

## ಅಂತರ್ ಧರ್ಮೀಯ ಶಾಂತಿ ಸ್ಥಾಪನೆಯ ಬಗ್ಗೆ ನಿಷ್ಕರ್ಷೆ

ಲೋಕದಲ್ಲಿ ಜಾರಿಯಲ್ಲಿರುವ ನೈಜ ಧರ್ಮಗಳು ಮನುಷ್ಯನಿಗೆ ಅವನ ಚಟುವಟಿಕೆಗಳ ಎಲ್ಲ ಕ್ಷೇತ್ರಗಳಲ್ಲಿ ಅರ್ಥವತ್ತಾದ ಪಾತ್ರ ವಹಿಸಬಹುದೇ ಎಂಬುದರ ಕುರಿತು ಪರಿಶೀಲಿಸುವ ಮೊದಲು ಧರ್ಮಗಳು ತಮ್ಮೊಳಗೆ ವಿವಿಧ ವಿಭಾಗಗಳ ಜನರೊಂದಿಗೆ ಹೇಗೆ ವರ್ತಿಸುತ್ತವೆ ಎಂಬುದನ್ನು ತೀವ್ರವಾಗಿ ಪರಿಶೀಲಿಸುವುದು ಆವಶ್ಯಕವಾಗಿದೆ. ಧರ್ಮಗಳು ಅವು ಅಸ್ತಿತ್ವದಲ್ಲಿ ಇರುವ ತನಕ ಪರಸ್ಪರ ಹೊಂದಾಣಿಕೆಯಿಂದ ಜೀವಿಸಲು ಎಂದಾದರೂ ಕಲಿತುಕೊಳ್ಳುವುದೇ ಎಂಬುದನ್ನು ಸಹ ತೀರ್ಮಾನಿಸುವುದು ಆವಶ್ಯಕವಾಗಿದೆ. ಲೌಕಿಕತೆಯ ವರ್ಧಿಸುತ್ತಿರುವ ಪ್ರಭಾವದಿಂದಲೂ ಸಮಾಜವು ಆಧ್ಯಾತ್ಮಿಕ ಆನಂದದ ಗಳಿಕೆಯ ಬದಲಿಗೆ ಇಂದ್ರಿಯಗಳ ತೃಪ್ತಿಯ ಕಡೆಗೆ ತಿರುಗುತ್ತಿರುವ ಕಾರಣದಿಂದಲೂ ಧರ್ಮವನ್ನೇ ತ್ಯಜಿಸಬೇಕೆಂದೂ ಅದು ಮುಖ್ಯವಲ್ಲದ ವಿಷಯವೆಂದು

ಕಡೆಗಣಿಸಬೇಕೆಂದೂ ನಂಬಲು ಆಧಾರಾದರೂ ಮುಂದಾಗಬಹುದಾಗಿದೆ.

ಆದರೆ ಈ ನಿಷ್ಕರ್ಷೆಯನ್ನು ನಾನು ಅಂಗೀಕರಿಸುವುದಿಲ್ಲ. ಜಾಗತಿಕ ಶಾಂತಿಗೋಸ್ಕರ ಪ್ರಯತ್ನಿಸುವಾಗ ನಾವು ಆಂತರಿಕವಾಗಿಯೂ ಬಾಹ್ಯವಾಗಿಯೂ ಧಾರ್ಮಿಕ ಮನೋಭಾವವನ್ನು ಸುಧಾರಣೆ ಮಾಡುವುದಿಲ್ಲವಾದರೆ ಧರ್ಮವು ಸಮಾಜದ ಮೇಲೆ ಹಾನಿಕರವಾದ ಪ್ರಭಾವ ಬೀರುವುದು. ಸಮಾಜಕ್ಕೆ ಹಿತಕರವಾದ ಕೆಲಸಗಳಿಗೆ ಬದಲಾಗಿ ಹಾನಿಕರವಾಗಿ ಧರ್ಮ ವರ್ತಿಸುವುದು.

ಧರ್ಮವು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಮುಖ್ಯವಾಗಿ ಕಾರ್ಯನಿರತವಾಗಿರಬೇಕಾಗಿದೆ. ವಿವಿಧ ಧರ್ಮಗಳ ಮತ್ತು ಪಂಗಡಗಳ ಜನರ ಮಧ್ಯೆ ತಲೆದೋರಿರುವ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಬೇಕಾಗಿದೆ. ಸಭ್ಯತೆಯನ್ನು ಬೆಳೆಸಬೇಕಾಗಿದೆ, ಸ್ವತಃ ಜೀವಿಸಿ ಇತರರನ್ನು ಜೀವಿಸಲು ಬಿಡಬೇಕಾಗಿದೆ. ಆದರೆ ದುರದೃಷ್ಟಕರವಾಗಿ ಈಗಿನ ಕಾಲಘಟ್ಟದಲ್ಲಿ ಧರ್ಮವು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಏನಾದರೂ ಮಾಡಿದ್ದರೆ ಅದು ಬಹಳ ಚಿಕ್ಕ ಮತ್ತು ಅಪ್ರಧಾನ ಪಾತ್ರವನ್ನು ವಹಿಸಿದೆ. ಆದರೆ ಲೋಕದಲ್ಲಿ ಶಾಂತಿಭಂಗ ಮಾಡಿ ರಕ್ತಪಾತ ನಡೆಸಿ ಜನರಿಗೆ ಕಷ್ಟಗಳನ್ನು ನೀಡುವ ಕೆಲಸದ ನಿರ್ವಹಣೆಯಲ್ಲಿ ಅದು ಬಹಳ ಶಕ್ತಿಶಾಲಿಯಾಗಿದೆ. ಈ ನಿಟ್ಟಿನಲ್ಲಿ ಅವರ ಶಕ್ತಿಯನ್ನು ಕಡಿಮೆ ಅಂದಾಜು ಮಾಡಲಾಗದು. ಈ ಅತ್ಯಂತ ಮುಖ್ಯ ಸಮಸ್ಯೆ ಕಡೆಗೆ ಗಮನ ನೀಡಿ ಅದರ ತಪ್ಪುಗಳನ್ನು ತಿದ್ದುವ ತನಕ ಜಾಗತಿಕ ಶಾಂತಿಯನ್ನು ಮನಸ್ಸಿನಲ್ಲಿ ಚಿತ್ರೀಕರಿಸಲು ಸಾಧ್ಯವಾಗದು.

ಧರ್ಮದೊಳಗೆ ಇರುವ ಅಲ್ಪಸಂಖ್ಯಾತವಾದ ಒಂದು ವಿಭಾಗದ ವಿರುದ್ಧ ಜನರ ಭಾವನೆಗಳನ್ನು ಬಲವತ್ತಾಗಿ ಉದ್ರೇಕಿಸಿ ಆ ಅಲ್ಪಸಂಖ್ಯಾತ ವಿಭಾಗದವರನ್ನು ತೀವ್ರ ಕಷ್ಟಕ್ಕೆ ಗುರಿಪಡಿಸುವಂತೆ ಮಾಡುವುದು ಸಾಮಾನ್ಯವಾಗಿದೆ.

ಇಸ್ಲಾಮ್ ಧರ್ಮದ ಚರಿತ್ರೆ ಇಂತಹ ವಿಕೃತ, ಹೀನ ಘಟನೆಗಳಿಂದ ತುಂಬಿವೆ. ಶಾಂತಿಯ ಧರ್ಮವಾದ ಇಸ್ಲಾಮನ್ನು ನಿಷ್ಕಳಂಕ ವಿಶ್ವಾಸಿಗಳ ಗುಂಪುಗಳ ಶಾಂತಿಯನ್ನು ಕೆಡಿಸಲು ಬಳಸಲಾಯಿತು. ಆ ಜನರು ಇಸ್ಲಾಮ್ ಧರ್ಮದ ಅನುಯಾಯಿಗಳೇ ಆಗಿದ್ದರು. ಆದರೆ ಅವರ ವಿರೋಧಿಗಳು ಬಯಸಿದ ಹಾಗೆ ವರ್ತಿಸುತ್ತಿರಲಿಲ್ಲ. ಇಸ್ಲಾಮಿನ ಚರಿತ್ರೆಯನ್ನು ಪರಿಶೀಲಿಸುವಾಗ ಸಂಶಯರಹಿತವಾಗಿ ತಿಳಿದುಬರುವುದೇನೆಂದರೆ, ಮುಸ್ಲಿಮರನ್ನು ಹಿಂಸಾಚಾರಕ್ಕೆ ಗುರಿಪಡಿಸಲು ಇಸ್ಲಾಮನ್ನೇ ಬಳಸಲಾಯಿತು. ಮುಸ್ಲಿಮರು ಕ್ರೈಸ್ತರ ವಿರುದ್ಧ ನಡೆಸಿದ 'ಪವಿತ್ರ ಯುದ್ಧ'ಗಳಿಗಿಂತ ಮುಸ್ಲಿಮರು ಮುಸ್ಲಿಮರ ವಿರುದ್ಧ ಕಳೆದ ಹದಿನಾಲ್ಕು ನೂರು ವರ್ಷಗಳಲ್ಲಿ ನಡೆಸಿದ 'ಪವಿತ್ರ ಯುದ್ಧಗಳು' ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದುವು.

ಈ ರೀತಿಯ ಹಿಂಸಾಚಾರ ಇನ್ನೂ ಕೊನೆಗೊಂಡಿಲ್ಲ. ಪಾಕಿಸ್ತಾನದಲ್ಲಿ ಅಹ್ಮದಿಯಾ ಮುಸ್ಲಿಮರ ವಿರುದ್ಧ ನಡೆಸಲಾಗುವ ಹಿಂಸಾಚಾರಗಳು ಮತ್ತು ಶಿಯಾ ಪಂಥದವರ ವಿರುದ್ಧ ಸಹ ಆಗಾಗ ನಡೆಸಲಾಗುತ್ತಿರುವ ಹಿಂಸಾಚಾರಗಳು ಈ ದಾರುಣ ಸಮಸ್ಯೆಯನ್ನು ಲೋಕದ ಗಮನಕ್ಕೆ ತರಲು ಯೋಗ್ಯವಾಗಿವೆ. ಈ ದಾರುಣ ಸಮಸ್ಯೆ ಎಷ್ಟೋ ಮೊದಲು ನಿಶ್ಶೇಷವಾಗಬೇಕಾಗಿತ್ತು.

ಕ್ರೈಸ್ತ ಧರ್ಮದಲ್ಲಿ ಕ್ರೈಸ್ತರಿಂದ ಕ್ರೈಸ್ತರ ಮೇಲೆ ದೌರ್ಜನ್ಯ ಬಹಳ ಹಿಂದಿನ ಕಾಲದ್ದೆಂದೂ ಯುರೋಪು ಮತ್ತು ಅಮೇರಿಕದ ಚರಿತ್ರೆಯ ಭಗ್ನಾವಶೇಷಗಳಡಿಯಲ್ಲಿ ಅದು ಹೂಳಲ್ಪಟ್ಟಿವೆ ಎಂದು ತೋರಬಹುದಾದರೂ ಐಯರ್‌ಲೇಂಡ್‌ನಲ್ಲಿ ನಡೆಯುತ್ತಿರುವ ರಾಜಕೀಯ ಧಾರ್ಮಿಕ ಸಂಘರ್ಷಗಳು ಇದನ್ನು ಅಲ್ಲಗಳೆಯುತ್ತಿವೆ. ಕ್ರೈಸ್ತ ಧರ್ಮದ ವಿವಿಧ ಪಂಗಡಗಳ ಮಧ್ಯೆ ಸಂಘರ್ಷ ಸಾಧ್ಯತೆಗಳು ಲೋಕದ ಬೇರೆ ಪ್ರದೇಶಗಳಲ್ಲೂ ಇವೆ. ಅಲ್ಲಿ ಈಗ ಬೇರೆ ಜಗಳಗಳೂ ಸಂಘರ್ಷಗಳೂ ಜಾರಿಯಲ್ಲಿವೆ.

ಅಂತರ್ ಧರ್ಮೀಯ ಸಂಬಂಧಗಳ ವಿಷಯದಲ್ಲಿ ಹೇಳುವುದಾದರೆ, ಭಾರತದ ಹಿಂದೂ–ಮುಸ್ಲಿಮ್ ದಂಗೆಗಳು, ನೈಜೀರಿಯದ ಮುಸ್ಲಿಮ್–ಕ್ರೈಸ್ತ ಸಂಘರ್ಷಗಳು, ಮಧ್ಯ ಪೂರ್ವದ ಯಹೂದಿ–ಮುಸ್ಲಿಮ್ ಸಂಘರ್ಷ ಮತ್ತು ಇತರ ಕಡೆಗಳ ಸಂಘರ್ಷಗಳು ರಾಜಕೀಯವಾಗಿಯೂ ಆರ್ಥಿಕವಾಗಿಯೂ ದುರ್ಬಲವಾಗಿರುವ ಯಹೂದಿ–ಕ್ರೈಸ್ತ ಸಂಬಂಧಗಳಿಗೆ ಅಪ್ರತ್ಯಕ್ಷ ಅಪಾಯಗಳ ಸೂಚನೆಗಳಾಗಿದ್ದು ಅವು ಧಾರ್ಮಿಕ ಲೋಕದ ಅಡಿಭಾಗದಲ್ಲಿರುವ ನಿಷ್ಕ್ರಿಯ ಜ್ವಾಲಾಮುಖಿಗಳ ಹಾಗಿವೆ.

ಈ ಸಮಸ್ಯೆಗಳ ಬಗ್ಗೆ ಸುಧಾರಣೆಗೊಂಡ ಮನೋಭಾವವನ್ನು ಹೊಂದುವುದರ ಆವಶ್ಯಕತೆಯನ್ನು ಹೆಚ್ಚಿನ ಮಟ್ಟದಲ್ಲಿ ಒತ್ತಿ ಹೇಳಬೇಕಾಗಿಲ್ಲ.

ಈ ಸಮಸ್ಯೆಗಳಿಗೆ ಇಸ್ಲಾಮ್ ಸೂಚಿಸುವ ಪರಿಹಾರ ಮಾರ್ಗಗಳನ್ನು ಸಂಕ್ಷಿಪ್ತವಾಗಿ ಹೀಗೆ ಪುನರಾವರ್ತಿಸಬಹುದು:

1. ಲೋಕದ ಎಲ್ಲ ಧರ್ಮಗಳು, ಇಸ್ಲಾಮ್ ಧರ್ಮವಾಗಲಿ, ಅನ್ಯ ಧರ್ಮವಾಗಲಿ, ಪಂಗಡಗಳ ಮತ್ತು ಧರ್ಮಗಳ ಮಧ್ಯೆ ಸಂಘರ್ಷಗಳನ್ನು ನಿವಾರಿಸಲು ಧರ್ಮದಲ್ಲಿ ಯಾವುದೇ ಬಲಾತ್ಕಾರವಿಲ್ಲ ಎಂಬ ಇಸ್ಲಾಮೀ ತತ್ವಕ್ಕೆ ಅನುಸಾರವಾಗಿ ವರ್ತಿಸಬೇಕು. ಧರ್ಮವನ್ನು ಆಯ್ಕೆಮಾಡುವ, ಧರ್ಮವನ್ನು ಅನುಸರಿಸುವ, ಪ್ರಚಾರ ಮಾಡುವ, ಅನುಷ್ಠಿಸುವ ಅಥವಾ ಖಂಡಿಸುವ ಅಥವಾ ನಂಬದಿರುವ ಅಥವಾ ಧರ್ಮವನ್ನು ಬದಲಾಯಿಸುವ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ರಕ್ಷಿಸಬೇಕು.

2. ಸತ್ಯದ ಸಾರ್ವಲೌಕಿಕತೆಯ ಬಗ್ಗೆ ಇಸ್ಲಾಮೀ ಕಲ್ಪನೆಯನ್ನು ಅನ್ಯ ಧರ್ಮಗಳು ಅನುಸರಿಸುವುದಿಲ್ಲವಾದರೂ ಯಹೂದಿ ಧರ್ಮ, ಕ್ರೈಸ್ತ ಧರ್ಮ, ಬೌದ್ಧ ಧರ್ಮ, ಕನ್‌ಫ್ಯೂಶಿಯಸ್ ಧರ್ಮ, ಹಿಂದೂ ಧರ್ಮ ಮೊದಲಾದ ಧರ್ಮಗಳ ತತ್ವ ಪ್ರಕಾರ ಅವುಗಳಲ್ಲಿ ಪ್ರತಿಯೊಂದು ಧರ್ಮ ತನ್ನ ಹೊರತು ಅನ್ಯ ಧರ್ಮಗಳು ಸುಳ್ಳೆಂದೂ ದೇವನೊಂದಿಗೆ ಯಾವ ಸಂಬಂಧವನ್ನು ಹೊಂದದವುಗಳೆಂದೂ ಭಾವಿಸುವುದಾದರೂ, ಈ ರೀತಿ ಅವುಗಳು ಸತ್ಯವನ್ನು ಅಲ್ಲಗಳೆಯುತ್ತಿವೆಯಾದರೂ ಆ ಧರ್ಮಗಳ ಜನರು ಅನ್ಯ ಧರ್ಮಗಳ ಸ್ಥಾಪಕರಿಗೆ ಮತ್ತು ಮಹಾಪುರುಷರಿಗೆ ಗೌರವ ನೀಡಬೇಕೆಂಬ ಇಸ್ಲಾಮೀ ತತ್ವವನ್ನು ಅಂಗೀಕರಿಸಬೇಕು. ಹೀಗೆ ಮಾಡುವುದರಿಂದ ಅವರು ತಮ್ಮ ಸ್ವಂತ ಧರ್ಮ ತತ್ವಗಳ ಬಗ್ಗೆ ಹೊಂದಾಣಿಕೆ

ಮಾಡಿದಂತಾಗಲಾರದು. ಇದು ಮಾನವನ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ವಿಷಯವಾಗಿದೆ. ಪ್ರತಿಯೊಬ್ಬನ ಧಾರ್ಮಿಕ ಭಾವನೆಗಳನ್ನು ನೋಯಿಸಬಾರದೆಂಬ ತತ್ವವನ್ನು ಅಂಗೀಕರಿಸಲೇ ಬೇಕಾಗಿದೆ.

3. ಮೇಲೆ ಸೂಚಿಸಿದ ತತ್ವವನ್ನು ಯಾವುದೇ ರಾಷ್ಟ್ರೀಯ ಅಥವಾ ಅಂತರ್ರಾಷ್ಟ್ರೀಯ ನಿಯಮ ಹೇರಲಾರದೆಂದು ನೆನಪಿಡಬೇಕು. ದೇವನಿಂದೆಗೆ ಮಾನವ ನಿರ್ಮಿತ ನಿಯಮಗಳ ಮೂಲಕ ಶಿಕ್ಷೆ ನೀಡಲಾಗದು ಎಂಬ ತತ್ವವನ್ನು ಅಂಗೀಕರಿಸಬೇಕು. ಆದರೆ ಅದರೊಂದಿಗೆ ದೇವನಿಂದೆಯನ್ನು ಖಂಡಿಸಬೇಕು ಮತ್ತು ಅದು ಅಸಭ್ಯ, ಹೀನ ಕೆಲಸವೆಂಬುದರ ಬಗ್ಗೆ ಜನರ ಮನೋಭಾವ ಬೆಳೆಸಬೇಕು.

4. ಇಪ್ಪತ್ತನೆಯ ಶತಮಾನದ ಪ್ರಾರಂಭದ ಕಾಲಘಟ್ಟದಲ್ಲಿ ಅಹ್ಮದಿಯಾ ಜಮಾಅತ್ ವ್ಯವಸ್ಥೆಗೊಳಿಸಿದ ಸರ್ವಧರ್ಮ ಸಮ್ಮೇಳನಗಳ ಹಾಗಿರುವ ಸಮ್ಮೇಳನಗಳನ್ನು ಜರಗಿಸಬೇಕು ಮತ್ತು ಅದಕ್ಕೋಸ್ಕರ ಪ್ರೋತ್ಸಾಹ ಮತ್ತು ನೆರವು ನೀಡಬೇಕು. ಆ ಸಮ್ಮೇಳನಗಳು ಈ ಕೆಳಗಿನ ರೀತಿಗಳಲ್ಲಿ ಏರ್ಪಡಿಸಬೇಕು:

a) ಪ್ರತಿಯೊಂದು ಧರ್ಮದ ಬಗ್ಗೆ ಭಾಷಣ ಮಾಡುವವರು ತಮ್ಮ ಧರ್ಮದ ವೈಶಿಷ್ಟ್ಯಗಳನ್ನು ಮಾತ್ರ ವಿವರಿಸಬೇಕು. ಅನ್ಯ ಧರ್ಮಗಳ ನಿಂದನೆ ಮಾಡಬಾರದು.

b) ಒಂದು ಧರ್ಮವನ್ನು ಅನುಸರಿಸುವ ಭಾಷಣಕಾರ ಇನ್ನೊಂದು ಧರ್ಮದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿ ಆ ಧರ್ಮದ ಉಪದೇಶಗಳು ಏಕೆ ಆಕರ್ಷಕವಾಗಿವೆ ಎಂದು ವಿವರಿಸಲು ಪ್ರಯತ್ನಿಸಬೇಕು.

c) ಒಂದು ಧರ್ಮದ ಭಾಷಣಕಾರ ಇತರ ಧರ್ಮಗಳ ಸ್ಥಾಪಕರ ಉತ್ತಮ ಗುಣಗಳ ಬಗ್ಗೆ ಭಾಷಣ ಮಾಡಬೇಕು. ಉದಾಹರಣೆಗೆ, ಒಬ್ಬ ಯಹೂದಿ ಭಾಷಣಕಾರ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಸ್ವಭಾವ ಗುಣಗಳನ್ನು ಪ್ರಶಂಸಿಸಬಹುದು. ಹಾಗೆ ಪ್ರಶಂಸಿಸುವಾಗ ಅವನ ನಂಬಿಕೆಗಳಿಗೆ ಹಾನಿ ಉಂಟಾಗಲಾರದು. ಇದೇ ರೀತಿ ಒಬ್ಬ ಮುಸ್ಲಿಮ್ ಭಾಷಣಕಾರ ಶ್ರೀಕೃಷ್ಣರ ಬಗ್ಗೆ ಮಾತನಾಡಬಹುದು. ಹಿಂದೂ ಭಾಷಣಕಾರ ಯೇಸುಕ್ರಿಸ್ತರ ಬಗ್ಗೆಯೂ ಬೌದ್ಧ ಭಾಷಣಕಾರ ಮೂಸಾ ಪ್ರವಾದಿ ಬಗ್ಗೆಯೂ ಭಾಷಣ ಮಾಡಬಹುದು. ಹೀಗೆಯೇ ಬೇರೆ ಪ್ರವಾದಿಗಳ ಬಗ್ಗೆಯೂ ಮಾತನಾಡಬಹುದು. ಇಪ್ಪತ್ತನೇ ಶತಮಾನದ ಮೂರನೆಯ ದಶಕದಲ್ಲಿ ಇಂತಹ ಸಮ್ಮೇಳನಗಳನ್ನು ಅಹ್ಮದಿಯಾ ಮುಸ್ಲಿಮ್ ಜಮಾಅತ್ ನಡೆಸಿ ಭಾರತದಲ್ಲಿ ಹಿಂದೂ ಮುಸ್ಲಿಮ್ ಸಂಬಂಧವನ್ನು ಸುಧಾರಣೆ ಮಾಡಲು ಪ್ರಯತ್ನಿಸಿತು.

d) ಮೇಲೆ ವಿವರಿಸಿದ ಸಮ್ಮೇಳನಗಳು ಮಾತ್ರವಲ್ಲ, ವಿವಿಧ ಪಂಗಡಗಳ ಮತ್ತು ಧರ್ಮಗಳ ಮಧ್ಯೆ ನಡೆಸಲಾಗುವ ಸಂವಾದಗಳಲ್ಲಿ ಪರಿಶುದ್ಧತೆಯನ್ನು ಕಾಪಾಡಬೇಕು. ಅಂತರ್ ಧರ್ಮೀಯ ಸಂವಾದಗಳನ್ನು ಧಾರ್ಮಿಕ ಶಾಂತಿ ಕೆಡಿಸುವವುಗಳೆಂದು ಖಂಡಿಸಬಾರದು. ಸಂವಾದ ನಡೆಸುವ ವಿಧಾನವು ಕೆಟ್ಟದಾಗಿದ್ದರೆ ಅದನ್ನು ಖಂಡಿಸಬೇಕೇ ಹೊರತು ಸಂವಾದವನ್ನಲ್ಲ. ಯೋಚನೆಗಳ ಸ್ವತಂತ್ರ ಹರಿಯುವಿಕೆ ಮುಖ್ಯ ಮೂಲಭೂತ ಮಾನವೀಯ ಹಕ್ಕಾಗಿದೆ ಮತ್ತು ಶಕ್ತಿಶಾಲಿಗಳು ಬದುಕಿ ಉಳಿಯಲು ಆವಶ್ಯಕವೂ ಆಗಿದೆ. ಅದರ ಬಗ್ಗೆ ಹೊಂದಾಣಿಕೆ ಮಾಡಲಾಗದು.

e) ಅಭಿಪ್ರಾಯ ವ್ಯತ್ಯಾಸಗಳ ಕ್ಷೇತ್ರಗಳನ್ನು ತಗ್ಗಿಸಲು ಮತ್ತು ಒಮ್ಮತದ ಕ್ಷೇತ್ರಗಳನ್ನು ವರ್ಧಿಸಲು ಎಲ್ಲ ಧರ್ಮಗಳು ತಮ್ಮ ವಾದಗಳನ್ನು ಸಮರ್ಥಿಸಲು ತಮ್ಮ ಮೂಲ ಗ್ರಂಥಗಳ ಉಲ್ಲೇಖಗಳನ್ನು ಮಾತ್ರ ಅನ್ಯ ಧರ್ಮೀಯರೊಂದಿಗೆ ಮಾಡುವ ಸಂವಾದಗಳಲ್ಲಿ ಬಳಸಬೇಕು. ಎಲ್ಲ ಧರ್ಮಗಳ ಮೂಲ ತತ್ವಗಳು ಸಮಾನವಾಗಿವೆ ಎಂಬ ಪವಿತ್ರ ಖುರ್ಆನಿನ ಘೋಷಣೆಯನ್ನು ಹಗುರವಾಗಿ ಭಾವಿಸಬಾರದು. ಅದು ಜ್ಞಾನದ ಒಂದು ಲೋಕವನ್ನೇ ತನ್ನಲ್ಲಿ ಅಡಕಗೊಳಿಸಿದೆ. ಅದನ್ನು ಪರಿಶೋಧಿಸಬೇಕು ಮತ್ತು ಎಲ್ಲ ಧರ್ಮಗಳು ಅದನ್ನು ತಮ್ಮ ಅನುಕೂಲಕ್ಕಾಗಿ ಮತ್ತು ಮಾನವರೆಲ್ಲರ ಅನುಕೂಲಕ್ಕೋಸ್ಕರ ಬಳಸಬೇಕು.

5. ಮಾನವರ ಹಿತಕ್ಕಾಗಿ ಮಾಡಲಾಗುವ ಎಲ್ಲ ಯೋಜನೆಗಳಿಗೆ ಸಹಕಾರ ನೀಡಿ ಪ್ರೋತ್ಸಾಹಿಸಬೇಕು. ಉದಾಹರಣೆಗೆ, ಕ್ರೈಸ್ತರು, ಮುಸ್ಲಿಮರು, ಹಿಂದುಗಳು, ಯಹೂದಿಯರು ಮೊದಲಾದವರು ಒಟ್ಟಿಗೆ ಸೇರಿಕೊಂಡು ಮಾನವರಿಗೆ ಉಪಯೋಗಕರವಾದ ಕೆಲಸಗಳನ್ನು ಮಾಡಬಹುದು.

ಈ ಸೂಚನೆಗಳನ್ನು ಪಾಲಿಸುವುದಾದರೆ, ಮನುಷ್ಯರನ್ನು ಎಲ್ಲ ಕ್ಷೇತ್ರಗಳಲ್ಲೂ – ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಇತರ ಆವಶ್ಯಕ ಕ್ಷೇತ್ರಗಳಲ್ಲಿ ಒಂದು ಪತಾಕೆಯ ಕೆಳಗೆ ಒಗ್ಗೂಡಿಸಬೇಕೆಂಬ ಪುರಾತನ ಕಾಲದ ಋಷಿಗಳ, ಚಿಂತಕರ ಕನಸು ನನಸಾಗಬಲ್ಲದು.

♦

**10ನೇ ಪುಟದಿಂದ**

ಉದ್ಧರಣೆಗಳನ್ನು ಆಯ್ಕೆ ಮಾಡಿ ನೀಡಲಾಗಿದೆ. ಭಾಷಣದ ಪೂರ್ಣ ಪಾಠ "ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ" ಎಂಬ ಪುಸ್ತಕದಲ್ಲಿ ಲಭ್ಯವಿದೆ.

"ಜಾಗತಿಕ ಬಿಕ್ಕಟ್ಟು ಮತ್ತು ಶಾಂತಿ ಮಾರ್ಗ" ಎಂಬ ಪುಸ್ತಕದಲ್ಲಿ ಹಝ್ರತ್ ಪಂಚಮ ಖಲೀಫರು ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ, ಯುರೋಪಿಯನ್ ಪಾರ್ಲಿಮೆಂಟ್‌ನಲ್ಲಿ, ಅಮೇರಿಕದ ಕ್ಯಾಪಿಟೋಲ್ ಹಿಲ್ಸ್‌ನಲ್ಲಿ, ನ್ಯೂಝಿಲೇಂಡ್ ಪಾರ್ಲಿಮೆಂಟ್‌ನಲ್ಲಿ ಮಾಡಿದ ಭಾಷಣಗಳು ಹಾಗೂ ಜಾಗತಿಕ ನಾಯಕರಿಗೆ ಬರೆದ ಪತ್ರಗಳು ಅಡಕವಾಗಿವೆ.

ಕೊನೆಯದಾಗಿ ನಾವು ಪ್ರಾರ್ಥಿಸುತ್ತೇವೆ. ಲೋಕ ಈ ಉಪದೇಶಗಳನ್ನು ಕಾರ್ಯಗತಗೊಳಿಸಿ ಲೋಕವನ್ನು ಶಾಂತಿ ಧಾಮವನ್ನಾಗಿ ಮಾಡಲು ಸರ್ವಶಕ್ತನಾದ ಅಲ್ಲಾಹನು ಕರುಣಿಸಲಿ.

**(ನೂರುಲ್ ಇಸ್ಲಾಮ್ ಪ್ರಕಟನೆ. ಭಾಷಾಂತರ: ಎಮ್. ಉಬೈದುಲ್ಲಾ)**

♦

# ಮುಸ್ಲಿಹ್ ಮೌಊದ್ (ವಾಗ್ದತ್ತ ಸುಧಾರಕ) ಭವಿಷ್ಯವಾಣಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'**ನಿಂದ **19-02-2021**ರಂದು ನೀಡಿದ **ಜುಮುಅ ಖುತ್‌ಬ**)

ಫೆಬ್ರವರಿ 20ರ ದಿನದಂದು ಜಮಾಅತಿನಲ್ಲಿ ಮುಸ್ಲಿಹ್ ಮೌಊದ್‌ರ ಬಗ್ಗೆ ಭವಿಷ್ಯವಾಣಿಯನ್ನು ಸ್ಮರಿಸಲಾಗುತ್ತದೆ. ಇಂದು ನಾನು ಇದಕ್ಕೆ ಸಂಬಂಧಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಇದೊಂದು ದೀರ್ಘವಾದ ಭವಿಷ್ಯವಾಣಿಯಾಗಿದೆ. ಹಝ್ರತ್ ಮಸೀಹ್ ಮೌಊದರಿಗೆ ಅವರ ವಾಗ್ದತ್ತ ಪುತ್ರನ ಕುರಿತು ಅಲ್ಲಾಹನು ಹೇಳಿಕೊಟ್ಟ ಹಲವಾರು ವಿಶೇಷತೆಗಳು ಅದರಲ್ಲಿ ವಿವರಿಸಲ್ಪಟ್ಟಿವೆ. ಅದರಲ್ಲಿ ಒಂದು ಮಗ್ಗುಲಾದ **"ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಲಾಗುವುದು"** ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದರ ಸ್ವಂತ ಲಿಖಿತಗಳ ಮತ್ತು ಭಾಷಣಗಳ ಆಧಾರದಲ್ಲಿ ಕೆಲವು ಸಂಗತಿಗಳನ್ನು ಇಂದು ನಾನು ವಿವರಿಸುತ್ತೇನೆ. ಅವುಗಳಲ್ಲಿ ಭವಿಷ್ಯವಾಣಿಯ ಒಂದು ಮಗ್ಗುಲಾದ **"ಅವರು ಅತ್ಯಂತ ಬುದ್ಧಿವಂತರಾಗಿರುವರು"** ಎಂಬುದರ ಪ್ರಕಟಣೆ ಸಹ ಆಗುವುದು. ಬಾಹ್ಯ ಮತ್ತು ಆಂತರಿಕ ಅರಿವನ್ನು ಅಲ್ಲಾಹನು ಅವರಿಗೆ ಭೌತಿಕ ಶಿಕ್ಷಣದ ಕೊರತೆಯಿದ್ದರೂ ದಯಪಾಲಿಸಿದ್ದನು. ಏಕೆಂದರೆ ಅವರ ಶಿಕ್ಷಣ ಕೇವಲ ಪ್ರೈಮರಿ ಶಿಕ್ಷಣದ್ದಾಗಿತ್ತು. ಅವುಗಳು ಎಷ್ಟು ಹೆಚ್ಚಿಗೆ ಇವೆಯೆಂದರೆ, ಅದನ್ನು ವಿವರಿಸುವುದು ಬಿಡಿ, ಅವುಗಳನ್ನು ಒಂದು ಖುತ್‌ಬದಲ್ಲಿ ಪರಿಚಯಪಡಿಸುವುದೇ ಕಷ್ಟ. ಇದನ್ನು ಪರಿಚಯಪಡಿಸುವುದಕ್ಕೆ ಖುತ್‌ಬಗಳ ಒಂದು ಪರಂಪರೆಯೇ ಬೇಕಾಗುವುದು. ಒಟ್ಟಿನಲ್ಲಿ, ಎಲ್ಲವನ್ನು ವಿವರಿಸುವುದು ಸಾಧ್ಯವಲ್ಲ. ಆದರೆ ಪರಿಚಯಪಡಿಸಿ ಕೊಡುವುದಕ್ಕಾಗಿ, ಒಂದು ಮಿಂಚುನೋಟ ತೋರಿಸುವುದಕ್ಕಾಗಿ ಅವರ ಪ್ರಬಂಧಗಳು ಮತ್ತು ಭಾಷಣಗಳ ಒಂದು ಅವಲೋಕನ ಅಥವಾ ಸಂಕ್ಷೇಪವಾದ ಪರಿಚಯ ಮುಂದಿರಿಸುತ್ತೇನೆ. ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಅರಿವು ಮತ್ತು ಜ್ಞಾನದ ಲಘುವಾದ ಮಿಂಚುನೋಟ ಗೊತ್ತಾಗುವಂತಾಗಲು ಆ ಉಪನ್ಯಾಸಗಳ ಕೆಲವು ಅಂಶಗಳನ್ನು ಸಂಕ್ಷೇಪವಾಗಿ ಮುಂದಿರಿಸುತ್ತೇನೆ.

ಈ ಭಾಷಣಗಳು ಮತ್ತು ಉಪನ್ಯಾಸಗಳು ಅಲ್ಲಾಹನ ಏಕತ್ವ, ದೇವದೂತರ ನೈಜತೆ, ಪ್ರವಾದಿಗಳ ಸ್ಥಾನಮಾನಗಳು, ಹಝ್ರತ್ ಖಾತಮುಲ್ ಅಂಬಿಯಾ ಮುಹಮ್ಮದ್ ಮುಸ್ತಫಾರ(ಸ) ಪದವಿಗಳು, ಇತರ ಆಧ್ಯಾತ್ಮಿಕ ವಿಷಯಗಳು. ಅದೇ ರೀತಿಯಲ್ಲಿ ಮುಸ್ಲಿಮರಿಗಾಗಿ ಧಾರ್ಮಿಕ ಮತ್ತು ರಾಜಕೀಯ ಮಾರ್ಗ ನಿರ್ದೇಶನಗಳು, ಇಸ್ಲಾಮಿನ ಆರ್ಥಿಕ ವ್ಯವಸ್ಥೆ, ಇಸ್ಲಾಮಿನ ಚರಿತ್ರೆ, ಆಗ ಇದ್ದ ಕೆಲವು ಸಮಸ್ಯೆಗಳು, ಆ ಕಾಲಘಟ್ಟದಲ್ಲಿ ಉದ್ಭವಿಸಿದ ವಿಷಯಗಳು, ಅವುಗಳಲ್ಲಿ ಕೆಲವು ಇಂದು ಸಹ ನೆಲೆನಿಂತಿವೆ. ಅವುಗಳಿಗೆ ಸಂಬಂಧಿಸಿ ಅವರ ಅಭಿಪ್ರಾಯಗಳು ಮತ್ತು ಅಂದಿನ ಕಾಲದಲ್ಲಿ ಇದ್ದ ಸಾಮಾನ್ಯ ಯೋಚನೆಗಳನ್ನು ಓದುವಾಗ, ಇಂದು ಅದಕ್ಕಿರುವ ಪರಿಹಾರ ಸಿಗುವುದು. ಈ ರೀತಿಯಲ್ಲಿ ಅವರ ರಚನೆಗಳು, ಭಾಷಣಗಳು ಅನೇಕ ವಿಷಯಗಳನ್ನು ಒಳಗೊಂಡಿದ್ದಾಗಿವೆ. ನಾನು ಹೇಳಿದಂತೆ, ಇವೆಲ್ಲದರ ಕಿರುಪರಿಚಯ ಕೂಡ ಇಲ್ಲಿ ನೀಡುವುದು ಸಾಧ್ಯವಿಲ್ಲ. ಆದ್ದರಿಂದ ಕೆಲವನ್ನು ಮಾತ್ರ ಇಲ್ಲಿ ಪರಿಚಯಪಡಿಸುತ್ತೇನೆ. ಅದು ಕೂಡ ಅವರು ಯೌವ್ವನ ಪ್ರಾಯಕ್ಕೆ ಹೆಜ್ಜೆ ಹಾಕಿದ್ದ ಕಾಲದ್ದನ್ನು ನಾನು ಆಯ್ಕೆ ಮಾಡಿದ್ದೇನೆ. ಅವರಿಗೆ ಭೌತಿಕ ವಿದ್ಯಾಭ್ಯಾಸ ಅಥವಾ ಧಾರ್ಮಿಕ ವಿದ್ಯಾಭ್ಯಾಸ ಸರಿಯಾದ ರೀತಿಯಲ್ಲಿ ಲಭಿಸಿರಲಿಲ್ಲ. ಅವರು ವಿವರಿಸುವ ಶ್ರೇಷ್ಠವಾದ ಆಶಯಗಳನ್ನು ನೋಡಿದರೆ, ಅಚ್ಚರಿಯಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಏಕದೇವ ವಿಶ್ವಾಸದ ವಿಷಯದಲ್ಲಿ 17ನೇ ವಯಸ್ಸಿನಲ್ಲಿ ಒಂದು ಜಲ್ಸದಲ್ಲಿ ಒಂದು ಭಾಷಣವನ್ನು ನೀಡಿದ್ದರು. 'ಪೂರ್ಣವಾಗಿಯೂ ಹೊಸ ಅಂಶಗಳನ್ನು ಹೇಳಲಾಗಿದೆ' ಎಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಸಹ ಆ ಭಾಷಣದ ಬಗ್ಗೆ ಶ್ಲಾಘಿಸಿ ಹೇಳಿದ್ದರು. ಹೇಗಿದ್ದರೂ ಆರಂಭಿಕ ಯೌವ್ವನದ ಪ್ರಾಯವಾದ 16, 17 ಅಥವಾ 18 ವರ್ಷ ಪ್ರಾಯದಿಂದ 34, 35 ಪ್ರಾಯದ ವರೆಗಿನ ಅವರ ಅರಿವು ಮತ್ತು ಜ್ಞಾನದ ಖಜಾನೆಗಳ ಒಂದು ಮಿಂಚು ನೋಟ ಮುಂದಿರಿಸುತ್ತೇನೆ. ಈ ಕಾಲಾವಧಿಯಲ್ಲಿ ಅವರು ಏನೆಲ್ಲ ಹೇಳಿದ್ದರೋ ಅವುಗಳಿಂದ 50ರಲ್ಲಿ ಒಂದು ಅಂಶವನ್ನು ಕೂಡ ಪರಿಚಯ ಪಡಿಸುವುದಿಲ್ಲ. ನನಗೆ ಪರಿಚಯಪಡಿಸಲಾಗಲಿಕ್ಕಿಲ್ಲ. ಬಹುಶಃ ಅದಕ್ಕಿಂತ ಕಡಿಮೆ. ಅದರ ನಂತರ ಸಹ ಅವರು ದೀರ್ಘಾಯುಸ್ಸನ್ನು ಪಡೆದರು. ಅರಿವು ಮತ್ತು ಜ್ಞಾನದ ಮುತ್ತುಗಳು ಅಲ್ಲಾಹನಿಂದ ಜ್ಞಾನ ಪಡೆದು ವಿತರಿಸುತ್ತಾ ಹೋದರು.

ಮಾರ್ಚ್ 1907ರಲ್ಲಿ, ಅವರಿಗೆ ಕೇವಲ 18 ವರ್ಷ ಪ್ರಾಯವಿದ್ದಾಗ, **'ದೇವಪ್ರೇಮ'** ಎಂಬ ಶೀರ್ಷಿಕೆಯಲ್ಲಿ ಒಂದು ಮಹತ್ತಾದ ಪ್ರಬಂಧವನ್ನು ಬರೆದರು. ಅನಂತರ ಅದನ್ನು ಪುಸ್ತಕ ರೂಪದಲ್ಲೂ ಪ್ರಕಾಶಿಸಲಾಯಿತು. ಯಾವ ರೀತಿಯಲ್ಲಿ ಅಲ್ಲಾಹನು ಅವರನ್ನು ಸಣ್ಣ ವಯಸ್ಸಿನಲ್ಲೇ ಬಾಹ್ಯ ಮತ್ತು ಆಂತರಿಕ ಜ್ಞಾನದಿಂದ ತುಂಬಿಸಲು ಶುರುಮಾಡಿದ್ದನು ಎಂದು ಆ ಬರಹದಿಂದಲೇ ಪ್ರಕಟವಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಅದರಲ್ಲಿ ಬರೆಯುತ್ತಾರೆ: "ಅಲ್ಲಾಹನು ಮನುಷ್ಯನನ್ನು ಪ್ರೇಮಿಸಲಿಕ್ಕಾಗಿಯೇ ಸೃಷ್ಟಿಸಿದ್ದಾನೆ. ಅಲ್ಲಾಹನ ಪ್ರೇಮದಿಂದ ಆವರಿಸಲ್ಪಡಬೇಕೆಂಬ ಮತ್ತು ಸ್ಥಾಯಿಯಾದ ಜೀವನ ನೀಡುವ ಆ ಸಮುದ್ರದಲ್ಲಿ ಸದಾ ಮುಳುಗಿರಬೇಕೆಂಬ ಉದ್ದೇಶದಿಂದಲೇ ಅವನನ್ನು ಸೃಷ್ಟಿಸಲಾಗಿದೆ. ಪರಲೋಕದ ಜೀವಿತವೇ ಸ್ಥಾಯಿಯಾದ ಜೀವಿತ. ಈ ಪ್ರೇಮದ ಕಾರಣದಿಂದಲೇ ಮನುಷ್ಯನು ಪಾಪಗಳಿಂದ ರಕ್ಷಣೆ ಪಡೆಯುತ್ತಾನೆ ಮತ್ತು ಉನ್ನತ ಪದವಿಗಳನ್ನು ಪಡೆಯುತ್ತಾನೆ. ಈ ಪ್ರೇಮವೇ ಅಲ್ಲಾಹನನ್ನು ಅರಿಯಲು ಕಾರಣವಾಗುತ್ತದೆ. ಪ್ರೇಮದ ವಿನಾ ಮನುಷ್ಯನಿಗೆ ಅಲ್ಲಾಹನ ನೈಜತೆ ಮತ್ತು ಅವನ ಸರಿಯಾದ ಅರಿವು ಲಭಿಸಲು ಸಾಧ್ಯವಲ್ಲ. ಆದ್ದರಿಂದ ಪಾಪಗಳಿಂದ ರಕ್ಷಣೆ ಪಡೆಯಲು ಮತ್ತು ಉನ್ನತ ಪದವಿಗಳನ್ನು ಪಡೆಯಲು ನಾವು ನಮ್ಮ ಸಂಬಂಧವನ್ನು ಅಲ್ಲಾಹನೊಂದಿಗೆ ವರ್ಧಿಸಬೇಕಾದುದು ಆವಶ್ಯಕ. ಅಲ್ಲಾಹನ ಸಾಮೀಪ್ಯ ಪಡೆಯುವಂತಾಗಲು ನಮ್ಮ ಹೃದಯದಲ್ಲಿ ನಿಷ್ಠೆ ಮತ್ತು ಪ್ರೇಮವನ್ನು ಉಂಟುಮಾಡಬೇಕು. ನಾವು ಲೋಕಕ್ಕೆ ಬೆಳಕು ಕೊಡುವಂತಹ ಸೂರ್ಯನಂತಾಗಬೇಕು." ಅನಂತರ ಅವರು ವಿವಿಧ ಧರ್ಮಗಳ

ಬಗ್ಗೆ ಪ್ರಸ್ತಾಪಿಸುತ್ತಾ ಹೇಳಿದರು: "ದೇವನು ಒಬ್ಬನೇ, ಆದರೆ ಅವನ ಬಗ್ಗೆ ಪ್ರತಿಯೊಂದು ಧರ್ಮಗಳ ಭಾವನೆಗಳು ಬೇರೆ ಬೇರೆಯಾಗಿವೆ."

ಅದರ ಕೊನೆಯಲ್ಲಿ ಅವರು ಇಸ್ಲಾಮ್ ಮುಂದಿರಿಸುವ ಜೀವಂತ ದೇವನಿಗೆ ಪುರಾವೆಯಾಗಿ ಹೀಗೆ ಹೇಳಿದರು: "ಇಸ್ಲಾಮಿನ ದೇವನು ದಿವ್ಯವಾಣಿ ಮೂಲಕ, ಹಿಂದಿನ ಕಾಲದಲ್ಲಿ ಎಂಬಂತೆ ಇಂದು ಸಹ ಮನುಷ್ಯನ ಮಾರ್ಗದರ್ಶನ ಮಾಡುತ್ತಾನೆ. ಇದೇ ಜೀವಂತ ದೇವನ ಅತ್ಯಂತ ಹಿರಿದಾದ ವಿಶೇಷತೆಯಾಗಿದೆ." ಅನಂತರ ಅವರು ಬರೆಯುತ್ತಾರೆ: ಇಸ್ಲಾಮಿನ ಅಧ್ಯಾಪನೆಗಳು ಮನುಷ್ಯನ ಸಹಜಪ್ರಕೃತಿಗೆ ಅನುಸಾರವಾಗಿದೆ. ಅಲ್ಲಾಹನು ಸರ್ವಶಕ್ತನೂ ಯಾವುದೇ ನ್ಯೂನತೆಗಳಿಲ್ಲದವನೂ ಆಗಿದ್ದಾನೆ. ಇಸ್ಲಾಂ ಹೇಳುವುದೇನೆಂದರೆ, ಅಲ್ಲಾಹನನ್ನು ಪ್ರೀತಿಸುವವನಿಗೆ, ಬೇಗನೇ ಸ್ಪಷ್ಟವಾದ ಉತ್ತರ ಸಿಗುವುದಿಲ್ಲ. ಬದಲಿಗೆ ಅವನನ್ನು ಪರೀಕ್ಷೆಗೆ ಒಳಪಡಿಸಿದ ನಂತರ ಅಲ್ಲಾಹನು, ಪ್ರೀತಿಸುವವನೊಡನೆ ಸಂಭಾಷಣೆ ಮಾಡುತ್ತಾನೆ. ಪರೀಕ್ಷೆಯ ಮೂಲಕ ದಾಟಬೇಕಾಗುತ್ತದೆ. ಎಲ್ಲವನ್ನು ಸುಟ್ಟು ಹಾಕುವ ಪ್ರೇಮಿಯ ಪ್ರೇಮದ ಬಿಸಿಯನ್ನು ಅಲ್ಲಾಹನು ತನ್ನ ಸಮಾಧಾನಕರವಾದ ಸಂಭಾಷಣೆ ಮೂಲಕ ತಣ್ಣಗೆ ಮಾಡುತ್ತಾನೆ. ಉತ್ತರ ಸಿಗದ ಕಾರಣದಿಂದ ಉಂಟಾದ ಆ ಉರಿ ಮತ್ತು ಬಿಸಿಯನ್ನು ಅಲ್ಲಾಹನು ದೂರಮಾಡುತ್ತಾನೆ. ಈ ರೀತಿಯಲ್ಲಿ ಆ ಪ್ರೇಮ ಇನ್ನೂ ಹೆಚ್ಚಿಗೆ ಹೊಳೆಯುತ್ತದೆ. ದೇವನ ಇನ್ನಷ್ಟು ಸಮೀಪವಾಗಲು ಒಂದು ಉತ್ಸಾಹ ಅವನಲ್ಲಿ ಉಂಟಾಗುತ್ತದೆ. ಈ ರೀತಿಯಲ್ಲಿ ವರ್ಧಿಸುತ್ತಾ ಎಷ್ಟು ಸಮೀಪವಾಗುತ್ತಾನೆ ಎಂದರೆ, ಅಲ್ಲಾಹನು ಆ ದೇವದಾಸನ ಬಗ್ಗೆ ಹೀಗೆ ಹೇಳುತ್ತಾನೆ: **ಅಂತ ಮಿನ್ನೀ ವ ಅನ ಮಿಂಕ**. ಎಂದರೆ, ನೀನು ನನ್ನಿಂದ, ನಾನು ನಿನ್ನಿಂದ. ಎಂದರೆ, ದೇವನ ಹೆಸರು ಆ ದೇವದಾಸನ ಮೂಲಕ ಪ್ರಕಟವಾಗುವುದು. ದೇವದಾಸನ ಗೌರವ ದೇವನ ಕಾರಣದಿಂದ ಆಗಿರುವುದು. ಸತ್ಯದಲ್ಲಿ, ಅಲ್ಲಾಹನ ಪ್ರೇಮದ ನದಿಯಲ್ಲಿ ಮುಳುಗುವವನೇ ಅಲ್ಲಾಹನ ಹೆಸರಿನ ವೈಭವವನ್ನು ಲೋಕದಲ್ಲಿ ಹರಡುತ್ತಾನೆ. ಅಲ್ಲಾಹನ್ನು ಪ್ರೀತಿಸುವ ಕಾರಣದಿಂದಲೇ ಆ ದೇವದಾಸರು ಗೌರವಾನ್ವಿತರು ಆಗುತ್ತಾರೆ. ಅವರು ಬರೆಯುತ್ತಾರೆ: ನಾನು ದೇವಪ್ರೇಮ ಎಂಬ ಪದದ ಬಗ್ಗೆ ಎಷ್ಟು ಯೋಚಿಸುತ್ತೇನೋ ಅಷ್ಟೇ ಹೆಚ್ಚು ಒಂದು ವಿಶೇಷವಾದ ಅನುಭೂತಿ ಮತ್ತು ಆನಂದ ಹೃದಯದಲ್ಲಿ ಉಂಟಾಗುತ್ತದೆ. ನಮ್ಮ ಹೃದಯವನ್ನು ಪ್ರಕಾಶಿತಗೊಳಿಸುವ ಮತ್ತು ನಮ್ಮ ಮಿದುಳನ್ನು ಬೆಳಗಿಸುವ ಸನ್ಮಾರ್ಗದ ಕಡೆಗೆ ಕೊಂಡೊಯ್ಯುವಂತಹ ಅನುಗ್ರಹವನ್ನು ನೀಡಿದ ಇಸ್ಲಾಂ ಎಷ್ಟು ಸುಂದರವಾದ ಧರ್ಮವಾಗಿದೆ. ಇಸ್ಲಾಮಿನ ಅಧ್ಯಾಪನೆಗಳು ನಮ್ಮ ಗಾಯಗೊಂಡ ಹೃದಯಗಳಿಗೆ ಒಂದು ಮುಲಾಮಾಗಿದೆ. ಅಲ್ಲಾಹನಾಣೆ ಇಸ್ಲಾಂ ಇಲ್ಲದಿರುತ್ತಿದ್ದರೆ, ಸತ್ಯಾನ್ವೇಷಿ ಜೀವಚ್ಛವವಾಗುತ್ತಿದ್ದನು ಮತ್ತು ಸ್ನೇಹದ ಆಸಕ್ತಿಯಿರುವವನ ಸೊಂಟ ಮುರಿದುಹೋಗುತ್ತಿತ್ತು. ದೇವನನ್ನು ಪ್ರೀತಿಸುವುದು ಅಸಾಧ್ಯವೆಂದು ತೋರಬಹುದಾಗಿತ್ತು. ಅದನ್ನು ಒಂದು ಭಾವನೆ ಎಂದು ಮಾತ್ರ ಭಾವಿಸಬೇಕಾಗುತ್ತಿತ್ತು. ಏಕೆಂದರೆ, ಪ್ರೀತಿಸಲು ಯೋಗ್ಯವಾದ ಒಂದು ಅಸ್ತಿತ್ವವಿಲ್ಲವೆಂದು ಕಾಣುವಾಗ, ಅವನ ಅಸ್ತಿತ್ವದ ಬಗ್ಗೆ ಸಂಶಯಿಸದೇ ಇರಲು ಹೇಗೆ ಸಾಧ್ಯ? ಇಸ್ಲಾಮಿನಂತಹ ಧರ್ಮವನ್ನು ಅಲ್ಲಾಹನು ಮನುಷ್ಯನಿಗೆ ನೀಡಿಕೊಂಡು ದುಃಖಕರವಾದ ಹೃದಯಕ್ಕೆ ನೆಮ್ಮದಿಯನ್ನು ನೀಡಿದ್ದಾನೆ. ಗಾಯಗೊಂಡ ಹೃದಯಕ್ಕೆ ಶಮನೌಷಧವನ್ನು ನೀಡಿದ್ದಾನೆ. ತಾನು ಯಾರನ್ನು ಪ್ರೀತಿಸುತ್ತಿರುವನೋ ಅವನು ಕಣಕಣವನ್ನು ನೋಡುತ್ತಾನೆ, ಹೃದಯಗಳ ಸಂಗತಿಗಳನ್ನು ಅರಿಯುತ್ತಾನೆ, ಅವನು ಕೇಳುತ್ತಾನೆ, ಮಾತನಾಡುತ್ತಾನೆ ಮತ್ತು ಅವನನ್ನು ಪ್ರೀತಿಸುವವನಿಗೆ ಪ್ರತಿಫಲವನ್ನೂ ನೀಡುತ್ತಾನೆ ಎಂದು ದೇವನನ್ನು ಪ್ರೀತಿಸುವ ಒಬ್ಬ ವ್ಯಕ್ತಿ ಕಾಣುವಾಗ, ಅವನ ಹೃದಯವು ಆ ಪ್ರೇಮದ ಕಾರಣದಿಂದ ಖುಶಿಪಡುತ್ತದೆ ಮತ್ತು ವಿಶೇಷವಾದ ಪರಮಾನಂದವನ್ನು ಅನುಭವಿಸುತ್ತದೆ.

1908ರ ಜಲ್ಸದಲ್ಲಿ, ಡಿಸೆಂಬರ್ 28ರಂದು ಹಝ್ರತ್ ಮುಸ್ಲಿಹ್ ಮೌಊದ್[ರ] **"ನಾವು ಹೇಗೆ ಯಶಸ್ಸು ಗಳಿಸಬಹುದು"** ಎಂಬ ಶೀರ್ಷಿಕೆಯಲ್ಲಿ ಒಂದು ಮುಖ್ಯವಾದ ಭಾಷಣವನ್ನು ಮಾಡಿದ್ದರು. ಆ ವಿಷಯದಲ್ಲಿನ ಈ ಅನಿಸಿಕೆಗಳು 19 ವರ್ಷ ವಯಸ್ಸಿನ ಒಬ್ಬ ಯುವಕನದ್ದಾಗಿತ್ತು. ಅವರು ಸೂರ ತೌಬದ 111, 112 ವಚನಗಳನ್ನು ಓದಿದ ನಂತರ ಹೀಗೆ ಹೇಳಿದರು: "ಅಲ್ಲಾಹನು ಮನುಷ್ಯನನ್ನು ಏಕೆ ಸೃಷ್ಟಿಸಿದ್ದಾನೆಂದು ಪ್ರತಿಯೊಬ್ಬ ವ್ಯಕ್ತಿ ಯೋಚಿಸಬೇಕು. ಮರಣವೆಂಬುದು ಸುನಿಶ್ಚಿತವಾಗಿರುವಾಗ, ಮರಣದ ನಂತರ ಏನಾಗುವುದು ಎಂದು ಯೋಚಿಸಬೇಕು. ಕೇವಲ ಕೆಲವು ದಿನಗಳ ಇಹಲೋಕ ಜೀವಿತಕ್ಕಾಗಿ ಮನುಷ್ಯನು ಇಷ್ಟೆಲ್ಲ ಪ್ರಯತ್ನಗಳನ್ನು ಮತ್ತು ಯೋಜನೆಗಳನ್ನು ಮಾಡುತ್ತಿರುವಾಗ, ಅನಂತವಾದ ಪರಲೋಕ ಜೀವಿತಕ್ಕಾಗಿ ಯಾವುದೇ ಪ್ರಯತ್ನ ಮತ್ತು ಯೋಜನೆಯ ಆವಶ್ಯಕತೆಯಿಲ್ಲವೇ? ಅದಕ್ಕಾಗಿ ನಾವು ಏನಾದರೂ ತಯಾರಿ ಮಾಡಬೇಡವೇ? ಬಹಳ ಮುಖ್ಯವಾದ ಸವಾಲಾಗಿದೆ." ಪವಿತ್ರ ಖುರ್‌ಆನಿನ ಶಿಕ್ಷಣದ ಬೆಳಕಿನಲ್ಲಿ ವಿವರಿಸುತ್ತಾ ಅವರು ಹೇಳುತ್ತಾರೆ: "ಮನುಷ್ಯನು ಸಣ್ಣದಾದ ಒಂದು ವ್ಯಾಪಾರ ಮಾಡುವಾಗಲೂ ಬಹಳ ಎಚ್ಚರಿಕೆ ವಹಿಸುತ್ತಾನೆ. ಪ್ರಯೋಜನಕಾರಿ ಮತ್ತು ಲಾಭದಾಯಕವಾದುದನ್ನು ಮಾತ್ರ ಯಾವಾಗಲೂ ಖರೀದಿ ಮಾಡುತ್ತಾನೆ. ಹೀಗಿರುವಾಗ, ಲಕ್ಷಗಟ್ಟಲೆ ಅಥವಾ ಕೋಟಿಗಟ್ಟಲೆ ಯಾ ಅಪರಿಮಿತವಾದ ಲಾಭ ಸಿಗುವ ವ್ಯಾಪಾರವನ್ನು ಮಾಡದೇ ಇರುವುದು ಎಷ್ಟು ದುಃಖಕರವಾದ ಸಂಗತಿಯಾಗಿದೆ. ಒಟ್ಟಿನಲ್ಲಿ ಕೆಲಸಕ್ಕೆ ಬರುವಂತಹ ಸಂಪತ್ತನ್ನು ಒಟ್ಟುಗೂಡಿಸಬೇಕು. ವಾರಸುದಾರರು ನಷ್ಟಗೊಳಿಸುವಂತಹ ಸಂಪತ್ತುಗಳನ್ನು ಒಟ್ಟುಗೂಡಿಸುವುದರಿಂದ ಏನು ಪ್ರಯೋಜನ? ಲೌಕಿಕವಾದ ಸಂಪತ್ತನ್ನು ವಾರಸುದಾರರು ನಾಶಗೊಳಿಸಲೂಬಹುದು. ಆದರೆ ಪವಿತ್ರ ಖುರ್‌ಆನ್ ಹೇಳಿದಂತಹ ವ್ಯಾಪಾರವನ್ನು ಮಾಡಿದರೆ, ಮನುಷ್ಯನಿಗೆ ಲಾಭ ಸಿಗುವುದು. ಅನಂತರ ಯಾರಿಗೂ ಅದನ್ನು ನಾಶ ಮಾಡಲು ಸಾಧ್ಯವಲ್ಲ. ಮರಣದ ನಂತರ ಅದೇ ಕೆಲಸಕ್ಕೆ ಬರುವಂತಹ ಸಂಪತ್ತಾಗಿದೆ. ಅಂತಹ ವ್ಯಾಪಾರಿಗಳ ಖಜಾಂಚಿ ಅಲ್ಲಾಹನೇ ಆಗುತ್ತಾನೆ. ಯಾರ ಖಜಾಂಚಿ ಅಲ್ಲಾಹನೇ ಆಗಿರುವಾಗ, ಅವನಿಗೆ ಬೇರೆಯವರ ಆವಶ್ಯಕತೆ ಏನಿದೆ? ಯಾರು ಅಲ್ಲಾಹನೊಂದಿಗೆ ವ್ಯಾಪಾರ ಮಾಡುತ್ತಾನೋ ಅವನ ಸೈನ್ಯದಲ್ಲಿ ಭರ್ತಿಯಾಗುತ್ತಾನೋ ಅವನಿಗೆ ಧೈರ್ಯವೂ ಇರಬೇಕು. ಬರೇ ಮಾತಿನ ಮೂಲಕವಲ್ಲ, ಯಥಾರ್ಥವಾಗಿ ತನ್ನ ಜೀವವನ್ನು ತ್ಯಾಗಮಾಡಲು ಸಿದ್ಧನಾಗಿರಬೇಕು. ಹಝ್ರತ್ ಮುಸ್ಲಿಹ್ ಮೌಊದ್[ರ], ಈ ರೀತಿಯಲ್ಲಿ ವ್ಯಾಪಾರ ಮಾಡಿದ್ದ ಹಝ್ರತ್ ಮೂಸಾ[ಅ] ಮತ್ತು ಹಝ್ರತ್ ಪೈಗಂಬರ್[ಸ] ಮುಂತಾದವರ ಯಶಸ್ಸುಗಳ ಮತ್ತು ವಿಜಯಗಳ ಬಗ್ಗೆ ಪ್ರಸ್ತಾಪಿಸಿದರು.

ಅವರಿಗೆ ಅಲ್ಲಾಹನು ಹೇಗೆ ಶತ್ರುಗಳ ಮೇಲೆ ವಿಜಯ ನೀಡಿದನು ಎಂದು ಹೇಳಿದರು. ಈ ವ್ಯಾಪಾರಕ್ಕೆ ಕೆಲವು ಶರತ್ತುಗಳು ಸಹ ಇವೆ. ಒಂದು, ಮನುಷ್ಯನು ಯಾವಾಗಲೂ ತನ್ನ ಪಾಪಗಳಿಗೆ ಅಲ್ಲಾಹನೊಡನೆ ಕ್ಷಮೆ ಕೇಳುತ್ತಿರಬೇಕು. ಈ ರೀತಿಯಲ್ಲಿ ಪಶ್ಚಾತ್ತಾಪಪಡುವುದರಿಂದ ಹೃದಯದ ತುಕ್ಕು ದೂರವಾಗುತ್ತದೆ. ಎರಡು, ಅಲ್ಲಾಹನೊಡನೆ ಇರುವ ಸಂಬಂಧವನ್ನು ಸುದೃಢಗೊಳಿಸಲು ಆರಾಧನೆ ಕಡೆಗೆ ಗಮನವಹಿಸಬೇಕು. ಮೂರು, ಅಲ್ಲಾಹನ ಸ್ತುತಿ ಮಾಡುತ್ತಾ, ಅವನಿಗೆ ಕೃತಜ್ಞತೆ ಅರ್ಪಿಸುತ್ತಾ ಅವನ ಮಾಡಿದ ಔದಾರ್ಯಗಳನ್ನು ನಿಯತವಾಗಿ ನೆನಪಿನಲ್ಲಿಡಬೇಕು. ನಾಲ್ಕು, ಒಳ್ಳೆಯ ಕಾರ್ಯಗಳನ್ನು ಉಪದೇಶಿಸಬೇಕು. ಐದು, ಅಲ್ಲಾಹನು ತಡೆದ ಸಂಗತಿಗಳಿಂದ ದೂರವಿರಬೇಕು. ಎಂದರೆ, ಅಲ್ಲಾಹನು ನಿಶ್ಚಯಿಸಿದ ಹದ್ದುಗಳನ್ನು ಮೀರಿ ವರ್ತಿಸಬಾರದು. ಈ ಎಲ್ಲ ಸಂಗತಿಗಳ ಪ್ರಕಾರ ನಡೆಯುವ ನಿಷ್ಠಾವಂತ ಸತ್ಯವಿಶ್ವಾಸಿ ವಿಜಯಿಯಾಗಿಕೊಂಡು ಅಲ್ಲಾಹನಿಂದ ಸುವಾರ್ತೆಯನ್ನು ಪಡೆಯುತ್ತಾನೆ.

ಅನಂತರ ಅವರ ಖಿಲಾಫತಿನ ಎರಡನೇ ವರ್ಷವಾದ 1916ರ ಜಲ್ಸದಲ್ಲಿ ಅವರು **"ದೇವಸ್ಮರಣೆ"** ಎಂಬ ವಿಷಯದಲ್ಲಿ ಭಾಷಣ ಮಾಡಿದರು. ಅದರಲ್ಲಿ ಅವರು ಅತುಲ್ಯವಾದ ಮತ್ತು ಮನಮೋಹಕ ಶೈಲಿಯಲ್ಲಿ ದೇವಸ್ಮರಣೆ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸುತ್ತಾ ದೇವಸ್ಮರಣೆ ಎಂದರೇನು?, ಅದರ ಆವಶ್ಯಕತೆ, ಅದರ ವಿಧಗಳು ಮತ್ತು ಅದರ ಪ್ರಯೋಜನಗಳ ಮೇಲೆ ಬೆಳಕು ಬೀರಿದರು. ಅವರು ಇದೇ ಭಾಷಣದಲ್ಲಿ, ಈಗಿನ ಸೂಫಿಗಳ ಸ್ಮರಣೆಯ ರೀತಿಯ ಬಗ್ಗೆ ಹೇಳುತ್ತಾ ಅದು ದೇವನಿಂದ ದಾಸನನ್ನು ದೂರಮಾಡುವಂತಹ ರೀತಿಯಾಗಿದೆ ಎಂದು ಹೇಳಿದರು. ಅವರು ಹೇಳಿದರು: ಸ್ಮರಣೆ ಎಂಬುದು ನಾಲ್ಕು ರೀತಿಯದ್ದಾಗಿದೆ. ಮೊದಲ ಸ್ಮರಣೆಯ ರೀತಿ ನಮಾಝ್ ಆಗಿದೆ. ಎರಡನೆಯದು ಪವಿತ್ರ ಖುರ್‌ಆನಿನ ಪಾರಾಯಣ, ಮೂರನೆಯದು ಅತ್ಯುನ್ನತನಾದ ಅಲ್ಲಾಹನ ಗುಣವೈಶಿಷ್ಟ್ಯಗಳನ್ನು ಹೇಳುವುದು, ಅದನ್ನು ಪುನರಾವರ್ತಿಸುವುದು, ಅದನ್ನು ಮನಸ್ಸಾರೆ ಅಂಗೀಕರಿಸುವುದು, ಅದನ್ನು ತನ್ನ ನಾಲಗೆಯ ಮೂಲಕ ವಿವರಿಸಿ ಹೇಳುವುದು. ನಾಲ್ಕನೆಯದು, ಅಲ್ಲಾಹನ ಗುಣವೈಶಿಷ್ಟ್ಯಗಳನ್ನು ಏಕಾಂತದಲ್ಲಿ ಮತ್ತು ಏಕಾಂಗಿಯಾಗಿ ಸ್ಮರಿಸುವುದು, ಅದರ ಬಗ್ಗೆ ಚಿಂತಿಸುವುದು ಹಾಗೂ ಜನರೆಡೆಯಲ್ಲಿ ಸಹ ಅವನ ಗುಣವೈಶಿಷ್ಟ್ಯಗಳ ಬಗ್ಗೆ ಹೇಳಿಕೊಡುವುದು. ಅದೇ ರೀತಿಯಲ್ಲಿ, ದೇವಸ್ಮರಣೆ ಸ್ವೀಕೃತಗೊಳ್ಳುವ ವಿಶೇಷವಾದ ಸಮಯಗಳನ್ನು ಸಹ ಹಝ್ರತ್ ಮುಸ್ಲಿಹ್ ಮೌಊದ್(ರ) ಅದರಲ್ಲಿ ಜನರಿಗೆ ಹೇಳಿಕೊಟ್ಟರು. ಮನುಷ್ಯನನ್ನು ಸ್ತುತ್ಯರ್ಹವಾದ ಸ್ಥಾನಕ್ಕೆ ತಲುಪಿಸುವಂತಹ ಸ್ಮರಣೆಯಾದ ತಹಜ್ಜುದ್ ನಮಾಝನ್ನು ನಿಯತವಾಗಿ ಅನುಷ್ಠಿಸಲು ತಾಕೀತು ಮಾಡಿದರು ಮತ್ತು ತಹಜ್ಜುದ್ ನಮಾಝನ್ನು ಕರಾರುವಕ್ಕಾಗಿ ಮತ್ತು ನಿಯತವಾಗಿ ಪಾಲಿಸುತ್ತಾ ಬರಲು ಡಜನ್‌ಗಟ್ಟಲೆ ಮಾರ್ಗಗಳನ್ನು ಸಹ ತಿಳಿಸಿಕೊಟ್ಟರು. ನಮಾಝ್‌ನಲ್ಲಿ ಏಕಾಗ್ರತೆ ಉಂಟಾಗಲು ಅವರು ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳ ಬೆಳಕಿನಲ್ಲಿ 22 ಮಾರ್ಗಗಳನ್ನು ಹೇಳಿಕೊಟ್ಟರು. ಕೊನೆಯಲ್ಲಿ ದೇವಸ್ಮರಣೆಯ ಹನ್ನೆರಡು ಮಹತ್ತಾದ ಪ್ರಯೋಜನಗಳನ್ನು ಸಹ ಹೇಳಿದರು. ಈ ಭಾಷಣದ ವೇಳೆ ಒಂದು ಸ್ಮರಣೀಯ ಸಂಗತಿ ಸಹ ನಡೆಯಿತು. ಅದೇನೆಂದರೆ, ಭಾಷಣವನ್ನು ಕೇಳುತ್ತಾ ಅಲ್ಲಿ ಒಬ್ಬ ಅಹ್ಮದಿಯೇತರ ಸೂಫಿ ಕುಳಿತುಕೊಂಡಿದ್ದರು. ಅವರು ಹಝ್ರತ್ ಮುಸ್ಲಿಹ್ ಮೌಊದ್‌ರಿಗೆ ಒಂದು ಕಾಗದದ ತುಣುಕಿನಲ್ಲಿ ಹೀಗೆ ಬರೆದುಕೊಟ್ಟರು: "ನೀವು ಎಂತಹ ಅನರ್ಥವನ್ನು ಮಾಡುತ್ತಿದ್ದೀರಿ. ಸೂಫಿಯರು ಹತ್ತು ಹತ್ತು ವರ್ಷಗಳ ದುಡಿಮೆಯನ್ನು ಇತರರಿಂದ ಮಾಡಿಸಿದ ನಂತರ ನೀವು ಹೇಳುತ್ತಿರುವ ಅಂಶಗಳಂತಹ ಒಂದು ಅಂಶವನ್ನು ಇತರರಿಗೆ ಹೇಳಿಕೊಡುತ್ತಾರೆ. ಆದರೆ ನೀವಂತು ಒಂದೇ ಸಮಯದಲ್ಲಿ, ಒಂದೇ ಒಂದು ಸಭೆಯಲ್ಲಿ ಎಲ್ಲ ಅಂಶಗಳನ್ನು ಹೇಳಿಕೊಟ್ಟಿದ್ದೀರಿ."

9-10-1917ರಂದು ಪಟಿಯಾಲದಲ್ಲಿ, **"ಅಲ್ಲಾಹನ ಪರಿಪಾಲನೆ ಮಾಡುವ ಗುಣವು ಪ್ರಪಂಚದ ಪ್ರತಿಯೊಂದು ವಸ್ತುವನ್ನು ಆವರಿಸಿದೆ"** ಎಂಬ ವಿಷಯದಲ್ಲಿ ಅವರು ಒಂದು ಭಾಷಣವನ್ನು ಮಾಡಿದರು. ಅಲ್ಲಾಹನ ಅಸ್ತಿತ್ವ, ಇಸ್ಲಾಂ, ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಮಸೀಹ್ ಮೌಊದರ ಸತ್ಯತೆಯನ್ನು ಅಲ್ಲಾಹನು ಪರಿಪಾಲನೆ ಎಂಬ ಗುಣವಿಶೇಷದ ಆಧಾರದಲ್ಲಿ ಸಾಬೀತುಗೊಳಿಸಿದರು. ಅವರು ಹೇಳಿದರು: "ಅಲ್ಲಾಹನ ಗುಣವಿಶೇಷತೆಗಳು ಅವನ ಅಸ್ತಿತ್ವದ ಪುರಾವೆಯಾಗಿವೆ. ದೇವನ ಗುಣವೈಶಿಷ್ಟ್ಯಗಳ ಕುರಿತು ಯೋಚಿಸುವುದರಿಂದ ಮತ್ತು ಆ ಶಕ್ತವಾದ ಶಕ್ತಿಗಳನ್ನು ಸೂಕ್ಷ್ಮವಾಗಿ ನೋಡುವುದರಿಂದ ಅವುಗಳು ಸದಾ ಪ್ರಕಟವಾಗುತ್ತಿವೆ ಎಂದು ಗೊತ್ತಾಗುವುದು. ಖಂಡಿತವಾಗಿಯೂ ಅತ್ಯಂತ ಶಕ್ತನಾದ, ಸರ್ವಜ್ಞಾನಿಯಾದ, ವಿವೇಕವಂತನಾದ, ಕಾರುಣ್ಯವಂತನೂ ದಯಾವಂತನೂ ಆದ ಒಬ್ಬ ದೇವನು ಇದ್ದಾನೆ ಎಂದು ಅಂಗೀಕರಿಸಬೇಕಾಗುವುದು. ಉಮ್ಮುಲ್ ಖುರ್‌ಆನ್ ಆದ ಸೂರಃ ಫಾತಿಹದಲ್ಲಿ ಈ ನಾಲ್ಕು ಗುಣವಿಶೇಷತೆಗಳನ್ನು ವಿವರಿಸಲಾಗಿದೆ. ಅವು ಅಲ್ಲಾಹನ ಇತರ ಎಲ್ಲ ಗುಣವೈಶಿಷ್ಟ್ಯಗಳ ಸಾರಾಂಶವಾಗಿದೆ. ಅದರ ಬಗ್ಗೆ ಯೋಚಿಸುವುದರಿಂದ ಮನುಷ್ಯನು ಎಲ್ಲ ರೀತಿಯ ತಪ್ಪಾದ ವಿಶ್ವಾಸಗಳಿಂದ ಮತ್ತು ದುಷ್ಕೃತ್ಯಗಳಿಂದ ರಕ್ಷಣೆ ಪಡೆಯಬಹುದಾಗಿದೆ. ಉದಾಹರಣೆಗೆ, ಮೊದಲ ಗುಣ, **ರಬ್ಬುಲ್ ಆಲಮೀನ್**, ಎಂದರೆ, ಸರ್ವಲೋಕಗಳ ಪರಿಪಾಲಕ ಎಂಬುದಾಗಿದೆ. ಅಲ್ಲಾಹನ ಪರಿಪಾಲಕ ಎಂಬ ಗುಣದೊಂದಿಗೆ ಎಲ್ಲ ಸೃಷ್ಟಿಗಳಿಗೆ ಸಂಬಂಧವಿದೆ. ಎಲ್ಲ ವಸ್ತುಗಳು ಅವನ ಪರಿಪಾಲನೆಯಿಂದ ಪ್ರಯೋಜನ ಪಡೆಯುತ್ತಿವೆ. ಅಲ್ಲಾಹನು ಸರ್ವಲೋಕಗಳ ಪರಿಪಾಲಕನು ಆದ ಕಾರಣದಿಂದ ಅಲ್ಲಾಹನು ಶರೀರದ ಪರಿಪಾಲನೆ ಮತ್ತು ಅಭಿವೃದ್ಧಿಗಾಗಿ ಉನ್ನತ ಮಟ್ಟದ ವ್ಯವಸ್ಥೆಯನ್ನು ಮಾಡಿರುವಾಗ, ಅವನು ಆತ್ಮದ ಜೀವನಕ್ಕಾಗಿಯೂ, ಎಂದರೆ ಆಧ್ಯಾತ್ಮಿಕ ಜೀವಿತಕ್ಕಾಗಿಯೂ ಖಂಡಿತವಾಗಿಯೂ ವ್ಯವಸ್ಥೆ ಮಾಡಿರಬೇಕು ಎಂಬುದನ್ನು ಸಮ್ಮತಿಸಬೇಕಾಗುವುದು. ಏಕೆಂದರೆ, ಆತ್ಮವು ಶರೀರಕ್ಕಿಂತ ಅಮೂಲ್ಯವಾದುದಾಗಿದೆ. ಅಲ್ಲಾಹನು ಹೇಳುತ್ತಾನೆ: **ವ ಇಮ್ಮಿನ್ ಉಮ್ಮತಿನ್ ಇಲ್ಲಾ ಖಲಾ ಫೀಹಾ ನದೀರ್**. ಎಂದರೆ, ಮನುಷ್ಯನ ತರಬೇತಿ, ಆಧ್ಯಾತ್ಮಿಕ ಪರಿಪಾಲನೆ ಮತು ಅಭಿವೃದ್ಧಿ ಮಾಡಲು ಪ್ರತಿಯೊಂದು ಸಮುದಾಯದಲ್ಲೂ ಅಲ್ಲಾಹನ ಪ್ರವಾದಿ ಬಂದಿದ್ದರು. ಕೊನೆಗೆ ಲೋಕದ ಎಲ್ಲ ಸಮುದಾಯಗಳ ಮತ್ತು ಕಾಲಘಟ್ಟದವರ ಸುಧಾರಣೆಗಾಗಿ ಅಲ್ಲಾಹನು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಳುಹಿಸಿದನು. ಅವರ ಮೂಲಕ ಶರೀಅತನ್ನು ಪರಿಪೂರ್ಣಗೊಳಿಸಲಾದ ಕಾರಣದಿಂದ ಹಝ್ರತ್ ಪೈಗಂಬರ್(ಸ) ಹೇಳಿದರು: ಇನ್ನು ಮುಂದೆ ಅಲ್ಲಾಹನ ಸಂಭಾಷಣೆಯ

ಅನುಗ್ರಹವನ್ನು ಪಡೆದ ದಾಸರು ಬಂದು ಜನರಿಗೆ ಈ ಶರೀಅತಿನ ಅರ್ಥವನ್ನು ವಿವರಿಸಿಕೊಟ್ಟು ಜನರನ್ನು ಅಲ್ಲಾಹನೊಡನೆ ಜೋಡಿಸುವರು. ಹೀಗೆ ಈ ಕಾಲಘಟ್ಟದಲ್ಲಿ ಸಹ ಅಲ್ಲಾಹನ ಪರಿಪಾಲನೆ ಎಂಬ ಗುಣದ ಪ್ರಕಾರ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರನ್ನು ಕಳುಹಿಸಿದನು. ಅವರು ಅಲ್ಲಾಹನೊಡನೆ ಸಂಭಾಷಣೆ ನಡೆಸುತ್ತಿರುವುದಾಗಿಯೂ ಜನರ ಸುಧಾರಣೆಗೆ ಬಂದಿರುವುದಾಗಿಯೂ ವಾದಿಸಿದ್ದರು. ಅವರ ಭವಿಷ್ಯವಾಣಿಗಳನ್ನು ಈಡೇರಿಸುವುದರ ಮೂಲಕ ಅಲ್ಲಾಹನು ತನ್ನ ಸಹಾಯಹಸ್ತವನ್ನು ಪ್ರಕಟಿಸಿದನು. ಜೀವಂತ ದೃಷ್ಟಾಂತಗಳು ಅವರ ವಾದದ ಸತ್ಯತೆಯನ್ನು ಸಾಬೀತುಗೊಳಿಸಿದವು. ಕೊನೆಗೆ ಹಝ್ರತ್ ಮುಸ್ಲಿಹ್ ಮೌಊದ್<sup>(ರ)</sup> ಹೇಳಿದರು: ಇಸ್ಲಾಂ ಧರ್ಮ ಜೀವಂತ ದೇವನನ್ನು ಮುಂದಿರಿಸುತ್ತದೆ. ಅಲ್ಲಾಹನು ಜೀವಂತವಾಗಿದ್ದಾನೆ ಎಂಬುದಕ್ಕೆ ಅದರಲ್ಲಿ ಪುರಾವೆಗಳಿವೆ. ಹಿಂದಿನ ಕಾಲದ ಜನರ ಆಧ್ಯಾತ್ಮಿಕ ಪರಿಪಾಲನೆಯನ್ನು ದೇವನು ಮಾಡುತ್ತಿದ್ದ ರೀತಿಯಲ್ಲೇ ಈಗಲೂ ಮಾಡುತ್ತಿದ್ದಾನೆ. ಇಸ್ಲಾಂ ಹೇಳುವ ಮಾರ್ಗಗಳ ಮೇಲೆ ನಡೆಯುತ್ತಾ ಇಂದು ಸಹ ಸಾವಿರಾರು ವರ್ಷಗಳ ಹಿಂದೆ ಲಭಿಸುತ್ತಿದ್ದ ಅದೇ ಅನುಗ್ರಹಗಳನ್ನು ಮತ್ತು ಪ್ರಯೋಜನಗಳನ್ನು ಪಡೆಯಬಹುದಾಗಿದೆ.

ಅವರ ಇನ್ನೊಂದು ಉಪನ್ಯಾಸ **"ಇಸ್ಲಾಮಿನಲ್ಲಿ ಬಿರುಕಿನ ಆರಂಭ"** ಎಂಬುದಾಗಿತ್ತು. ಅವರು 1919ರಲ್ಲಿ ಮಾರ್ಟಿನ್ ಹಿಸ್ಟಾರಿಕಲ್ ಸೊಸೈಟಿಯ ಒಂದು ಸಭೆಯನ್ನು ಸಂಬೋಧಿಸುತ್ತಾ ಇಸ್ಲಾಮಿಯಾ ಕಾಲೇಜ್ ಲಾಹೋರಿನಲ್ಲಿ ಈ ಭಾಷಣವನ್ನು ನೀಡಿದ್ದರು. ಇದು ಸುಮಾರು ನೂರು ಪುಟಗಳ ಉಪನ್ಯಾಸವಾಗಿದೆ. ಇತಿಹಾಸದ ಹಿರಿಯ ಪ್ರೊಫೆಸರ್ ಆದ ಅಬ್ದುಲ್ ಖಾದಿರ್ ಸಾಹಿಬರ ಅಧ್ಯಕ್ಷತೆಯಲ್ಲಿ ಇದನ್ನು ನಡೆಸಲಾಗಿತ್ತು. ಅವರು ಅಹ್ಮದಿಯಾಗಿರಲಿಲ್ಲ. ಈ ವಿಷಯದ ಪ್ರಾಮುಖ್ಯತೆಯನ್ನು ವಿವರಿಸುತ್ತಾ ಹಝುರತ್ ಮುಸ್ಲಿಹ್ ಮೌಊದ್<sup>(ರ)</sup> ಹೇಳಿದರು: ಇಸ್ಲಾಮಿನಲ್ಲಿ ಭಿನ್ನತೆಯ ಆರಂಭ ಹಝ್ರತ್ ಪೈಗಂಬರರ<sup>(ಸ)</sup> ನಿಧನದ 15 ವರ್ಷಗಳ ನಂತರ ಉಂಟಾಗಿತ್ತು. ಆ ಕಾಲದ ಮುಸ್ಲಿಮರ ಎಡೆಯಲ್ಲಿ ಬಿರುಕು ವರ್ಧಿಸುತ್ತಾ ಹೋಯಿತು. ಆ ಕಾಲದ ಚರಿತ್ರೆ ಅತ್ಯಂತ ಅಂಧಕಾರದ ಪರದೆಗಳಲ್ಲಿ ಮುಚ್ಚಲ್ಪಟ್ಟಿದೆ. ಇದು ಇಸ್ಲಾಮಿನ ಶತ್ರುಗಳ ಪ್ರಕಾರ ಇಸ್ಲಾಮಿನ ಕುರೂಪಿಯಾದ ಕಲೆಯಾಗಿದೆ. ಮುಸ್ಲಿಮರಿಗೂ ತಲೆ ಸುತ್ತು ಬರಿಸುವಂತಹ ಸವಾಲಾಗಿದೆ. ಆ ಕಾಲದ ಚರಿತ್ರೆಯ ಕೆಸರಿನಿಂದ ಇಸ್ಲಾಮನ್ನು ಕ್ಷೇಮವಾಗಿ ಹೊರಗೆ ತೆಗೆಯುವುದರಲ್ಲಿ ಯಶಸ್ಸು ಲಭಿಸಿದವರು ಬಹಳ ಕಡಿಮೆ. ಆದ್ದರಿಂದ ನಿಮ್ಮ ಮುಂದೆ ಇದರ ಬಗ್ಗೆ ಕೆಲವು ಸಂಗತಿಗಳನ್ನು ಇರಿಸಲು ನಾನು ಬಯಸಿದ್ದೇನೆ. ಹಝ್ರತ್ ಮುಸ್ಲಿಹ್ ಮೌಊದ್‌ರ ಈ ಭಾಷಣದಲ್ಲಿ ಅಮೂಲ್ಯವಾದ ಉಪದೇಶಗಳಿದ್ದುವು, ಸಂಶೋಧನೆಗಳಿದ್ದುವು. ಅದರ ಸಂಕ್ಷೇಪ ಹೀಗಿದೆ: ಇಸ್ಲಾಮಿನಲ್ಲಿ ಗಲಭೆಗೆ ಕಾರಣಕರ್ತರು ಕೆಲವು ಹಿರಿಯ ಸಹಾಬರು ಆಗಿದ್ದರು ಎಂಬ ಭಾವನೆ ತಪ್ಪು. ಈ ಉಪನ್ಯಾಸದಲ್ಲಿ ಹಝ್ರತ್ ಉಸ್ಮಾನ್‌ರ<sup>(ರ)</sup> ಆರಂಭ ಕಾಲದ ಜೀವಿತ, ಹಝ್ರತ್ ಪೈಗಂಬರರ<sup>(ಸ)</sup> ದೃಷ್ಟಿಯಲ್ಲಿ ಹಝ್ರತ್ ಉಸ್ಮಾನ್‌ರ<sup>(ರ)</sup> ಪದವಿ, ಈ ಪಿತೂರಿ ಎಲ್ಲಿಂದ ಉದ್ಭವಿಸಿತು ಎಂಬುದರ ಬಗ್ಗೆಯೆಲ್ಲ ಅವರು ವಿವರಿಸಿದರು. ಇಸ್ಲಾಮಿನ ಖಿಲಾಫತ್ ಒಂದು ಧಾರ್ಮಿಕ ವ್ಯವಸ್ಥೆಯಾಗಿತ್ತು. ಸಹಾಬರ ಬಗ್ಗೆ ತಪ್ಪುಭಾವನೆ ಇರಿಸುವುದು ಅನಾವಶ್ಯಕ ಎಂದು ಹೇಳುತ್ತಾ ಪಿತೂರಿಯ ಹೇತು ಮತ್ತು ಅದು ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಆರಂಭವಾಗಲಿಕ್ಕಿರುವ ಕಾರಣಗಳನ್ನು ಅವರು ವಿವರಿಸಿದರು. ಪಿತೂರಿಯ ಕಾರಣೀಭೂತನಾದ ಅಬ್ದುಲ್ಲಾಹ್ ಬಿನ್ ಸಬಾ ಎಂಬವನ ಸ್ಥಿತಿಗತಿಗಳು ಮತ್ತು ಕೂಫ, ಬಸ್ರ ಮತ್ತು ಸಿರಿಯದಲ್ಲಿ ಆ ಕಾಲದಲ್ಲಿ ನೆಲೆಸಿದ್ದ ಮುಸ್ಲಿಮರ ಸಾಮಾನ್ಯ ಮನಃಸ್ಥಿತಿಯ ಬಗ್ಗೆ ಬೆಳಕುಬೀರಿದರು. ಹಝ್ರತ್ ಉಸ್ಮಾನ್<sup>(ರ)</sup> ತನ್ನ ಇಷ್ಟ ಪ್ರಕಾರ ಫಿತ್ನಕ್ಕೆ ಕಾರಣೀಭೂತರಾದ ವ್ಯಕ್ತಿಗಳನ್ನು ಅಧಿಕಾರಿಗಳಾಗಿ ನಿಶ್ಚಯಿಸಿದ್ದರು ಎಂದು ಹಝ್ರತ್ ಉಸ್ಮಾನ್‌ರ ಬಗ್ಗೆ ಆರೋಪಿಸಲಾಗುತ್ತದೆ. ಹಝ್ರತ್ ಮುಸ್ಲಿಹ್ ಮೌಊದ್<sup>(ರ)</sup> ಇದರ ಬಗ್ಗೆ ತನ್ನ ಅಭಿಪ್ರಾಯವನ್ನು ನೀಡುತ್ತಾ ಹೇಳುತ್ತಾರೆ: ತನಿಖೆ ನಡೆಸಲು ಕಳುಹಿಸಲಾದ ವ್ಯಕ್ತಿಗಳು ಮಹೋನ್ನತರಾದ ಮತ್ತು ಫಿತ್ನದೊಂದಿಗೆ ಸಂಬಂಧವಿಲ್ಲದವರಾಗಿದ್ದರು. ಅವರ ತನಿಖೆಯ ಬಗ್ಗೆ ಯಾರಿಗೂ ಆಕ್ಷೇಪವೆತ್ತಲು ಎಡೆಯಿಲ್ಲ. ಹಝ್ರತ್ ಉಸ್ಮಾನ್<sup>(ರ)</sup> ತನಿಖೆಗಾಗಿ ಕಳುಹಿಸಿದ ಮೂವರು ಸಹಾಬಿಯರ ಮತ್ತು ಇತರ ಪಟ್ಟಣಗಳಿಗೆ ಕಳುಹಿಸಲಾದ ವ್ಯಕ್ತಿಗಳ ಒಮ್ಮತಾಭಿಪ್ರಾಯದೊಂದಿಗೆ ಹೀಗೆ ತೀರ್ಪು ನೀಡಿದ್ದರು: ದೇಶದಲ್ಲಿ ಶಾಂತಿ ಸಮಾಧಾನವ ವಾತಾವರಣವಿದೆ. ದೌರ್ಜನ್ಯ ಮತ್ತು ಅತಿರೇಕದ ಹೇಳಹೆಸರಿಲ್ಲ. ಅಧಿಕಾರಿಗಳು ನ್ಯಾಯ ಮತ್ತು ನೀತಿಯಿಂದ ಕೆಲಸಮಾಡುತ್ತಿದ್ದಾರೆ. ಈ ತೀರ್ಪಿನ ನಂತರ ಯಾವುದೇ ಸಂಶಯಕ್ಕೆ ಎಡೆಯಿಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಈ ಎಲ್ಲ ಪಿತೂರಿಗಳು ಕೆಲವು ಕಿಡಿಗೇಡಿಗಳ ಕುಕೃತ್ಯಗಳ ಮತ್ತು ಅಬ್ದುಲ್ಲಾಹ್ ಬಿನ್ ಸಬಾರ ಕಾರಣದಿಂದ ಉಂಟಾಗಿದ್ದವು. ಹಝ್ರತ್ ಉಸ್ಮಾನ್<sup>(ರ)</sup> ಮತ್ತು ಅವರ ಅಧಿಕಾರಿಗಳು ಎಲ್ಲ ರೀತಿಯ ಆರೋಪಗಳಿಂದ ಮುಕ್ತರಾಗಿದ್ದರು. ಹಝ್ರತ್ ಉಸ್ಮಾನ್<sup>(ರ)</sup> ತನ್ನ ಸಹಜ ಸ್ವಭಾವದ ಪ್ರಕಾರ ಸೌಮ್ಯತೆಯಿಂದ ವರ್ತಿಸುತ್ತಿದ್ದರು. ಗಲಭೆಗಾರರ ಪಿತೂರಿ ಮತ್ತು ಫಿತ್ನಗಳನ್ನು ನೋಡಿಕೊಂಡು ಹೀಗೆ ಹೇಳುತ್ತಿದ್ದರು: ನಾನು ನನ್ನ ಕೈಯಿಂದ ಮುಸ್ಲಿಮರ ರಕ್ತವನ್ನು ಹರಿಸಲು ಬಯಸುವುದಿಲ್ಲ. ಶ್ರೇಷ್ಠ ಸಹಾಬರು ಮತ್ತು ಹಝ್ರತ್ ಮುಆವಿಯ ಇದಕ್ಕೆ ಸಂಬಂಧಿಸಿ ಶಾಂತಿ ಸ್ಥಾಪನೆಗಾಗಿ ಕೆಲವು ಸಲಹೆಗಳನ್ನು ಕೊಟ್ಟರು. ಆದರೆ ಹಝ್ರತ್ ಉಸ್ಮಾನ್<sup>(ರ)</sup> ತನ್ನ ಸೌಮ್ಯತೆಯ ರೀತಿಯನ್ನೇ ಕೈಗೊಂಡಿದ್ದರು. ಮಾತ್ರವಲ್ಲ, ಆಕ್ಷೇಪಕರ ಬಾಯಿ ಮುಚ್ಚಿಸಲು, ಅವರ ಬೇಡಿಕೆಗಳನ್ನು ಅನುಮತನೀಯವಾದ ಮಿತಿಯ ವರೆಗೆ ಈಡೇರಿಸುತ್ತಿದ್ದರು. ವರದಿಗಳ ವಿರೋಧಾಭಾಸವನ್ನು ಮತ್ತು ಚಾರಿತ್ರಿಕ ಸ್ಥಿತಿಗತಿಗಳನ್ನು ಸರಿಯಾಗಿ ಅರಿಯುವಂತಾಗಲು ಅತ್ಯಂತ ಆವಶ್ಯಕ ಸಂಗತಿಯನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್<sup>(ರ)</sup> ಹೇಳುತ್ತಾರೆ: ಆ ಕಾಲದ ಚರಿತ್ರೆಗಳ ಕುರಿತು ಬಹಳ ಎಚ್ಚರಿಕೆ ವಹಿಸಬೇಕಾಗಿದೆ. ಏಕೆಂದರೆ, ಉಭಯ ಪಕ್ಷದವರಲ್ಲಿ ಯಾವುದಾದರೂ ಒಂದರ ಬಗ್ಗೆ ಸಹಾನುಭೂತಿ ಹೊಂದಿರದ ಜನರು ನಂತರ ಕಾಲದಲ್ಲಿ ಬಂದಿಲ್ಲ. ಇದು ಚರಿತ್ರೆಗೆ ಅತ್ಯಂತ ಹಾನಿಯನ್ನು ಉಂಟುಮಾಡುತ್ತದೆ. ಒಂದು ಸಂಗತಿಯ ಬಗ್ಗೆ ತೀವ್ರವಾದ ಶತ್ರುತ್ವ ಅಥವಾ ತೀವ್ರವಾದ ಪ್ರೇಮವಿದ್ದರೆ, ವರದಿಗಳನ್ನು ಸರಿಯಾದ ರೀತಿಯಲ್ಲಿ ಅರಿಯಲು ಸಾಧ್ಯವಾಗಲಿಕ್ಕಿಲ್ಲ. ಲೋಕದ ಘಟನೆಗಳು ಒಂದು ಸರಪಳಿಯ ಹಾಗಿರುತ್ತದೆ. ಒಂದು ಪ್ರತ್ಯೇಕ ಘಟನೆಯ ನೈಜತೆಯನ್ನು ಅರಿಯಲು ಅದನ್ನು ಆ ಸರಪಳಿಯೊಂದಿಗೆ ಸೇರಿಸಿ ನೋಡಬೇಕಾಗಿದೆ. ಆ ಘಟನೆ ಅಲ್ಲಿ ಸರಿಯಾಗಿ ಇರಿಸಲು ಸಾಧ್ಯವಾಗುತ್ತಿದೆಯೋ ಇಲ್ಲವೋ ಎಂದು

ನೋಡಬೇಕಾಗಿದೆ. ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಸಂಶೋಧನೆಯ ಸಂಕ್ಷೇಪ ಹೀಗಿದೆ: ಹಝ್ರತ್ ಉಸ್ಮಾನ್(ರ) ಮತ್ತು ಇತರ ಸಹಾಬಿಯರಿಗೆ ಯಾವುದೇ ಪಿತೂರಿಯಲ್ಲಿ ಕೈವಾಡವಿರಲಿಲ್ಲ. ಬದಲಿಗೆ ಅವರು ಅತ್ಯಂತ ಉನ್ನತ ಸ್ವಭಾವವನ್ನು ತೋರಿಸಿದ್ದರು. ಅವರ ಹೆಜ್ಜೆಗಳು ಒಳಿತಿನ ಅತ್ಯಂತ ಉನ್ನತ ಪದವಿಯಲ್ಲಿ ನೆಲೆನಿಂತಿದ್ದವು. ಸಹಾಬಿಯರಿಗೆ ಹಝ್ರತ್ ಉಸ್ಮಾನರ ಖಿಲಾಫತ್ ಮೇಲೆ ಯಾವುದೇ ಆಕ್ಷೇಪವಿರಲಿಲ್ಲ. ಕೊನೆಯುಸಿರು ತನಕ ನಿಷ್ಠೆಯಿಂದ ಇದ್ದರು. ಹಝ್ರತ್ ಅಲಿ, ಹಝ್ರತ್ ತಲ್‌ಹ ಮತ್ತು ಹಝ್ರತ್ ಝುಬೈರ್(ರ) ರಹಸ್ಯವಾದ ಕುತಂತ್ರಗಳನ್ನು ಮಾಡಿದ್ದರು ಎಂಬ ಆರೋಪ ಸಂಪೂರ್ಣವಾಗಿಯೂ ತಪ್ಪಾಗಿದೆ. ಅನ್ಸಾರರು ಹಝ್ರತ್ ಉಸ್ಮಾನರೊಡನೆ ಬೇಸರಗೊಂಡಿದ್ದರು ಎಂಬ ಆರೋಪವೂ ತಪ್ಪಾಗಿದೆ. ಏಕೆಂದರೆ, ಅನ್ಸಾರರ ಎಲ್ಲ ನೇತಾರರು ಈ ಫಿತ್ನವನ್ನು ದೂರಮಾಡಲು ಪ್ರಯತ್ನಿಸಿದ್ದರು ಎಂದು ನಾವು ಕಾಣುತ್ತೇವೆ.

ಈ ಉಪನ್ಯಾಸವನ್ನು ಮೊದಲ ಬಾರಿ ಗ್ರಂಥರೂಪದಲ್ಲಿ ಪ್ರಕಾಶಿಸಲಾದಾಗ ಕೆಲವರು ತಮ್ಮ ಅಭಿಪ್ರಾಯವನ್ನು ಹೇಳಿದ್ದರು. ಲಾಹೋರಿನ ಇಸ್ಲಾಮಿಯ್ಯ ಕಾಲೇಜಿನ ಪ್ರೊಫೆಸರ್ ಆದ ಸಯ್ಯದ್ ಅಬ್ದುಲ್‌ಖಾದಿರ್ ಸಾಹಿಬ್ ಎಂ.ಎ. ಹೀಗೆ ಬರೆದರು: **"**ಈ ಭಾಷಣ ಅತ್ಯಂತ ಜ್ಞಾನಭರಿತವಾಗಿದೆ ಎಂಬುದಕ್ಕೆ ಆದರಣೀಯ ತಂದೆಯ ಪ್ರತಿಭಾಶಾಲಿಯಾದ ಪುತ್ರನಾದ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬರ ಹೆಸರೇ ಸಾಕಷ್ಟು ಖಾತರಿಪಡಿಸುತ್ತದೆ. ನನಗೆ ಚರಿತ್ರೆಯ ಬಗ್ಗೆ ಗೊತ್ತಿದೆ. ಮುಸ್ಲಿಮರು ಮತ್ತು ಮುಸ್ಲಿಮೇತರ ಚರಿತ್ರೆಗಾರರಲ್ಲಿ ಕೆಲವೇ ಕೆಲವರು ಹಝ್ರತ್ ಉಸ್ಮಾನರ(ರ) ಖಿಲಾಫತ್ ಕಾಲದ ಭಿನ್ನತೆಗಳ ಬಗ್ಗೆ ಆಳವಾಗಿ ತನಿಖೆ ನಡೆಸಿರುವರು. ಕೆಲವರಿಗೆ ಮಾತ್ರ ಅದರ ಯಥಾರ್ಥ ಕಾರಣಗಳ ಬಗ್ಗೆ ಅರಿಯಲು ಸಾಧ್ಯವಾಗಿದೆ. ಹಝ್ರತ್ ಮಿರ್ಝಾ ಬಶೀರುದ್ದೀನ್ ಸಾಹಿಬರಿಗೆ ಈ ಪಿತೂರಿಯ ಕಾರಣವನ್ನು ಅರಿಯಲು ಸಾಧ್ಯವಾಗಿದೆ ಎಂದು ಮಾತ್ರವಲ್ಲ, ಖಿಲಾಫತ್ ಪದವಿ ದೀರ್ಘ ಕಾಲದ ವರೆಗೆ ಅಲುಗಾಡುತ್ತಿರಲು ಕಾರಣವಾದ ಸಂಗತಿಗಳನ್ನು ಅವರು ಅತ್ಯಂತ ಸ್ಪಷ್ಟವಾದ ರೀತಿಯಲ್ಲಿ ನಿರರ್ಗಳವಾಗಿ ವಿವರಿಸಿದರು. ಇಸ್ಲಾಮಿನ ಚರಿತ್ರೆಯ ಅಭಿರುಚಿ ಹೊಂದಿದವರು ಇಂತಹ ಸಾಕ್ಷ್ಯಾಧಾರಗಳಿಂದ ಕೂಡಿದ ಉಪನ್ಯಾಸವನ್ನು ಕೇಳಿರಲು ಸಾಧ್ಯವಿಲ್ಲ ಎಂದು ನನಗೆ ತೋರುತ್ತದೆ. ಹಝ್ರತ್ ಉಸ್ಮಾನರ ಖಿಲಾಫತ್ ಕಾಲದ ಯಥಾರ್ಥ ಇಸ್ಲಾಮಿನ ಚರಿತ್ರೆಯನ್ನು ಓದಿದಷ್ಟು ಈ ಉಪನ್ಯಾಸವು ಗುಣಪಾಠವುಳ್ಳದ್ದು ಮತ್ತು ಅಮೂಲ್ಯವಾದುದೆಂದು ಗೊತ್ತಾಗುವುದು.**"**

ಅವರ ಇನ್ನೊಂದು ಭಾಷಣ **"ದೇವವಿಧಿ"** ಎಂಬ ವಿಷಯದಲ್ಲಾಗಿತ್ತು. 1919ರ ಜಲ್ಸ ಸಾಲಾನದ ಸಂದರ್ಭದಲ್ಲಿ, ಖಾದಿಯಾನಿನ ಮಸ್ಜಿದ್ ನೂರ್‌ನಲ್ಲಿ ಈ ಭಾಷಣವನ್ನು ಅವರು ಮಾಡಿದ್ದರು. ಅತ್ಯಂತ ಕಷ್ಟಕರ ಮತ್ತು ಸೂಕ್ಷ್ಮವಾದ ಈ ವಿಷಯದ ಬಗ್ಗೆ ಅವರು ಜ್ಞಾನಭರಿತ ಭಾಷಣವನ್ನು ನೀಡಿದರು. ಅವರು ಹೇಳಿದರು: ನಾನು ಅಲ್ಲಾಹನೊಡನೆ ವಿನಮ್ರತೆಯಿಂದ ಹೀಗೆ ಪ್ರಾರ್ಥಿಸಿದೆ: ಹೇ ಅಲ್ಲಾಹ್, ಈ ಉಪನ್ಯಾಸವನ್ನು ಮಾಡುವುದು ಸರಿಯಲ್ಲವೆಂದಾದರೆ, ಇದನ್ನು ಮಾಡಬಾರದೆಂಬ ಭಾವನೆಯನ್ನು ನನ್ನ ಹೃದಯದಲ್ಲಿ ಹುಟ್ಟಿಸು. ಆದರೆ ಅದನ್ನು ಮಾಡಬೇಕೆಂಬ ಪ್ರೇರಣೆ ಅಲ್ಲಾಹನಿಂದ ಲಭಿಸಿತ್ತು. ಈ ವಿಷಯ ಬಹಳ ಕಷ್ಟಕರವಾದುದಾಗಿದೆ. ಇದನ್ನು ಅರಿಯಲು ಬಹಳ ಪ್ರಯತ್ನ ಮತ್ತು ಪರಿಶ್ರಮದ ಆವಶ್ಯಕತೆಯಿದೆ. ಆದರೆ ನೀವು ಅದನ್ನು ಮನವರಿಕೆ ಮಾಡಿದರೆ, ನಿಮಗೆ ತುಂಬ ಪ್ರಯೋಜನಕರವಾಗಿರುವುದು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಈ ಭಾಷಣದ ಹಲವು ಉಲ್ಲೇಖಗಳನ್ನು ತೆಗೆಯುತ್ತಾ ಹೇಳುತ್ತಾರೆ: ವಿದ್ಯಾವಂತರೂ ಅವಿದ್ಯಾವಂತರೂ ಬುದ್ಧಿವಂತರೂ ಅಲ್ಪಬುದ್ಧಿಯವರೂ ಇರುವ ಒಂದು ಸಾರ್ವಜನಿಕ ಸಭೆಯಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಈ ವಿಷಯದಲ್ಲಿ ಭಾಷಣ ಮಾಡಿದ್ದು ಖಂಡಿತವಾಗಿಯೂ ಸಾಧಾರಣ ಸಂಗತಿಯಾಗಿರಲಿಲ್ಲ. ಇಷ್ಟು ಉತ್ತಮವಾಗಿ ಈ ವಿಷಯವನ್ನು ಹೇಳಲು ಅವರಿಗೆ ಮಾತ್ರ ಅರ್ಹತೆಯಿತ್ತು. ಈ ಭಾಷಣ ಏನಾಗಿತ್ತು. ಸಾಹಿತ್ಯಲೋಕದ ಒಂದು ಅತ್ಯುತ್ತಮ ರಚನೆಯಾಗಿತ್ತು. ದೇವವಿಧಿಯ ಪ್ರಾಮುಖ್ಯತೆ ಮತ್ತು ಅದರ ಬಗ್ಗೆ ಹಝ್ರತ್ ಪೈಗಂಬರರ(ಸ) ಬೋಧನೆಗಳನ್ನು ಹೇಳಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ವಿಷಯದ ಬಗ್ಗೆ ತನ್ನ ಅಭಿಪ್ರಾಯವನ್ನು ಹೀಗೆ ಹೇಳಿದರು: ದೇವವಿಧಿಯಲ್ಲಿ ಮತ್ತು ದೇವನ ಅಸ್ತಿತ್ವದಲ್ಲಿ ನಂಬಿಕೆಯಿರಿಸುವುದು ಎಂಬ ಎರಡು ವಿಷಯಗಳಿಗೆ ಪರಸ್ಪರ ಸಂಬಂಧವಿದೆ. ಅನಂತರ ಅವರು ದೇವವಿಧಿಯ ಕುರಿತು ವಿವಾದಾಸ್ಪದ ದೃಷ್ಟಿಕೋನಗಳ ಬಗ್ಗೆ ಚರ್ಚಿಸಿಕೊಂಡು ಹಝ್ರತ್ ಪೈಗಂಬರರ(ಸ) ಕೆಲವು ಹದೀಸ್‌ಗಳ ನಡುವೆ ಇರುವ ವ್ಯತ್ಯಾಸವನ್ನು ಸರಿಹೊಂದಿಸಿ ಹೇಳಿದರು. ದೇವವಿಧಿಯ ವಿಷಯಗಳನ್ನು ಮನವರಿಕೆ ಮಾಡದಿರುವುದರ ಕಾರಣದಿಂದ ಮನುಷ್ಯನಿಗೆ ಉಂಟಾದ ದೊಡ್ಡ ದೊಡ್ಡ ತಪ್ಪುಗಳ ಬಗ್ಗೆ ಅವರು ಪ್ರಸ್ತಾಪಿಸಿದರು. **ವಹ್‌ದತುಲ್ ವಜೂದ್** (ಅದ್ವೈತ) ವಿಶ್ವಾಸದ ತಪ್ಪುಗಳನ್ನು ವಿವರಿಸುತ್ತಾ ಪವಿತ್ರ ಖುರ್‌ಆನಿನ 6 ವಚನಗಳಿಂದ ಸೂಕ್ಷ್ಮ ಮತ್ತು ಅರ್ಥಪೂರ್ಣ ಪುರಾವೆಗಳನ್ನು ಮುಂದಿರಿಸಿಕೊಂಡು ಈ ವಿಶ್ವಾಸವನ್ನು ರದ್ದುಗೊಳಿಸಿದರು. ಅದರ ಮತ್ತೊಂದು ಎಲ್ಲೆಯನ್ನು ಸಹ ತಪ್ಪೆಂದು ಸಾಬೀತುಪಡಿಸಿದರು. ಅಲ್ಲಾಹನು ಏನೂ ಮಾಡಲು ಶಕ್ತನಲ್ಲ, ಎಲ್ಲವೂ ಯೋಜನೆ ಮತ್ತು ಪ್ರಯತ್ನದಿಂದ ಮಾತ್ರವೆಂಬ ಭಾವನೆಯನ್ನು ಸಹ ಪುರಾವೆಗಳ ಮೂಲಕ ಖಂಡಿಸಿದರು. ದೈವಿಕ ಜ್ಞಾನ ಮತ್ತು ದೈವಿಕ ವಿಧಿ ಇವೆರಡನ್ನು ಮಿಶ್ರ ಮಾಡಿದ ಕಾರಣದಿಂದ ಮನುಷ್ಯನ ಯೋಚನೆಗಳು ಮಾಡಿದ ತಪ್ಪುಗಳನ್ನು ಅತ್ಯಂತ ಉತ್ತಮ ರೀತಿಯಲ್ಲಿ ವಿಶ್ಲೇಷಣೆ ಮಾಡಿಕೊಂಡು ಈ ವಿಷಯವನ್ನು ಚೆನ್ನಾಗಿ ವಿವರಿಸಿದರು. ಈ ಉಪನ್ಯಾಸದಲ್ಲಿ ದೇವವಿಧಿಯ ವಿಷಯದ ಬಗ್ಗೆ ಎಲ್ಲ ರೀತಿಯಲ್ಲೂ ಚರ್ಚಿಸಲಾಗಿದೆ. ಅದರ ಕುರಿತು ಹಳೆಯ ಮತ್ತು ಹೊಸ ಆಕ್ಷೇಪಗಳಿಗೆ ಉತ್ತರಗಳನ್ನು ಸಹ ಅದರಲ್ಲಿ ನೀಡಲಾಗಿದೆ. ದೇವವಿಧಿಯ ವಿಷಯವನ್ನು ಸರಿಯಾದ ಅರ್ಥದಲ್ಲಿ ಮನವರಿಕೆ ಮಾಡಿಕೊಂಡು ಅದರ ಆವಶ್ಯಕತೆಗಳನ್ನು ಈಡೇರಿಸುವುದರಿಂದ ಮನುಷ್ಯನಿಗೆ ಸಿಗಬಹುದಾದ ಏಳು ಆಧ್ಯಾತ್ಮಿಕ ಪದವಿಗಳನ್ನು ಸಹ ಪ್ರಸ್ತಾಪಿಸಿದರು. ಹೇಗಿದ್ದರೂ ಇದು ಓದಬೇಕಾದ ಉಪನ್ಯಾಸವಾಗಿದೆ. ದೇವವಿಧಿಯ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಿರುವವರು ಇದನ್ನು ಓದಬೇಕು.

**"ತುರ್ಕಿಯ ಒಪ್ಪಂದ ಮತ್ತು ಮುಸ್ಲಿಮರು ಮುಂದೆ ಮಾಡಬೇಕಾದ ಕೆಲಸಗಳು"** ಎಂಬ ವಿಷಯದಲ್ಲಿ ಮುಸ್ಲಿಮರ ಮಾರ್ಗದರ್ಶನಕ್ಕಾಗಿ

ಅವರು ಒಂದು ಉಪನ್ಯಾಸವನ್ನು ನೀಡಿದ್ದರು. ಅಲಾಹಬಾದಿನ ಖಿಲಾಫತ್ ಕಮಿಟಿಯ ಅಧೀನದಲ್ಲಿ ಒಂದು ಕಾನ್ಫೆರೆನ್ಸ್ ನಡೆದಿತ್ತು. ಅದರ ಸಂಕ್ಷೇಪ ಹೀಗಿದೆ: ಮೊದಲನೆಯ ಮಹಾಯುದ್ಧದ ನಂತರ ವಿಜಯಿಯಾದ ಐಕ್ಯರಾಷ್ಟ್ರಗಳು ಉಸ್ಮಾನಿಯಾ ಆಡಳಿತದೊಂದಿಗೆ ಇರಿಸಿದ ಒಪ್ಪಂದದ ಶರತ್ತುಗಳು ಅತ್ಯಂತ ನಿಂದನೀಯವಾಗಿದ್ದುವು. ಅದರ ಪ್ರಕಾರ ಉಸ್ಮಾನಿಯಾ ಆಡಳಿತದ ಭಾಗವನ್ನು ಇಲ್ಲವಾಗಿಸಲಾಗಿತ್ತು. ಅದರ ಎಲ್ಲ ರೀತಿಯ ಸೈನ್ಯವನ್ನು ಪರಿಮಿತಗೊಳಿಸಲಾಗಿತ್ತು. ಅದರ ಮೇಲೆ ಕೆಲವು ಕಠಿಣವಾದ ನಿರ್ಬಂಧಗಳನ್ನು ಹೇರಲಾಗಿತ್ತು. ಈ ಸ್ಥಿತಿಗಳಲ್ಲಿ ತುರ್ಕಿಯ ಆಡಳಿತದೊಂದಿಗೆ ಸಂಧಾನದ ಒಪ್ಪಂದದ ವಿಷಯದಲ್ಲಿ ಯೋಚಿಸಲು ಮತ್ತು ಮುಸ್ಲಿಮರು ಮುಂದೆ ಮಾಡಬೇಕಾದ ಕಾರ್ಯಗಳ ಬಗ್ಗೆ ಚಿಂತಿಸಲು ಮತ್ತು ಸಮಾಲೋಚಿಸಲು 1920ರ ಜೂನ್ 1 ಮತ್ತು 2 ತಾರೀಕುಗಳಲ್ಲಿ ಒಂದು ಸಭೆಯನ್ನು ಖಿಲಾಫತ್ ಕಮಿಟಿಯ ಅಧೀನದಲ್ಲಿ ಮಾಡಲು ನಿಶ್ಚಯಿಸಲಾಗಿತ್ತು. ಜಮಿಯತುಲ್ ಉಲಮಾಯೆ ಹಿಂದೂಸ್ತಾನದ ಪ್ರಸಿದ್ಧ ಲೀಡರ್ ಆದ ಜನಾಬ್ ಮೌಲಾನ ಅಬ್ದುಲ್‌ಬಾರಿ ಫರಂಗಿ ಮಹಲ್ಲಿಯವರು 1920ರ ಮೇ 30ರಂದು ಹಝ್ರತ್ ಮುಸ್ಲಿಹ್ ಮೌಊದ್‌ರನ್ನು ಒಂದು ಪತ್ರದ ಮೂಲಕ ಕಾನ್ಫೆರೆನ್ಸ್‌ನಲ್ಲಿ ತನ್ನ ಅಭಿಪ್ರಾಯವನ್ನು ಹೇಳಲು ಆಮಂತ್ರಿಸಿದರು. ಹೀಗೆ **"ತುರ್ಕಿಯ ಒಪ್ಪಂದ ಮತ್ತು ಮುಸ್ಲಿಮರು ಮುಂದೆ ಮಾಡಬೇಕಾದ ಕೆಲಸಗಳು"** ಎಂಬ ಶೀರ್ಷಿಕೆಯಲ್ಲಿ ಒಂದು ಉಪನ್ಯಾಸವನ್ನು ಒಂದು ದಿನದಲ್ಲಿ ಬರೆದು ತಯಾರಿಸಿದರು ಮತ್ತು ಅದನ್ನು ರಾತ್ರೋರಾತ್ರಿ ಮುದ್ರಿಸಿ ಹಝ್ರತ್ ಮೌಲಾನ ಸಯ್ಯದ್ ಮುಹಮ್ಮದ್ ಸರ್ವರ್ ಶಾಹ್ ಸಾಹಿಬ್, ಹಝ್ರತ್ ಸಯ್ಯದ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಮತ್ತು ಹಝ್ರತ್ ಚೌಧರಿ ಝುಫರುಲ್ಲಾಹ್ ಖಾನ್ ಸಾಹಿಬ್‌ರ ಮೂಲಕ ಕಳುಹಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಉಪನ್ಯಾಸದಲ್ಲಿ ತುರ್ಕಿ ಒಪ್ಪಂದದ ಶರತ್ತುಗಳ ನ್ಯೂನತೆಗಳನ್ನು ಬೊಟ್ಟುಮಾಡಿಕೊಂಡು ಅದರ ಕೆಟ್ಟ ಪ್ರಭಾವದಿಂದ ರಕ್ಷಣೆ ಪಡೆಯಲು ಮುಸ್ಲಿಮರ ಮುಂದೆ ಕೆಲವು ಸಲಹೆಗಳನ್ನು ಮುಂದಿರಿಸಿದರು. ಖಲೀಫತುಲ್ ಮಸೀಹ್ ಸಾನಿ(ರ) ಅತ್ಯಂತ ಶಕ್ತವಾದ ಸಾಕ್ಷ್ಯಾಧಾರದೊಂದಿಗೆ ತನ್ನ ನಿಲುವನ್ನು ಮುಂದಿರಿಸುತ್ತಾ ಹೀಗೆ ಸ್ಪಷ್ಟಪಡಿಸಿದರು: ಹಿಜ್ರತ್ ಮಾಡುವ, ಜಿಹಾದ್ ಮಾಡುವ ಮತ್ತು ಗವರ್ನಮೆಂಟ್‌ನೊಂದಿಗೆ ಸಂಬಂಧ ವಿಚ್ಛೇದ ಸಲಹೆ ಪ್ರಾಯೋಗಿಕವಲ್ಲ ಮತ್ತು ಅದು ಮುಸ್ಲಿಮರಿಗೆ ನಷ್ಟವನ್ನುಂಟು ಮಾಡುವುದು. ಖಲೀಫತುಲ್ ಮಸೀಹ್ ಸಾನಿ ತನ್ನ ಕಡೆಯಿಂದ ಹೀಗೆ ಸಲಹೆ ನೀಡಿದರು: ಮುಸ್ಲಿಮರು ಒಮ್ಮತಾಭಿಪ್ರಾಯದಿಂದ ಐಕ್ಯ ರಾಷ್ಟ್ರದೊಂದಿಗೆ ಹೀಗೆ ಹೇಳಬೇಕು: ಅವರು ತುರ್ಕಿಯರೊಂದಿಗೆ ಸಂಧಾನ ಶರತ್ತುಗಳು ತಮ್ಮ ಕಾನೂನಿನ ವಿರುದ್ಧ ನಡೆಸಲಾಗಿದೆ. ಈ ಒಪ್ಪಂದದಲ್ಲಿ ಕ್ರೈಸ್ತರ ಹಗೆ ಕಾಣಬಹುದಾಗಿದೆ. ಮಾತ್ರವಲ್ಲ ಇದರಲ್ಲಿ ಕ್ಯಾಪಟಲಿಸ್ಟ್‌ರ ಪ್ರಯೋಜನವನ್ನು ದೃಷ್ಟಿಯಲ್ಲಿರಿಸಲಾಗಿದೆ. ಆದ್ದರಿಂದ ಮುಸ್ಲಿಮರು ಈ ತೀರ್ಮಾನವನ್ನು ಇಷ್ಟಪಡುವುದಿಲ್ಲ. ಅದನ್ನು ಬದಲಿಸಲು ಮನವಿ ಮಾಡುತ್ತೇವೆ. ಈ ಉಪನ್ಯಾಸದಲ್ಲಿ, ಅವರು ಮೇಲಿನ ಸಲಹೆಗಳಲ್ಲದೆ, ಮುಸ್ಲಿಮರ ಅಭಿವೃದ್ಧಿಗಾಗಿ ತಡಮಾಡದೇ ಒಂದು ಅಂತರ್‌ರಾಷ್ಟ್ರೀಯ ಇಸ್ಲಾಮಿನ ಸಂಘವನ್ನು ಸ್ಥಾಪಿಸುವ ಕಡೆಗೆ ಗಮನಸೆಳೆದರು. ಈಗಲೂ ಕೆಲವು ಪಾಶ್ಚಾತ್ಯ ಶಕ್ತಿಗಳು ಮುಸ್ಲಿಮರೊಡನೆ, ಈ ಉಪನ್ಯಾಸದಲ್ಲಿ ವಿವರಿಸಲಾದ ರೀತಿಯಲ್ಲೇ ವರ್ತಿಸುತ್ತಿರುವುದನ್ನು ನಾವು ಕಾಣುತ್ತೇವೆ. ಇಂಟರ್‌ನೆಟ್ ಇತ್ಯಾದಿಗಳ ಸೌಕರ್ಯಗಳು ಇಲ್ಲದ ಆ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಅಸಾಮಾನ್ಯವಾದ ವಿಶ್ಲೇಷಣೆ ಮತ್ತು ಸಲಹೆಗಳಿಂದ ತಿಳಿದುಬರುವುದೇನೆಂದರೆ, ಅಲ್ಲಾಹನ ವಿಶೇಷವಾದ ನೆರವು ಅವರಿಗೆ ಇತ್ತು. ಲೋಕದ ಅರಿವು ಅಲ್ಲಾಹನು ಅವರಿಗೆ ಕೊಟ್ಟಿದ್ದನು. ಅಲ್ಲಾಹನ ವಾಗ್ದಾನ ಪ್ರಕಾರ ಅವರಿಗೆ ಅವನು ನೀಡಿದ ಬುದ್ಧಿಯ ಕಡೆಗೆ ಇದು ಬೊಟ್ಟುಮಾಡುತ್ತದೆ.

**"ಅಲ್ಲಾಹನ ದೇವದೂತರು"** ಎಂಬ ವಿಷಯದಲ್ಲಿ 1920ರ ಡಿಸೆಂಬರ್ 28ರಂದು ಅವರು ಮತ್ತೊಂದು ಭಾಷಣ ಮಾಡಿದ್ದರು. ಮಸ್ಜಿದ್ ನೂರ್‌ನಲ್ಲಿ ಈ ಭಾಷಣವನ್ನು ಎರಡು ದಿನಗಳಲ್ಲಿ ಮುಕ್ತಾಯಗೊಳಿಸಲಾಯಿತು. **"ಮಲಾಇಕತುಲ್ಲಾಹ್"** ಎಂಬ ಈ ವಿಷಯ ಇಸ್ಲಾಮಿನ ಮೂಲಭೂತ ತತ್ವ ಮತ್ತು ವಿಶ್ವಾಸಗಳಲ್ಲಿ ಒಳಪಟ್ಟದ್ದಾಗಿದೆ. ಈ ವಿಷಯ ಅತ್ಯಂತ ಸೂಕ್ಷ್ಮವಾದುದಾಗಿದ್ದರೂ ಖಲೀಫತುಲ್ ಮಸೀಹ್ ಸಾನಿ ಅದನ್ನು ಅತ್ಯಂತ ಸರಳ ಮತ್ತು ಕಣ್ತೆರೆಸುವ ಶೈಲಿಯಲ್ಲಿ ಮುಂದಿರಿಸಿದರು. ಪವಿತ್ರ ಖುರ್‌ಆನಿನ ಆಧಾರದಲ್ಲಿ ದೇವದೂತರ ನೈಜತೆ, ಆವಶ್ಯಕತೆ, ದೇವದೂತರ ವಿಧಗಳು, ಅವರ ಕರ್ತವ್ಯಗಳು ಮತ್ತು ಸೇವೆಗಳಲ್ಲದೆ, ದೇವದೂತರ ಅಸ್ತಿತ್ವದ ಬಗ್ಗೆ ಪುರಾವೆಗಳು, ಅವರ ಬಗ್ಗೆ ಇರುವ ಸಂಶಯಗಳು ಹಾಗೂ ಆರೋಪಗಳಿಗೆ ವಿಶದವಾದ ಮತ್ತು ಸಾಕ್ಷ್ಯಾಧಾರಿತ ಉತ್ತರಗಳನ್ನು ನೀಡಿದರು. ವಿಷಯದ ಕೊನೆಯಲ್ಲಿ, ದೇವದೂತರೊಂದಿಗೆ ಸಂಬಂಧ ಸ್ಥಾಪಿಸಲು ಮತ್ತು ಅವರಿಂದ ಪ್ರಯೋಜನ ಪಡೆಯುವಂತಾಗಲು ಎಂಟು ಮಾರ್ಗಗಳನ್ನು ಅವರು ಹೇಳಿಕೊಟ್ಟರು. ಒಂದು, ಯಾವ ವ್ಯಕ್ತಿಯ ಮುಂದೆ ಜಿಬ್ರೀಲ್ ಅವತೀರ್ಣವಾಗುತ್ತಾರೋ ಅವರ ಬಳಿಯಲ್ಲಿ ಕುಳಿತುಕೊಳ್ಳುವುದರಿಂದ, ಸಾತ್ವಿಕ ಜನರ ಮತ್ತು ಪ್ರವಾದಿಗಳ ಸಹವಾಸದಿಂದ. ಎರಡು, ಹಝ್ರತ್ ಪೈಗಂಬರರ(ಸ) ಮೇಲೆ ದುರೂದ್ ಪ್ರಾರ್ಥನೆ ಮಾಡುವುದರಿಂದ, ಸ್ವಲಾತ್ ಹೇಳುವುದರಿಂದ. ಮೂರು, ಕ್ಷಮಾಗುಣ ಮತ್ತು ಇತರರ ನ್ಯೂನತೆಗಳನ್ನು ಕಡೆಗಣಿಸುವ ಗುಣವನ್ನು ಅಳವಡಿಸುವುದರ ಮೂಲಕ ಹಾಗೂ ಬೇರೆಯವರ ಬಗ್ಗೆ ತಪ್ಪುಭಾವನೆಯನ್ನು ಇರಿಸದಿರುವುದರಿಂದ. ನಾಲ್ಕು, ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ಮತ್ತು ಅವನ ಪರಿಶುದ್ಧಿಯ ಪ್ರಕೀರ್ತನೆ ಮಾಡುವುದರ ಮೂಲಕ. ಐದು, ಪವಿತ್ರ ಖುರ್‌ಆನನ್ನು ಗಮನವಿಟ್ಟು ಓದುವುದರ ಮೂಲಕ. ಆರು, ಯಾರ ಮೇಲೆ ದೇವದೂತರು ಅವತೀರ್ಣಗೊಳ್ಳುತ್ತಾರೋ ಅವರು ಬರೆದ ಗ್ರಂಥಗಳನ್ನು ಓದುವುದರ ಮೂಲಕ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆದ ಪುಸ್ತಕಗಳನ್ನು ಓದಬೇಕು. ಏಳು, ಯಾವ ಸ್ಥಳದಲ್ಲಿ ದೇವದೂತರು ವಿಶೇಷವಾಗಿ ಇಳಿಯುತ್ತಾರೋ ಆ ಪ್ರದೇಶಕ್ಕೆ ಹೋಗುವುದರ ಮೂಲಕ. ಎಂದರೆ ಪವಿತ್ರ ಸ್ಥಳವನ್ನು ಭೇಟಿ ಮಾಡಬೇಕು. ಎಂಟು, ಕಾಲಘಟ್ಟದ ಖಲೀಫರೊಂದಿಗೆ ಸಂಬಂಧವಿರಿಸಬೇಕು. ಈ ಎಲ್ಲ ಸಂಗತಿಗಳನ್ನು ಹಝ್ರತ್ ಮುಸ್ಲಿಹ್ ಮೌಊದ್(ರ) ಆ ಉಪನ್ಯಾಸದಲ್ಲಿ ವಿವರಿಸಿದರು.

ಅನಂತರ 1921 ಮಾರ್ಚ್ 5ರಂದು ಕೆಲವು ವಿದ್ಯಾರ್ಥಿಗಳ ಸವಾಲುಗಳಿಗೆ ಉತ್ತರಕೊಡುತ್ತಾ **"ಧರ್ಮದ ಆವಶ್ಯಕತೆ"** ಎಂಬ

ವಿಷಯದಲ್ಲಿ ಅವರು ಲೆಕ್ಚರ್ ನೀಡಿದರು. ಅದರ ಸಂಕ್ಷಿಪ್ತರೂಪ ಹೀಗಿದೆ: 1921ರ ಮಾರ್ಚ್ 4ರಂದು ಒಂದು ಮೊಕದ್ದಮೆಯಲ್ಲಿ ಸಾಕ್ಷಿ ನೀಡುವ ಉದ್ದೇಶದಿಂದ ಲಾಹೋರಿಗೆ ಹೋದರು. ಮಾರ್ಚ್ 4ರಿಂದ 9ರ ವರೆಗೆ ಅವರು ಅಲ್ಲಿ ತಂಗಿದರು. ಮಾರ್ಚ್ 5ರಂದು ಕಾಲೇಜಿನ ಕೆಲವು ವಿದ್ಯಾರ್ಥಿಗಳು ಹಝ್ರತ್ ಖಲೀಫತುಲ್ ಮಸೀಹ್‌ರನ್ನು ಭೇಟಿಯಾಗಿ ಕೆಳಗಿನ ಮೂರು ಸವಾಲುಗಳನ್ನು ಕೇಳಿದರು: ಒಂದು, ಧರ್ಮದ ಯಾವುದೇ ಆವಶ್ಯಕತೆಯಿಲ್ಲ, ಅದರಿಂದ ಪ್ರಯೋಜನವೂ ಇಲ್ಲ. ಜನರು ಅದರ ಬಾಹ್ಯವಾದ ಪ್ರಯೋಜನಗಳನ್ನು ಪಡೆಯಲು ಸ್ವೀಕರಿಸುವುದಾದರೆ ತಪ್ಪಿಲ್ಲ. ಎರಡು, ಭವಿಷ್ಯವಾಣಿಗಳನ್ನು ಮಾಡುವ ಜನರು ಇತರ ಧರ್ಮಗಳಲ್ಲಿಯೂ ಕಾಣಬಹುದಾಗಿದೆ. ಹೀಗಿರುವಾಗ ಇಸ್ಲಾಮಿಗೆ ಈ ವಿಷಯದಲ್ಲಿ ಯಾವುದೇ ವಿಶೇಷತೆಯಿಲ್ಲ. ಮೂರು, ಹಝ್ರತ್ ಮಸೀಹ್ ಮೌಊದ್‌ರ ಜಮಾಅತಿನ ಹರಡುವಿಕೆ ಅದರ ಸತ್ಯತೆಗೆ ಪುರಾವೆಯಲ್ಲ. ಏಕೆಂದರೆ, ರಶ್ಯದಲ್ಲಿ ಲೆನಿನ್‌ಗೂ ಹಿರಿದಾದ ಪ್ರಸಿದ್ಧಿ ಲಭಿಸಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಮೂರು ಸವಾಲುಗಳಿಗೆ ಬಹಳ ಸರಳವಾಗಿ ಸಾಕ್ಷ್ಯಾಧಾರ ಸಹಿತ ಉತ್ತರಕೊಟ್ಟರು. ಅವರು ಹೇಳಿದರು: ಧರ್ಮದ ಆವಶ್ಯಕತೆಯು ಸವಾಲು ದೇವನ ಅಸ್ತಿತ್ವದೊಂದಿಗೆ ಸಂಬಂಧಪಟ್ಟದ್ದಾಗಿದೆ. ದೇವನಿದ್ದರೆ ಧರ್ಮದ ಆವಶ್ಯಕತೆ ಸಹ ಇದೆ. ತನ್ನ ದಾಸನೊಂದಿಗೆ ಸಂಭಾಷಣೆ ನಡೆಸುತ್ತಾನೆ ಎಂಬುದಾಗಿದೆ ಅವನ ಅಸ್ತಿತ್ವದ ಪುರಾವೆ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್‌ರ ಭವಿಷ್ಯವಾಣಿಗಳು ಈಡೇರುತ್ತಿವೆ. ಅದು ಅಲ್ಲಾಹನ ಅಸ್ತಿತ್ವದ ಪುರಾವೆಯನ್ನು ನೀಡುತ್ತಿದೆ. ಎರಡನೇ ಸವಾಲಿನ ಜವಾಬಿನಲ್ಲಿ ಅವರು ಹೇಳಿದರು: ಪ್ರವಾದಿಗಳ ಮತ್ತು ಇತರರ ಭವಿಷ್ಯವಾಣಿಗಳ ನಡುವೆ ಮುಖ್ಯವಾದ ವ್ಯತ್ಯಾಸವೇನೆಂದರೆ, ಇತರರು ತಮ್ಮ ಅರಿವಿನ ಆಧಾರದಲ್ಲಿ ಭವಿಷ್ಯವಾಣಿಗಳನ್ನು ಹೇಳುತ್ತಾರೆ. ಊಹಾಪೋಹಗಳನ್ನು ಮಾಡುತ್ತಾರೆ. ಆದರೆ ಪ್ರವಾದಿಗಳ ಭವಿಷ್ಯವಾಣಿಗಳು ಅಲ್ಲಾಹನ ಕಡೆಯಿಂದಾಗಿರುತ್ತವೆ. ಸಂಭವಿಸಲು ಸಾಧ್ಯವಿಲ್ಲದ ಸ್ಥಿತಿಯಲ್ಲಾಗಿರುತ್ತದೆ. ಅದರ ಹಲವಾರು ಮಗ್ಗಲುಗಳು ಇವೆ. ಅದರಲ್ಲಿ ವೈಭವ ಮತ್ತು ಶಕ್ತಿಯ ಪ್ರಕಟಣೆ ಇರುತ್ತದೆ. ಮೂರನೇ ಸವಾಲಿಗೆ ಉತ್ತರವಾಗಿ ಅವರು ಹೇಳಿದರು: ಹಝ್ರತ್ ಮಿರ್ಝಾ ಸಾಹಿಬರ ಅಭಿವೃದ್ಧಿಯ ಬಗ್ಗೆ ಮೊದಲೇ ಭವಿಷ್ಯ ನುಡಿಯಲಾಗಿತ್ತು. ಅದರ ಪ್ರಕಾರವೇ ಅಭಿವೃದ್ಧಿ ಉಂಟಾಗಿತ್ತು. ಇತರರ ಅಭಿವೃದ್ಧಿ ಸಹ ಉಂಟಾಗಿದೆ. ಆದ್ದರಿಂದ ಹಝ್ರತ್ ಮಿರ್ಝಾ ಸಾಹಿಬ್‌ರ ಅಭಿವೃದ್ಧಿ ಅವರ ಸತ್ಯತೆಯ ಲಕ್ಷಣವಲ್ಲವೆಂದು ಹೇಳುವುದು ಸರಿಯಲ್ಲ. ಹೇಗಿದ್ದರೂ ಇದೊಂದು ದೀರ್ಘವಾದ ಉಪನ್ಯಾಸವಾಗಿದೆ.

**ದೇವನ ಅಸ್ತಿತ್ವ**ದ ಬಗ್ಗೆ ಅವರು 1921ರಲ್ಲಿ ಒಂದು ದೀರ್ಘವಾದ ಉಪನ್ಯಾಸವನ್ನು ನೀಡಿದ್ದರು. 190 ಪುಟಗಳನ್ನು ಅದು ಒಳಗೊಂಡಿದೆ. ಅದರ ಸಂಕ್ಷೇಪ ಹೀಗಿದೆ: ಹಝ್ರತ್ ಮುಸ್ಲಿಹ್ ಮೌಊದ್(ರ) ತನ್ನ ಈ ಭಾಷಣದಲ್ಲಿ ದೇವನ ಅಸ್ತಿತ್ವದ ಬಗ್ಗೆ 8 ಸಾಕ್ಷ್ಯಾಧಾರಗಳು ಮತ್ತು ಅವುಗಳ ಬಗ್ಗೆ ಹೇಳಲಾಗುವ ಆರೋಪಗಳಿಗೆ ಉತ್ತರಗಳನ್ನು ನೀಡಿದರು. ಅಲ್ಲಾಹನ ಗುಣವೈಶಿಷ್ಟ್ಯಗಳಿಂದ ಅಲ್ಲಾಹನ ಅಸ್ತಿತ್ವದ ಪುರಾವೆಗಳನ್ನು ನೀಡಿದರು ಮತ್ತು ಅಲ್ಲಾಹನ ಗುಣವೈಶಿಷ್ಟ್ಯಗಳ ವಿಧಗಳನ್ನು ಸಹ ವಿವರಿಸಿದರು. ಅಲ್ಲಾಹನ ಬಗ್ಗೆ ಯುರೋಪಿನವರ, ಝುರತುಷ್ಟರ, ಹಿಂದುಗಳ ಮತ್ತು ಆರ್ಯರ ಭಾವನೆಗಳ ಎದುರಿಗೆ ಅಲ್ಲಾಹನ ಬಗ್ಗೆ ಇಸ್ಲಾಮಿನ ಅಧ್ಯಾಪನೆಗಳನ್ನು ವಿಶದವಾಗಿ ವಿವರಿಸಿದರು. ಅದಲ್ಲದೆ ಶಿರ್ಕ್‌ನ ವಿಧಗಳನ್ನು ಹೇಳುತ್ತಾ ಅವುಗಳನ್ನು ರದ್ದುಗೊಳಿಸಿದರು. ದೇವದರ್ಶನ, ಅದರ ಪದವಿಗಳು, ಅದರ ಸ್ಥಾನಗಳು, ಅದರ ಪ್ರಯೋಜನಗಳು, ಅದನ್ನು ಗಳಿಸುವ ರೀತಿ ಮತ್ತು ಮಾರ್ಗಗಳನ್ನು ಹೇಳಿದರು.

1921ರಲ್ಲಿ ಅವರು **"ವೇಲ್ಸ್ ರಾಜಕುಮಾರನಿಗೆ ಒಂದು ಕಾಣಿಕೆ"** ಎಂಬ ಹೆಸರಲ್ಲಿ ಒಂದು ಪುಸ್ತಕವನ್ನು ಬರೆದರು. ವೇಲ್ಸ್ ರಾಜಕುಮಾರನು ಡಿಸೆಂಬರ್ 1921ರಲ್ಲಿ ಭಾರತಕ್ಕೆ ಬಂದಾಗ ಅವರಿಗೆ ಅದನ್ನು ನೀಡಲಾಯಿತು. ಇವರು ಅನಂತರ ಕಾಲದಲ್ಲಿ ಆರನೇ ಎಡ್ವರ್ಡ್ ಎಂದು ಕರೆಯಲ್ಪಟ್ಟ ರಾಜಕುಮಾರರಾಗಿದ್ದಾರೆ. 1936ರಲ್ಲಿ ಚರ್ಚ್ ಆಫ್ ಇಂಗ್ಲಂಡ್‌ನೊಂದಿಗೆ ಭಿನ್ನಾಭಿಪ್ರಾಯ ಹೊಂದಿಕೊಂಡು ಸಿಂಹಾಸನದಿಂದ ಕೆಳಗಿಳಿದಿದ್ದರು. ಹೇಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದ್‌ರ ನಿರ್ದೇಶನ ಪ್ರಕಾರ ಅಹ್ಮದಿಯಾ ಜಮಾಅತಿನ 3,208 ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ತಲಾ ಒಂದಾಣೆವೆಂಬಂತೆ ಒಟ್ಟುಗೂಡಿಸಿ ಪುಸ್ತಕ ಪ್ರಕಾಶನದ ವ್ಯವಸ್ಥೆಯನ್ನು ಮಾಡಿದರು. ಅಹ್ಮದಿಯಾ ಜಮಾಅತಿನ ಒಂದು ಸಂಘ 1922ರ ಫೆಬ್ರವರಿ 27ರಂದು ಪಂಜಾಬ್ ಗವರ್ನಮೆಂಟ್‌ನ ಮೂಲಕ ಪ್ರಿನ್ಸ್ ಆಫ್ ವೇಲ್ಸ್‌ಗೆ ಈ ಪುಸ್ತಕವನ್ನು ಅಮೂಲ್ಯವಾದ ಕಾಣಿಕೆ ಎಂಬ ರೀತಿಯಲ್ಲಿ ಕೊಟ್ಟರು. ಈ ಸಂಕ್ಷಿಪ್ತ ಜ್ಞಾನಭರಿತ ಪುಸ್ತಕದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಸರ್ಕಾರದೊಂದಿಗೆ ನಿಷ್ಠೆ ಮತ್ತು ಬದ್ಧತೆಯ ಬಗ್ಗೆ ಪ್ರಸ್ತಾಪಿಸಿದ್ದರಲ್ಲದೆ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರ ಜೀವಿತ, ಅಹ್ಮದಿಯಾ ಜಮಾಅತಿನ ಅಧ್ಯಾಪನೆಗಳು, ಅದರ ಚರಿತ್ರೆ ಮತ್ತು ಅದರ ಸ್ಥಾಪನೆಯ ಉದ್ದೇಶವನ್ನು ಸಂಕ್ಷೇಪವಾಗಿ ವಿವರಿಸಿದರು. ಕೊನೆಗೆ ಹಝ್ರತ್ ಪೈಗಂಬರರ(ರ) ಚರ್ಯೆಯನ್ನು ಅನುಸರಿಸುತ್ತಾ ಬ್ರಿಟನಿನ ಸಿಂಹಾಸನ ಮತ್ತು ಕಿರೀಟದ ವಾರಸುದಾರರಿಗೆ ಇಸ್ಲಾಮಿನ ಸಂದೇಶವನ್ನು ಅತ್ಯಂತ ಪ್ರಭಾವಶಾಲಿ ರೀತಿಯಲ್ಲಿ ತಲುಪಿಸಿ ಅವರನ್ನು ಇಸ್ಲಾಮಿನ ಕಡೆಗೆ ಆಮಂತ್ರಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಮುಂದಿರಿಸಿದ ಈ ಕೊಡುಗೆಯನ್ನು ವೇಲ್ಸ್ ರಾಜಕುಮಾರ ಸ್ವೀಕರಿಸಿದರು. ತನ್ನ ಚೀಫ್ ಸೆಕ್ರಿಟರಿ ಮೂಲಕ ಅದಕ್ಕೆ ಕೃತಜ್ಞತೆಯನ್ನು ಸಹ ಸಲ್ಲಿಸಿದರು. 1922ರಲ್ಲಿ ಲಾಹೋರ್‌ನಿಂದ ಜಮ್ಮು ತನಕದ ಯಾತ್ರೆಯ ವೇಳೆ ಈ ಪುಸ್ತಕವನ್ನು ಪೂರ್ಣವಾಗಿ ಓದಿ ಮುಗಿಸಿದರು ಮತ್ತು ಬಹಳ ಸಂತೋಷಗೊಂಡರು. ಪುಸ್ತಕವನ್ನು ಓದುತ್ತಾ ಕೆಲವೆಡೆ ಅವರ ಮುಖ ಗುಲಾಬಿಯ ಹಾಗೆ ಕೆಂಪಾಗುತ್ತಿತ್ತು ಎಂದು ನಂತರ ಸಿಕ್ಕಿದ ಮಾಹಿತಿಗಳಿಂದ ತಿಳಿದುಬಂದಿತ್ತು. ಈ ಪುಸ್ತಕವನ್ನು ಓದುತ್ತಾ ರಾಜಕುಮಾರನು ಒಂದೇ ಸವನೆ ಎದ್ದುನಿಲ್ಲುತ್ತಿದ್ದರು ಎಂದು ಅವರ ಒಬ್ಬ ಸಹಾಯಿ ಹೇಳಿದ್ದರು. ಕೆಲವು ಕಾಲದ ನಂತರ ರಾಜಕುಮಾರನು ಕ್ರೈಸ್ತಧರ್ಮವನ್ನು ಉಪೇಕ್ಷಿಸಿದ್ದಾಗಿ ಸ್ಪಷ್ಟವಾಗಿ ಹೇಳಿದರು.

1922ರ ಎಪ್ರಿಲ್ 24ರಂದು "ಝುಲ್‌ಫಿಖಾರ್" ಎಂಬ ವಾರ್ತಾಪತ್ರಿಕೆ ಈ ಪುಸ್ತಕದ ರಿವ್ಯೂ ಹೀಗೆ ಬರೆದಿತ್ತು: ಇಸ್ಲಾಮಿನ ಪ್ರಚಾರದಲ್ಲಿ ಹಝ್ರತ್ ಖಲೀಫ ಸಾನಿ ಮಾಡಿದ ಕೆಲಸವನ್ನು ಹೊಗಳದೇ ಇರಲು ಸಾಧ್ಯವಲ್ಲ. ಗಿಫ್ಟ್ ಟು ವೇಲ್ಸ್ ಎಂಬ ಪುಸ್ತಕದ ದೊಡ್ಡ ಭಾಗ ಇಸ್ಲಾಮಿನ ಸಂದೇಶವನ್ನು ಒಳಗೊಂಡಿದೆ. ಈ ಮಹತ್ತಾದ

ಕಾರ್ಯವನ್ನು ನೋಡಿಕೊಂಡು ಅಹ್ಮದಿಯೇತರರು ಸಹ ಅಚ್ಚರಿಗೊಂಡಿದ್ದರು. ಸಂಪಾದಕೀಯದ ಮೇಜಿನಲ್ಲಿ ಪೂರ್ವಗ್ರಹದ ಮತ್ತು ಪಕ್ಷಪಾತದ ಹಾರವನ್ನು ಕಳಚುತ್ತೇವೆ. ನಾವು ಈ ಕಾಣಿಕೆಯನ್ನು ಕಂಡು ಅದ್ಭುತಗೊಂಡೆವು. ಈ ಕಾಣಿಕೆಯಲ್ಲಿ ಜ್ಞಾನಿಯಾದ ಲೇಖಕರು ಹಝ್ರ್‌ರತ್ ಪೈಗಂಬರರ(ಸ) ನಡೆವಳಿಕೆ ಪ್ರಕಾರ ಪೂರ್ಣವಾಗಿ ನಡೆದಿರುವರು. ಬ್ರಿಟನಿನ ಸಿಂಹಾಸನ ಮತ್ತು ಕಿರೀಟದ ವಾರಸುದಾರರಿಗೆ ಇಸ್ಲಾಮಿನ ಸಂದೇಶವನ್ನು ಅತ್ಯಂತ ಧೈರ್ಯದೊಂದಿಗೆ ತಲುಪಿಸಿದ್ದಾರೆ. ಇತರ ಪಕ್ಷಗಳ ಯಾವನಾದರೂ ಒಬ್ಬ ವ್ಯಕ್ತಿ ಅಥವಾ ಹಗೆಭರಿತ ಪತ್ರಿಕೆ ದ್ವೇಷದ ಮಾರ್ಗದಲ್ಲಿ ಈ ಕಾಣಿಕೆಯ ಬಗ್ಗೆ ಕೆಟ್ಟ ಮಾತುಗಳನ್ನು ಹೇಳಬಹುದು ಎಂಬುದು ಬೇರೆ ಸಂಗತಿಯಾಗಿದೆ. ಈ ಪುಸ್ತಕದಲ್ಲಿ, ಯಾವುದೇ ಕಡೆ ಮುಖಸ್ತುತಿ ಮಾಡಿದ್ದಾಗಿ ಕಾಣುವುದಿಲ್ಲ. ಇದರಲ್ಲಿ ಹಝ್ರ್‌ರತ್ ಮಿರ್ಝಾ ಗುಲಾಂ ಅಹ್ಮದ್‌ರ ಜೀವಿತವನ್ನು ಆರಂಭದಿಂದ ಕೊನೆಯ ವರೆಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಆದರೆ ಅವು ಶಾಂತಿ ಸ್ಥಾಪನೆ ಮತ್ತು ಸರ್ಕಾರದೊಂದಿಗೆ ನಿಷ್ಠೆಯ ಪ್ರಕಟಣೆಗಳಾಗಿವೆ. ಅಶಾಂತಿ ಮತ್ತು ಗಲಭೆ ಮಾಡುವ ಪಕ್ಷವನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಅದನ್ನು ನಾಶಮಾಡುತ್ತಾನೆ.

ಅದೇ ರೀತಿಯಲ್ಲಿ ಪಂಜಾಬಿನ ಅರ್ಧ ಸರ್ಕಾರ ಪತ್ರಿಕೆಯಾದ ಸಿವಿಲ್ ಎಂಡ್ ಮಿಲಿಟರಿ ಗಝೆಟ್ 18–04–1922ರ ಪ್ರಕಟಣೆಯಲ್ಲಿ ಹೀಗೆ ಬರೆಯಿತು: ಅವರು ಅತ್ಯಂತ ಜ್ಞಾನದೊಂದಿಗೆ ತಮ್ಮ ಪುರಾವೆಗಳನ್ನು ಉತ್ತಮ ರೀತಿಯಲ್ಲಿ ಮುಂದಿರಿಸಿದ್ದರು ಎಂದು ಸಮ್ಮತಿಸಲೇ ಬೇಕಾಗುವುದು. ಇದರ ಮುಖ್ಯವಾದ ಉದ್ದೇಶ ಇಸ್ಲಾಮಿನ ಸಂದೇಶವನ್ನು ಪ್ರಿನ್ಸ್ ಆಫ್ ವೇಲ್ಸ್‌ಗೆ ತಲುಪಿಸುವುದಾಗಿತ್ತು. ಪ್ರಿನ್ಸ್ ಆಫ್ ವೇಲ್ಸ್ ಅಹ್ಮದಿಯಾದರೂ ಆಗದಿದ್ದರೂ, ಧರ್ಮದಲ್ಲಿ, ವಿಶೇಷವಾಗಿ ಭಾರತ ಮತ್ತು ಬ್ರಿಟನಿನ ಅಸಂಖ್ಯಾತ ಧರ್ಮಗಳ ಬಗ್ಗೆ ಆಸಕ್ತಿಯಿರುವವರಿಗೆ ಈ ಪುಸ್ತಕದ ಮೌಲ್ಯ ಮತ್ತು ಆಸಕ್ತಿ ನಿಸ್ಸಂಶಯವಾಗಿಯೂ ಕಡಿಮೆಯಾಗಲಿಕ್ಕಿಲ್ಲ. ಈ ಗ್ರಂಥವು ವಿದೇಶ ದೇಶಗಳಲ್ಲಿಯೂ ಆಳವಾದ ಪ್ರಭಾವ ಬೀರಿತ್ತು. ಪಾಶ್ಚಿಮಾತ್ಯ ದೇಶಗಳಲ್ಲಿ ಇಸ್ಲಾಮಿನ ಪ್ರಚಾರದ ಒಂದು ಹೊಸ ಮಾರ್ಗವನ್ನೇ ಈ ಪುಸ್ತಕ ತೆರೆಯಿತು. ಆಸ್ಟ್ರೇಲಿಯದ ರಾಜಧಾನಿಯಾದ ವಿಯಾನದ ಒಬ್ಬ ತ್ರಿಭಾಷಿ ಪ್ರೊಫೆಸರ್ ಬಹಳ ಸಂತೋಷವನ್ನು ಪ್ರಕಟಿಸಿದರು. ಜೊತೆಗೆ ತನ್ನ ಖೇದವನ್ನು ವ್ಯಕ್ತಪಡಿಸುತ್ತಾ ಹೇಳಿದರು: ನಾನು ವೃದ್ಧನಾಗಿದ್ದೇನೆ. ಇಲ್ಲದಿದ್ದರೆ, ಲೋಕದೆಲ್ಲೆಡೆ ಇದನ್ನು ಪ್ರಚಾರ ಮಾಡುತ್ತಿದ್ದೆ. ಹಝ್ರ್‌ರತ್ ಮುಫ್ತಿ ಮುಹಮ್ಮದ ಸಾದಿಖ್ ಸಾಹಿಬ್(ರ) ಅಮೇರಿಕದಿಂದ ಹೀಗೆ ಬರೆದು ತಿಳಿಸಿದರು: ಈ ಪುಸ್ತಕ ಅಮೇರಿಕವನ್ನು ಬಹಳ ಪ್ರಭಾವಿತಗೊಳಿಸಿದೆ. ಮಾತ್ರವಲ್ಲ, ಇದು ಅಮೇರಿಕನ್ನರಿಗೆ ಆವಶ್ಯವಾದ ಅರಿವಿನ ಪ್ರಕಾರ ಇದನ್ನು ಬರೆಯಲಾಗಿದೆ ಎಂದು ತೋರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಅಲ್ಲದೆ ಆಫ್ರಿಕದಲ್ಲೂ ಇದರ ಪ್ರಭಾವ ಉಂಟಾಗಿತ್ತು. ನೈರೋಬಿಯ **"ಲೀಡರ್"** ಪತ್ರಿಕೆಯ ಸಂಪಾದಕರು ಬರೆದರು: ನಾನು ಕ್ರೈಸ್ತನಲ್ಲವಾದರೂ ಕ್ರೈಸ್ತ ಮನೆತನದಲ್ಲಿ ಜನಿಸಿದ್ದೆ. ನನಗೆ ಕ್ರೈಸ್ತರ ಸಾಹಿತ್ಯಗಳ ಬಗ್ಗೆ ಉತ್ತಮ ಜ್ಞಾನವಿದೆ. ಆದರೆ ಈ ಪುಸ್ತಕದಲ್ಲಿ ನನಗೆ ಸಿಕ್ಕಿದ್ದೆಲ್ಲವನ್ನು ಮತ್ತು ಇದರಲ್ಲಿ ನನಗೆ ಸಿಕ್ಕಿದ ರುಚಿಯನ್ನು ವಿವರಿಸಲು ಸಾಧ್ಯವಲ್ಲ. ಈ ಪುಸ್ತಕದ ಲೇಖಕ ಮುಸ್ಲಿಮರಾಗಿದ್ದಾರೆ. ಆದರೆ ಅವರು ಕ್ರೈಸ್ತರ ನಡುವೆ ವರ್ಷಗಟ್ಟಲೆ ಇದ್ದರು ಮತ್ತು ಅವರ ಸಾಹಿತ್ಯಗಳನ್ನು ಗಮನವಿಟ್ಟು ಓದಿದ್ದರು ಎಂದು ತೋರುತ್ತದೆ. ಇಲ್ಲದಿದ್ದರೆ ಕ್ರೈಸ್ತರಿಗೆ ಇಷ್ಟು ಅರ್ಥಪೂರ್ಣವಾದ ಸಂಗತಿಗಳನ್ನು ಧೈರ್ಯದಿಂದ ಹೇಳುವುದು ಬಹಳ ಕಷ್ಟ. ಧಾರ್ಮಿಕ ಆಧಾರದಲ್ಲಿ ಬರೆಯಲ್ಪಟ್ಟು ಪಕ್ಷಪಾತರಹಿತವಾದ ಇಂತಹ ಕೃತಿಯನ್ನು ಇಂದಿನ ವರೆಗೆ ನಾನು ಕಂಡಿಲ್ಲ. ಇದು ಈ ರೀತಿಯ ಮೊದಲ ಪುಸ್ತಕವಾಗಿದೆ.

ಅದೇ ರೀತಿಯಲ್ಲಿ, 1924ರಲ್ಲಿ ವೆಂಬ್ಲೇ ಕಾನ್‌ಫರೆನ್ಸ್‌ನ ಸಂದರ್ಭಕ್ಕಾಗಿ **"ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಂ"** ಎಂಬ ಹೆಸರಲ್ಲಿ ಒಂದು ಉಪನ್ಯಾಸವನ್ನು ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಬರೆದಿದ್ದರು. ಅದು 250 ಪುಟಗಳ ಗ್ರಂಥವಾಗಿತ್ತು. ಅದರ ಸಂಕ್ಷೇಪವನ್ನು ಅಲ್ಲಿ ಓದಲಾಗಿತ್ತು. ತಮ್ಮ ತಮ್ಮ ಧರ್ಮಗಳ ವಿಶೇಷತೆಗಳ ಬಗ್ಗೆ ಲೆಕ್ಚರ್ ನೀಡಲಿಕ್ಕಾಗಿ ಲೋಕದ ಎಲ್ಲ ಉನ್ನತ ಪಂಡಿತರನ್ನು ಇದರಲ್ಲಿ ಆಮಂತ್ರಿಸಲಾಗಿತ್ತು. ಇದಕ್ಕೆ ಹಝ್ರ್‌ರತ್ ಮುಸ್ಲಿಹ್ ಮೌಊದ್‌ರನ್ನು(ರ) ಸಹ ಆಮಂತ್ರಿಸಲಾಗಿತ್ತು. ಅವರು ಕಾನ್ಫೆರೆನ್ಸ್‌ಗಾಗಿ **"ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಂ"** ಎಂಬ ಹೆಸರಲ್ಲಿ ಒಂದು ಪುಸ್ತಕವನ್ನು ಮೇ 24ರಿಂದ ಜೂನ್ 6ರ ವರೆಗೆ ಎರಡು ವಾರಗಳಲ್ಲಿ ತಯಾರು ಮಾಡಿದರು. ಅದರ ಸಾರಾಂಶವನ್ನು ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹಾಜರಿದ್ದ ಆ ಕಾನ್ಫೆರೆನ್ಸ್‌ನಲ್ಲಿ ಹಝ್ರ್‌ರತ್ ಚೌಧರಿ ಮುಹಮ್ಮದ್ ಝುಫರುಲ್ಲಾಹ್ ಖಾನ್ ಸಾಹಿಬ್ ಓದಿ ಹೇಳಿದರು. ಈ ಲೆಕ್ಚರ್ ಎಷ್ಟು ವಿಶಿಷ್ಟ ಮತ್ತು ಅತುಲ್ಯವಾಗಿತ್ತು ಎಂದರೆ, ಕ್ರೈಸ್ತರ ದೊಡ್ಡ ದೊಡ್ಡ ನೇತಾರರು ಸಹ ಅನಿಯಂತ್ರಿತವಾಗಿ ಹೀಗೆ ಹೇಳಿದರು: ಈ ಉಪನ್ಯಾಸದಲ್ಲಿ ಹೇಳಲಾದ ಅಭಿಪ್ರಾಯಗಳು ಅದರ ಶಿಕ್ಷಣ, ಪುರಾವೆಗಳು, ಶ್ರೇಷ್ಠತೆ ಮತ್ತು ಸೌಂದರ್ಯದ ದೃಷ್ಟಿಯಲ್ಲಿ ವಿಶಿಷ್ಟ ಮತ್ತು ಅತುಲ್ಯವಾದುದಾಗಿದೆ. ಹೀಗೆ ಈ ಉಪನ್ಯಾಸದ ಮೂಲಕ ದೇವನು ಅಹ್ಮದಿಯ್ಯತ್ ಅಥವಾ ನೈಜ ಇಸ್ಲಾಮಿನ ಸಂದೇಶವನ್ನು ಲೋಕಧರ್ಮಗಳ ದೊಡ್ಡ ದೊಡ್ಡ ನೇತಾರರಿಗೆ, ಅವರು ಸಹ ಇಸ್ಲಾಮಿನ ಸತ್ಯತೆಯನ್ನು ಸಮ್ಮತಿಸಲು ನಿರ್ಬಂಧಿತರಾಗುವ ರೀತಿಯಲ್ಲಿ ತಲುಪಿಸುವ ಸಂದರ್ಭವನ್ನು ಒದಗಿಸಿಕೊಟ್ಟನು. ಈ ಗ್ರಂಥದಲ್ಲಿ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಇಸ್ಲಾಮಿನ ಸುಂದರ ಪಾಠಗಳನ್ನು ವಿವಿಧ ಮಗ್ಗುಲುಗಳಲ್ಲಿ ಅತ್ಯಂತ ವೈಭವಶಾಲಿ ಶೈಲಿಯಲ್ಲಿ ಬೆಳಕು ಬೀರಿದರು. ಇಲ್ಲಿ ನಡೆಯುತ್ತಿರುವ ಧಾರ್ಮಿಕ ಸಮ್ಮೇಳನದಂತಹ ಸಮ್ಮೇಳನಗಳ ಜರಗುವಿಕೆ ಬಗ್ಗೆ ಇಂದಿನಿಂದ 1300 ವರ್ಷಗಳಿಗೆ ಮುಂಚೆ ಪವಿತ್ರ ಖುರ್‌ಆನಿನಲ್ಲಿ ಭವಿಷ್ಯ ನುಡಿಯಲಾಗಿದೆ ಎಂದು ಸೂರಃ ಸಾಫ್ಫಾತಿನ ವಚನಗಳ ಆಧಾರದಲ್ಲಿ ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಸಾಬೀತುಪಡಿಸಿದರು. ಅನಂತರ ಅವರು ಅಹ್ಮದಿಯಾ ಜಮಾಅತನ್ನು ಪರಿಚಯ ಮಾಡಿಕೊಟ್ಟರು. ಅಹ್ಮದಿಯ್ಯತ್ ಮತ್ತು ನೈಜ ಇಸ್ಲಾಂ ಒಂದೇ ಸಂಗತಿಯ ಹೆಸರಾಗಿದೆ ಎಂದು ನಿಖರವಾದ ಪುರಾವೆಗಳೊಂದಿಗೆ ಅವರು ಸಾಬೀತುಪಡಿಸಿದರು. ಅನಂತರ ಅವರು ಧರ್ಮದ ನಾಲ್ಕು ಉದ್ದೇಶಗಳನ್ನು ಹೇಳಿದರು. ಅದರಲ್ಲಿ ಮೊತ್ತಮೊದಲು ಅಲ್ಲಾಹನ ಬಗ್ಗೆ ಇಸ್ಲಾಮಿನ ವಿಶ್ವಾಸದ ಬಗ್ಗೆ ಸ್ಪಷ್ಟವಾಗಿ ಹೇಳಿದರು. ಮನುಷ್ಯನು ತನ್ನ ದೇವನೊಂದಿಗೆ ಯಾವ ರೀತಿಯ

ಸಂಬಂಧದ ಪ್ರತೀಕ್ಷೆಯನ್ನು ಇಸ್ಲಾಂ ಧರ್ಮ ಇರಿಸುತ್ತದೆ ಮತ್ತು ದಾಸನಿಗೆ ಯಾವೆಲ್ಲ ಜವಾಬ್ದಾರಿಗಳನ್ನು ಅಲ್ಲಾಹನು ವಹಿಸಿಕೊಟ್ಟಿದ್ದಾನೆ ಎಂಬುದನ್ನು ಅವರು ವ್ಯಕ್ತಪಡಿಸಿದರು. ಸಾಧನ ಸಾಮಗ್ರಿಗಳನ್ನು ಉಪಯೋಗಿಸಬಾರದು, ಬದಲಿಗೆ ಎಲ್ಲ ಕಾರ್ಯಗಳನ್ನು ಅಲ್ಲಾಹನ ಭರವಸೆಯ ಮೇಲೆ ಬಿಟ್ಟುಬಿಡಬೇಕೆಂದು ಇಸ್ಲಾಂ ಹೇಳುತ್ತದೆ ಎಂದು ಮುಸ್ಲಿಮರ ಬಗ್ಗೆ ಆಕ್ಷೇಪವೆತ್ತಲಾಗುತ್ತದೆ. ಈ ಸಂಶಯದ ನಿವಾರಣೆಯನ್ನು ಸಹ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಮಾಡಿದರು. ಇದು ಖಂಡಿತ ಇಸ್ಲಾಮಿನ ಅಧ್ಯಾಪನೆಯಲ್ಲವೆಂದೂ ಬದಲಿಗೆ ಸಾಧನ ಸಾಮಗ್ರಿಗಳನ್ನು ಮತ್ತು ಮಾಧ್ಯಮಗಳನ್ನು ಸರಿಯಾಗಿ ಉಪಯೋಗಿಸಿದ ನಂತರ ಅಲ್ಲಾಹನ ಮೇಲೆ ಭರವಸೆ ಇರಿಸಬೇಕೆಂದು ಇಸ್ಲಾಂ ಕಲಿಸುತ್ತದೆ ಎಂದು ಪವಿತ್ರ ಖುರ್‌ಆನಿನ ವಚನಗಳಿಂದ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಸಾಬೀತುಪಡಿಸಿದರು. ಅಲ್ಲಾಹನ ಮೇಲೆ ಭರವಸೆ ಇರಿಸುವುದರ ಅರ್ಥ ಸಾಧನ ಸಾಮಗ್ರಿಗಳನ್ನು ಅಥವಾ ಪ್ರಯತ್ನವನ್ನು ಉಪೇಕ್ಷಿಸುವುದರ ಹೆಸರಲ್ಲ. ಬದಲಿಗೆ ಭರವಸೆ ಎಂಬುದು ಜೀವಂತ ದೇವನಿದ್ದಾನೆ ಎಂಬುದರ ದೃಢನಂಬಿಕೆಯ ಇನ್ನೊಂದು ಹೆಸರಾಗಿದೆ ಹಾಗೂ ಈಗ ಇಸ್ಲಾಮಿಗೆ ಮಾತ್ರ ಮನುಷ್ಯನನ್ನು ಅಲ್ಲಾಹನೊಂದಿಗೆ ಹೊಂದಿಸಲು ಸಾಧ್ಯ. ಏಕೆಂದರೆ ಇಸ್ಲಾಂ ಕಲಿಸುವ ಶಿಕ್ಷಣದ ಪ್ರಕಾರ ನಡೆಯುತ್ತಾ ಅಲ್ಲಾಹನನ್ನು ಭೇಟಿಯಾಗುವ ತಳಮಳ ಹೊಂದಿದವನು ಖಂಡಿತವಾಗಿಯೂ ಅಲ್ಲಾಹನ ಭೇಟಿಯ ಸೌಭಾಗ್ಯವನ್ನು ಪಡೆಯುವನು ಎಂದು ಇಸ್ಲಾಂ ವಾದಿಸುತ್ತದೆ ಎಂಬುದರ ಬಗ್ಗೆ ಬೆಳಕು ಬೀರಿದರು. ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಸಂಶಯದ ನಿವಾರಣೆ ಇಸ್ಲಾಂ ಮಾತ್ರ ಮಾಡುತ್ತದೆ. ಇಸ್ಲಾಮಿನ ಅಧ್ಯಾಪನೆಗಳ ಪ್ರಕಾರ ನಡೆಯುವ ಮೂಲಕ ಮಾತ್ರವೇ ಅಲ್ಲಾಹನ ಗುಣವೈಶಿಷ್ಟ್ಯಗಳ ಸ್ವರೂಪವಾಗುವಂತಹ ವ್ಯಕ್ತಿಗಳು ಉಂಟಾಗುತ್ತಾರೆ. ಅವರು ಮೊದಲು ಸ್ವತಃ ದೈವಿಕಗುಣಗಳನ್ನು ಸ್ವತಃ ಅಳವಡಿಸಿಕೊಳ್ಳುತ್ತಾರೆ. ಅನಂತರ ಇತರರಿಗೆ ಅದರ ಲಕ್ಷಣಗಳನ್ನು ತೋರಿಸುತ್ತಾರೆ ಮತ್ತು ದೇವನ ಅಸ್ತಿತ್ವದ ಪರಿಪೂರ್ಣ ಜ್ಞಾನ ನೀಡುತ್ತಾರೆ. ಹೀಗೆ ಈ ಕಾಲಘಟ್ಟದಲ್ಲಿ, ದೇವನ ಅಸ್ತಿತ್ವವನ್ನು ಅರಿಯಲು ಮತ್ತು ಸಂಶಯದ ಜೀವಿತದಿಂದ ಮುಕ್ತಿ ಪಡೆಯುವ ಉದ್ದೇಶಕ್ಕಾಗಿ ಅಲ್ಲಾಹನು ಹಝ್ರ‌ತ್ ಮಸೀಹ್ ಮೌಊದ್‌ರನ್ನು(ಅ) ಕಳುಹಿಸಿದ್ದನು. ಇದರ ನಂತರ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಇಸ್ಲಾಮಿನ ನೈತಿಕ ಶಿಕ್ಷಣದ ವಿವಿಧ ಮಗ್ಗಲುಗಳ ಬಗ್ಗೆ ವಿಶದವಾಗಿ ಚರ್ಚಿಸಿದ್ದಾರೆ ಮತ್ತು ಇಸ್ಲಾಮಿನ ನೈತಿಕ ಅಧ್ಯಾಪನೆ ಅತ್ಯಂತ ಪರಿಪೂರ್ಣವೆಂದು ಸಾಬೀತುಪಡಿಸಿದರು. ಅನಂತರ ಅವರು ಉತ್ತಮ ಸ್ವಭಾವಗುಣಗಳ ತತ್ವಗಳು ಮತ್ತು ಕೆಟ್ಟಸ್ವಭಾವಗಳಿಂದ ರಕ್ಷಣೆ ಪಡೆಯುವುದರ ಮಾರ್ಗಗಳ ಬಗ್ಗೆ ವಿಶದವಾಗಿ ಬೆಳಕು ಬೀರಿದರು. ಸ್ವಭಾವಗಳನ್ನು ಸರಿಪಡಿಸಲು ಇಸ್ಲಾಂ ನೀಡುವ ಅಧ್ಯಾಪನೆಗಳ ಬಗ್ಗೆ ವಿವರಿಸಿದರು. ಅನಂತರ ಅವರು ಸಂಸ್ಕಾರದ ಬಗ್ಗೆ ಇಸ್ಲಾಮಿನ ಪಾಠಗಳನ್ನು ವಿವರಿಸುತ್ತಾ ಅತ್ಯಂತ ಸೂಕ್ಷ್ಮವಾದ ಶೈಲಿಯಲ್ಲಿ ನೈತಿಕತೆ ಮತ್ತು ಸಂಸ್ಕಾರದ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿದರು. ಅನಂತರ ಸಮೂಹದಲ್ಲಿ ಒಬ್ಬ ವ್ಯಕ್ತಿಗೆ ಇತರ ಜನರೊಡನೆ ಇರುವ ಸಂಬಂಧಗಳು ಯಾವ ಆಧಾರದ ಮೇಲೆ ಇರಬೇಕೆಂಬುದರ ಬಗ್ಗೆ ಬೆಳಕು ಬೀರಿದರು. ಅನಂತರ ನಾಗರಿಕತೆಯ ತತ್ವಗಳನ್ನು, ಆಡಳಿತ ಮತ್ತು ಪ್ರಜೆಗಳ ಕರ್ತವ್ಯಗಳನ್ನು ಹಾಗೂ ಹಕ್ಕುಗಳನ್ನು ವಿಶದವಾಗಿ ವಿವರಿಸಿದರು. ಅನಂತರ ಈ ವಿಷಯವನ್ನು ಹೆಚ್ಚು ವಿಸ್ತೃತಗೊಳಿಸುತ್ತಾ ಸರ್ಕಾರಗಳ ಪರಸ್ಪರ ಸಂಬಂಧಗಳು ಯಾವ ರೀತಿಯಲ್ಲಿರಬೇಕೆಂಬುದರ ಬಗ್ಗೆ ಬೆಳಕುಬೀರಿದರು. ಹಲವು ದೇಶಗಳಲ್ಲಿರುವ ಜಗಳಗಳ ಪರಿಹಾರಕ್ಕಾಗಿ ಅವರು ಪವಿತ್ರ ಖುರ್‌ಆನಿನ ಅಮೂಲ್ಯ ತತ್ವಗಳನ್ನು ವಿವರಿಸಿದರು ಮತ್ತು ಲೀಗ್ ಆಫ್ ನೇಶನ್ಸ್ ಈ ತತ್ವಗಳ ಆಧಾರದಲ್ಲಿ ಸ್ಥಾಪಿಸಲ್ಪಟ್ಟಿದ್ದರೆ ಯಶಸ್ಸು ಗಳಿಸುತ್ತಿತ್ತು. ಇವುಗಳ ಪ್ರಕಾರ ಸ್ಥಾಪಿಸಲ್ಪಡದ ಕಾರಣದಿಂದ ಪರಾಜಯಗೊಂಡಿತು. ಈಗ ಯು.ಎನ್.ಓ. ಸಹ ಇವುಗಳ ಪ್ರಕಾರ ನಡೆಯದಿದ್ದರೆ ಅದು ಕೂಡ ಪರಾಜಯಗೊಳ್ಳುವುದು, ಈಗಲೇ ಪರಾಜಯಗೊಳ್ಳುತ್ತಿದೆ. ಹೇಗಿದ್ದರೂ ಪುಸ್ತಕದ ಕೊನೆಯಲ್ಲಿ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಮರಣಾನಂತರ ಸ್ಥಿತಿಗತಿಗಳ ಬಗ್ಗೆ ಬೆಳಕು ಬೀರಿದರು. ಪರಲೋಕದಲ್ಲಿ ಲಭಿಸಲಿರುವ ಶಿಕ್ಷೆ ಮತ್ತು ಪ್ರತಿಫಲದ ನೈಜತೆಯೇನೆಂದು ಹೇಳಿದರು. ಈ ಗ್ರಂಥದಲ್ಲಿ ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಅಧ್ಯಾಪನೆಗಳ ಬಗ್ಗೆ ಪ್ರಸ್ತಾಪಿಸುವುದರೊಂದಿಗೆ ಅವುಗಳ ಪ್ರಕಾರ ನಡೆದವರ ಉದಾಹರಣೆಗಳನ್ನು ಸಹ ನೀಡಲಾಗಿವೆ. ಅವರು ಹೇಗೆ ತಮ್ಮ ಜೀವಿತಗಳಲ್ಲಿ ಪರಿವರ್ತನೆಗಳನ್ನು ಉಂಟುಮಾಡಿದ್ದರು ಮತ್ತು ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಅಧ್ಯಾಪನೆಗಳ ಪ್ರಭಾವ ಅವರ ಮೇಲೆ ಹೇಗೆ ಉಂಟಾಯಿತು ಎಂದು ಹೇಳಲಾಗಿದೆ. ಅವರಲ್ಲಿ ಕೆಲವರು ತಮ್ಮ ಜೀವಗಳನ್ನು ತ್ಯಾಗಮಾಡಿದರು; ಆದರೆ ಹಝ್ರ‌ತ್ ಮಸೀಹ್ ಮೌಊದ್‌ರ(ಅ) ಅಧ್ಯಾಪನೆಗಳನ್ನು ಉಪೇಕ್ಷಿಸಲು ಇಷ್ಟಪಡಲಿಲ್ಲ. ಕೊನೆಗೆ ಹಝ್ರ‌ತ್ ಮುಸ್ಲಿಹ್ ಮೌಊದ್(ರ) ಲೋಕದೆಲ್ಲಡೆ ವಾಸಿಸುವ ಜನರಿಗೆ ಅಹ್ಮದಿಯ್ಯತ್ ಸ್ವೀಕರಿಸಲು ಆಮಂತ್ರಣ ನೀಡಿದರು. ಈ ವಿಪತ್ತುಗಳಿಂದ ದೂರ ಹೋಗುವ ಸಮಯ ಬಂದಿದೆ ಮತ್ತು ಈ ಕಾಲಘಟ್ಟದ ಸಂದೇಶವಾಹಕರ ಕೈಯಲ್ಲಿ ಒಟ್ಟುಗೂಡಿದರೆ ಇಹಪರಲೋಕದ ವಿಜಯವನ್ನು ಪಡೆಯಬಹುದು ಎಂಬ ಸುವಾರ್ತೆಯನ್ನು ನೀಡಿದರು. ಉಪನ್ಯಾಸ ಕೊನೆಗೊಂಡಾಗ ಸಭಾಧ್ಯಕ್ಷರು ಹಲವು ಪದಗಳಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಹೇಳಿದರು: ಹೆಚ್ಚೇನೂ ಹೇಳುವ ಆವಶ್ಯಕತೆ ನನಗಿಲ್ಲ. ಉಪನ್ಯಾಸದ ಸೊಬಗು ಮತ್ತು ಸೂಕ್ಷ್ಮತೆಯ ಅಂದಾಜನ್ನು ಉಪನ್ಯಾಸವೇ ಸ್ವತಃ ಮಾಡಿದೆ. ನಾನು ಕೇವಲ ನನ್ನ ಪರವಾಗಿಯೂ ಸಭಿಕರ ಪರವಾಗಿಯೂ ಉಪನ್ಯಾಸದ ಕ್ರಮೀಕರಣದ ಸೊಬಗು, ವಿಚಾರಗಳ ಶ್ರೇಷ್ಠತೆ ಮತ್ತು ಉನ್ನತ ಮಟ್ಟದ ಸಮರ್ಥನೆಯ ಶೈಲಿಗಾಗಿ ಹಝ್ರ‌ತ್ ಖ಼ಲೀಫತುಲ್ ಮಸೀಹ್‌ರಿಗೆ ಕೃತಜ್ಞತೆ ಅರ್ಪಿಸುತ್ತೇನೆ. ನನ್ನ ಮಾತುಗಳನ್ನು ಸಭಿಕರು ಒಪ್ಪುತ್ತಿದ್ದಾರೆಂದು ಅವರ ಮುಖಭಾವನೆಯಿಂದ ಗೊತ್ತಾಗುತ್ತಿದೆ. ಅವರ ವತಿಯಿಂದ ನಾನು ಸರಿಯಾಗಿಯೇ ಕೃತಜ್ಞತೆ ಸಲ್ಲಿಸಿದ್ದೇನೆ ಮತ್ತು ಅವರ ಪ್ರಾತಿನಿಧ್ಯವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದೇನೆ ಎಂದು ಅವರು ಸಮ್ಮತಿಸುವರು ಎಂದು ನನಗೆ ಭರವಸೆಯಿದೆ. ಒಬ್ಬ ವ್ಯಕ್ತಿ ಹಝ್ರ‌ತ್ ಮುಸ್ಲಿಹ್ ಮೌಊದ್‌ರ ಮುಂದೆ ಹಾಜರಾಗಿ ಹೀಗೆ ಹೇಳಿದರು: ನಾನು ಭಾರತದಲ್ಲಿ 30ವರ್ಷಗಳ ಕಾಲ ಕೆಲಸಮಾಡಿದ್ದೆ ಮತ್ತು ಮುಸ್ಲಿಮರ ಅವಸ್ಥೆ ಮತ್ತು ವಾದಗಳ ಬಗ್ಗೆ ಅವಲೋಕನ ನಡೆಸಿದ್ದೇನೆ. ಏಕೆಂದರೆ ನಾನೊಬ್ಬ ಮಿಶನರಿಯೆಂಬ ನೆಲೆಯಲ್ಲಿ ಭಾರತದಲ್ಲಿ ಇದ್ದೆ. ಆದರೆ ಯಾವ ರೀತಿಯ ನೈರ್ಮಲ್ಯ ಮತ್ತು ಸೊಗಸಿನೊಂದಿಗೆ ಈ

ಉಪನ್ಯಾಸವನ್ನು ನೀವಿಂದು ಮುಂದಿರಿಸಿದ್ದೀರೋ ಆ ರೀತಿಯಲ್ಲಿ ಹಿಂದೆಂದೂ ಎಲ್ಲಿಯೂ ನಾನು ಕೇಳಿರಲಿಲ್ಲ. ಈ ಉಪನ್ಯಾಸವನ್ನು ಆಲಿಸಿಕೊಂಡು, ಅದರ ಶ್ರೇಷ್ಠ ವಿಚಾರಗಳು, ಕ್ರಮೀಕರಣ ಶೈಲಿ ಮತ್ತು ಸಮರ್ಥನೆಯ ಶೈಲಿಯಿಂದ ನಾನು ಬಹಳ ಪ್ರಭಾವಿತನಾಗಿದ್ದೇನೆ. ನಾನು ನಿಮಗೆ ಶುಭಾಶಯಗಳನ್ನು ಕೋರುತ್ತೇನೆ. ಮತ್ತೊಬ್ಬ ವ್ಯಕ್ತಿ ಬಂದು ಹೀಗೆ ಹೇಳಿದರು: ನಾನು ಈ ಉಪನ್ಯಾಸವನ್ನು ಕೇಳಲು ಫ್ರಾನ್ಸ್‌ನಿಂದ ಬಂದಿದ್ದೇನೆ. ನಾನು ಕ್ರೈಸ್ತ ಧರ್ಮಕ್ಕಿಂತ ಇಸ್ಲಾಮಿಗೆ ಶ್ರೇಷ್ಠತೆ ನೀಡುತ್ತಿದ್ದೆ ಮತ್ತು ಬುದ್ಧ ಧರ್ಮಕ್ಕೆ ಇಸ್ಲಾಮಿನ ಮೇಲೆ ಆದ್ಯತೆ ನೀಡುತ್ತಿದ್ದೆ. ಈಗ ನಾನು ಈ ಉಪನ್ಯಾಸವನ್ನು ಕೇಳಿದ್ದೇನೆ ಮತ್ತು ಬುದ್ಧ ಧರ್ಮದ ಬಗ್ಗೆ ಸಹ ಆಲಿಸಿದ್ದೇನೆ. ನಿಶ್ಚಯವಾಗಿಯೂ ಇಸ್ಲಾಮ್ ಎಲ್ಲಕ್ಕಿಂತ ಶ್ರೇಷ್ಠ ಧರ್ಮವೆಂದು ನಾನೀಗ ಸಮ್ಮತಿಸುತ್ತೇನೆ. ಯಾವ ರೀತಿಯ ಸೊಬಗಿನೊಂದಿಗೆ ಮತ್ತು ಉತ್ತಮ ಶೈಲಿಯೊಂದಿಗೆ ನೀವು ಇಸ್ಲಾಮನ್ನು ಮುಂದಿರಿಸಿದ್ದೀರೋ ಅದರೊಂದಿಗೆ ಇತರ ಧರ್ಮಗಳಿಗೆ ಸ್ಪರ್ಧಿಸಲು ಸಾಧ್ಯವಲ್ಲ. ನನ್ನ ಹೃದಯದಲ್ಲಿ ಈಗ ಇದರ ಆಳವಾದ ಪ್ರಭಾವವಿದೆ. ಇನ್ನೂ ಅನೇಕ ಪ್ರತಿಕ್ರಿಯೆಗಳು ಇವೆ. ಚೌಧರಿ ಝಫರುಲ್ಲಾಹ್ ಖಾನ್‌ರೊಡನೆ, ಈ ಕಾನ್ಫರೆನ್ಸ್‌ನ ಸೆಕ್ರೆಟರಿ ಆಗಿದ್ದ ಮಿಸಸ್ ಶಾ ರಿಪಲ್ಸ್ ಹೇಳಿದರು: ನಾನು ನಿಮಗೆ ಶುಭಾಶಯಗಳನ್ನು ಅರ್ಪಿಸುತ್ತೇನೆ. ಜನರು ನಿಮ್ಮ ತುಂಬ ಕೃತಜ್ಞರಾಗಿದ್ದಾರೆ. ಸ್ತ್ರೀಪುರುಷರು ನನ್ನ ಬಳಿಗೆ ಬಂದು ಈ ಉಪನ್ಯಾಸದ ಬಗ್ಗೆ ಪ್ರಶಂಸೆಯ ಮಾತುಗಳನ್ನು ಹೇಳುತ್ತಿರುತ್ತಾರೆ. ಅಲ್ಲಿ ಪ್ರೊಫೆಸರ್ ಆಗಿದ್ದ ಒಬ್ಬ ಜರ್ಮನ್ ವ್ಯಕ್ತಿ ಸಭೆಯಿಂದ ಮರಳಿ ಹೋಗುವ ಮಾರ್ಗದಲ್ಲಿ ಮುಂದಕ್ಕೆ ಧಾವಿಸಿ ಹಝ್ರತ್ ಖಲೀಫತುಲ್ ಮಸೀಹ್‌ರಿಗೆ ಶುಭಾಶಯಗಳನ್ನು ಅರ್ಪಿಸಿದರು ಮತ್ತು ಹೀಗೆ ಹೇಳಿದರು: ನನ್ನ ಸಮೀಪ ಕೆಲವು ದೊಡ್ಡ ದೊಡ್ಡ ಆಂಗ್ಲೇಯರು ಕುಳಿತಿದ್ದರು. ಅವರಲ್ಲಿ ಕೆಲವರು ತಮ್ಮ ತೊಡೆಗಳಿಗೆ ಹೊಡೆಯುತ್ತಾ ಹೀಗೆ ಹೇಳುತ್ತಿದ್ದರು: Rare ideas. One cannot hear such ideas everyday. ಎಂದರೆ, ಅಪೂರ್ವ ವಿಚಾರಗಳು. ಇಂತಹ ವಿಚಾರಗಳು ದಿನಾಲೂ ಆಲಿಸಲು ಸಿಗುವುದಿಲ್ಲ. ಅದೇ ಪ್ರೊಫೆಸರ್ ಹೇಳುತ್ತಾರೆ: ಕೆಲವೆಡೆ ಜನರು ತಮ್ಮಷ್ಟಕ್ಕೆ ತಾವೇ ಹೀಗೆ ಹೇಳುತ್ತಿದ್ದರು: What a beautiful and true principle - ಎಷ್ಟು ಮನೋಹರ ಮತ್ತು ಸತ್ಯವಾದ ತತ್ವಗಳಾಗಿವೆ. ಆ ಜರ್ಮನಿ ಪ್ರೊಫೆಸರ್ ಸ್ವತಃ ತನ್ನ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದರು: ಈ ಸಂದರ್ಭ ಅಹ್ಮದಿಯರಿಗೆ ಒಂದು ಟರ್ನಿಂಗ್ ಪೋಯಿಂಟ್ ಆಗಿದೆ. ಎಂದರೆ ಅಭಿವೃದ್ಧಿಯ ಒಂದು ಸಮಯವಾಗಿದೆ. ನೀವು ಸಾವಿರಾರು ಪೌಂಡ್‌ಗಳನ್ನು ಖರ್ಚುಮಾಡಿದ್ದರೂ ಈ ಉಪನ್ಯಾಸದಿಂದ ಉಂಟಾದಂತಹ ಪ್ರಸಿದ್ಧಿ ಮತ್ತು ವಿಜಯ ಎಂದಿಗೂ ಲಭಿಸುತ್ತಿರಲಿಲ್ಲ. ಬಹಾಯಿ ಧರ್ಮದ ಒಬ್ಬ ಸ್ತ್ರೀ, ಲೆಕ್ಚರನ್ನು ಆಲಿಸಿದ ನಂತರ ಹೇಳುತ್ತಾರೆ: ನಾನು ಬಹಾಯಿ ಚಿಂತನೆಗಳನ್ನು ಹೊಂದಿದ್ದೆ. ಆದರೆ ಈಗ ಇಂದಿನ ಲೆಕ್ಚರ್ ಆಲಿಸಿಕೊಂಡು ನನ್ನ ವಿಚಾರಗಳು ಬದಲಾಗಿವೆ. ಹೆಚ್ಚಿನ ನಿಮ್ಮ ಉಪನ್ಯಾಸಗಳನ್ನು ಆಲಿಸಲು ನಾನು ಬಯಸುತ್ತೇನೆ. ಯಾವಾಗಲೆಲ್ಲ ಮತ್ತು ಎಲ್ಲೆಲ್ಲ ನಿಮ್ಮ ಉಪನ್ಯಾಸಗಳು ಇರುವುವು ಎಂದು ದಯವಿಟ್ಟು ಹೇಳಿದರೆ, ನಾನು ಖಂಡಿತ ಬರುವೆನು. ಒಬ್ಬ ಸ್ತ್ರೀ ಹಝ್ರತ್ ಖಲೀಫತುಲ್ ಮಸೀಹ್‌ರನ್ನು ಮನೆಗೆ ಚಹಾ ಕುಡಿಯಲು ಬರಲು ಒತ್ತಾಯದಿಂದ ಆಮಂತ್ರಿಸಿದರು. ಒಬ್ಬ ವ್ಯಕ್ತಿ ಹೀಗೆಯೂ ಹೇಳಿದರು: ದೇಶಪ್ರೇಮಕ್ಕಿಂತ ಪ್ರಿಯವಾದ ಉಪನ್ಯಾಸವಾಗಿತ್ತು.

ಹೇಗಿದ್ದರೂ 18 ವಯಸ್ಸಿನಿಂದ 35 ವಯಸ್ಸಿನ ವರೆಗಿನ ಅವರ ಅರಿವು ಮತ್ತು ಪರಿಜ್ಞಾನದ ಮುತ್ತುಗಳ ಕೆಲವು ಮಿಂಚು ನೋಟವನ್ನು ಮಾತ್ರ ನಾನು ಇಲ್ಲಿ ತೋರಿಸಿದ್ದೇನೆ. ಇವು ಯೌವ್ವನದ ಆರಂಭಿಕ ಕಾಲದ ಮಾತುಗಳಾಗಿವೆ. ಅದು ಕೂಡ ನಾನು ಹೇಳಿದಂತೆ, ಯಾವುದೇ ಭೌತಿಕ ಶಿಕ್ಷಣವಿಲ್ಲದ ಒಬ್ಬ ವ್ಯಕ್ತಿಯದ್ದು. ಆದರೆ ಬಾಹ್ಯ ಮತ್ತು ಆಂತರಿಕ ಜ್ಞಾನಗಳಿಂದ ತುಂಬಿಸಲಾಗಿದ್ದುವು. ಇದು ಹಝ್ರತ್ ಮಸೀಹ್ ಮೌಊದ್‌ರ(ಅ) ಸತ್ಯತೆ ಮತ್ತು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಯ ಸತ್ಯತೆಯ ಒಂದು ದೃಷ್ಟಾಂತವಾಗಿದೆ. ನಾನು ಇಲ್ಲಿ ಹೇಳಿದ ಸಂಗತಿಗಳು ಅವರ 17 ವರ್ಷಗಳ ಕಾಲಾವಧಿಯದ್ದಾಗಿವೆ. ಕೆಲವು ಅವರ ಖಿಲಾಫತಿನ ಮುಂಚಿನದ್ದು ಮತ್ತು ಕೆಲವು ಅವರ ಖಿಲಾಫತಿನ ನಂತರದ್ದಾಗಿವೆ. ಅವರು ವಿವರಿಸಿದ್ದ ಸಂಗತಿಗಳ ನೂರನೇ ಒಂದು ಅಂಶವನ್ನು ಕೂಡ ನನ್ನಿಂದ ವಿವರಿಸಲು ಸಾಧ್ಯವಾಗಿಲ್ಲ. ಬಹುಶಃ ಅವರ ಸಾಕಷ್ಟು ಗ್ರಂಥಗಳನ್ನು ಪರಿಚಯಪಡಿಸಬಹುದೆಂದು ಭಾವಿಸಿದ್ದೆ. ಅವರ ಖುತ್‌ಬಗಳು ಮತ್ತು ತಫ್ಸೀರ್‌ಗಳು ಇದಲ್ಲದೇ ಇವೆ. ಅವುಗಳಲ್ಲಿ ಅರಿವು ಮತ್ತು ಜ್ಞಾನದ ಅಂಶಗಳಿವೆ. ಅವುಗಳಲ್ಲಿ ಜ್ಞಾನದ ನದಿಗಳು ಹರಿಯುತ್ತಿವೆ. ಅದಲ್ಲದೇ ಹಲವು ಸಭೆಗಳಲ್ಲಿ ಅವರು ಲೋಕಕ್ಕೆ ಮಾರ್ಗದರ್ಶನವನ್ನು ನೀಡಿದ್ದರು. ಬಹುತೇಕ ಪ್ರಕಾಶನಗೊಂಡಿರುವ ಈ ಖಜಾನೆಗಳನ್ನು ಜಮಾಅತಿನ ವ್ಯಕ್ತಿಗಳು ಓದಬೇಕು. ಅಲ್ಲಾಹನು ಹಝ್ರತ್ ಮುಸ್ಲಿಹ್ ಮೌಊದ್‌ರ(ರ) ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ. ♦

**(ಭಾಷಾಂತರ: ಮೌಲವಿ ಇನಾಮುಲ್ಲಾಹ್)**

# LOVE FOR HONESTY AND HATRED FOR DISHONESTY
# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ಇಸ್ಲಾಮಿನ ಸತ್ಯಸಾಕ್ಷ್ಯ – 3

**ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ (ದ್ವಿತೀಯ ಖಲೀಫ)ರವರ ಭಾಷಣ**

## ಅಲ್ಲಾಹನು ದಾಸನನ್ನು ಪ್ರೀತಿಸುವುದು

ಎಲ್ಲ ಧರ್ಮಗಳು, ನಾವು ದೇವನೊಂದಿಗೆ ಮನುಷ್ಯನ ಸಂಬಂಧವನ್ನು ಸ್ಥಾಪಿಸುವೆವು ಎಂದು ಹೇಳುತ್ತವೆ. ಇಸ್ಲಾಮಿನ ಶ್ರೇಷ್ಠತೆ ಏನೆಂದರೆ ಅದು ಹೇಳುತ್ತದೆ: ದೇವನ ಬಗ್ಗೆ ಪ್ರೀತಿ ನಿಮ್ಮಲ್ಲಿ ಉಂಟಾಗುವಂತಹ ಉಪದೇಶ ನೀಡುತ್ತೇನಲ್ಲದೆ ಅದರೊಂದಿಗೆ ಅಲ್ಲಾಹನು ನಿಮ್ಮೊಂದಿಗೆ ಪ್ರೀತಿಯ ಸಂಬಂಧ ಸ್ಥಾಪಿಸುವ ಉಪದೇಶವನ್ನೂ ನೀಡುತ್ತೇನೆ. ಇಸ್ಲಾಮ್, **"ನೀವು ಒಳ್ಳೆಯವರಾಗಿರಿ"** ಎಂದು ಮಾತ್ರ ಉಪದೇಶಿಸದೆ ಅದು ಎಂತಹ ಉಪದೇಶ ನೀಡುತ್ತದೆ ಎಂದರೆ ನೀವು ನನ್ನ ಉಪದೇಶಗಳನ್ನು ಅನುಸರಿಸಿ ಕರ್ಮಗಳನ್ನು ಮಾಡಿದರೆ ನಿಮ್ಮನ್ನು ಅಲ್ಲಾಹನು ಕರೆದು ಹೇಳುವನು – ನೀವು ನನ್ನ ಪ್ರೀತಿಗೆ ಪಾತ್ರರಾಗಿರುವಿರಿ ಎಂದು. ಇಸ್ಲಾಮ್ ಹೀಗೆ ಸಹ ಹೇಳುತ್ತದೆ: ಇಸ್ಲಾಮ್ ಸತ್ಯ ಧರ್ಮವೆಂದು ನಿಮಗೆ ತಿಳಿಯುವುದು ನೀವು ಮೃತರಾದ ನಂತರ ಮಾತ್ರವಲ್ಲ; ಅದು ಇದೇ ಲೋಕದಲ್ಲಿ ನಿಮಗೆ ಸಾಕ್ಷ್ಯಾಧಾರ ನೀಡುವುದು – **"ನೀವು ಮಾರ್ಗದಲ್ಲಿದ್ದೀರಿ"** ಎಂದು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳುತ್ತಾನೆ: **ಇನ್ ಕುನ್‌ತುಮ್ ತುಹಿಬ್ಬೂನಲ್ಲಾಹ ಫತ್ತಬಿಊನಿ ಯುಹ್‌ಬಿಬ್‌ಕುಮುಲ್ಲಾಹ್** – ನೀವು ಬನ್ನಿರಿ, ಇದೇ ಲೋಕದಲ್ಲಿ ಅಲ್ಲಾಹನಿಗೆ ಪ್ರಿಯರಾದವರಾಗಿರಿ. (3:32). ಪ್ರಿಯನೆಂದರೆ ಅವನಿಗೆ ಯಾವುದಾದರೂ ಕಷ್ಟ ಉಂಟಾದರೆ ಅವನನ್ನು ಪ್ರೀತಿಸುವವನು ಅವನಿಗೆ ಸಹಾಯ ಮಾಡುವನು ಮತ್ತು ಅವನೊಂದಿಗೆ ಮಾತನಾಡಿ ಸಮಾಧಾನಪಡಿಸುವನು. ಒಬ್ಬನು ಇನ್ನೊಬ್ಬನೊಂದಿಗೆ, **"ನಾನು ನಿನ್ನನ್ನು ಪ್ರೀತಿಸುತ್ತೇನೆ"** ಎಂದು ಹೇಳಿ ಅವನು ಕಷ್ಟದಲ್ಲಿರುವಾಗ ಸಹಾಯ ಮಾಡದಿದ್ದರೆ ಅವನು ತನ್ನನ್ನು ಪ್ರೀತಿಸುತ್ತಾನೆಂದು ಗಣಿಸಲಾರನು. ಅಲ್ಲಾಹನು ಮನುಷ್ಯನನ್ನು ಪ್ರೀತಿಸುವುದರ ಅರ್ಥವೇನೆಂದರೆ ಮನುಷ್ಯನಿಗೆ ಕಷ್ಟ ಉಂಟಾದಾಗ ಅಲ್ಲಾಹನು ಅವನಿಗೆ ಸಹಾಯ ಮಾಡುತ್ತಾನೆ ಮತ್ತು ಅವನೊಂದಿಗೆ ಮಾತನಾಡುತ್ತಾನೆ.

## ಇಸ್ಲಾಮ್‌ನಲ್ಲಿ ಅಲ್ಲಾಹನೊಂದಿಗೆ ಮಾತನಾಡುವ ಬಾಗಿಲು ತೆರೆದಿದೆ

ಅಲ್ಲಾಹನು ಮಾತನಾಡುವ ಬಾಗಿಲು ತೆರೆದಿದೆ ಎಂದು ಪವಿತ್ರ ಖುರ್‌ಆನ್‌ನಲ್ಲಿ ಹೇಳಲಾಗಿದೆ. **ಇಹ್‌ದಿನ ಸ್ಸಿರಾತಲ್ ಮುಸ್ತಖೀಮ್ ಸಿರಾತಲ್ಲಧೀನ ಅನ್‌ಅಮ್‌ತ ಅಲೈಹಿಮ್** – ಎಲೈ ಸತ್ಯ ವಿಶ್ವಾಸಿಗಳೇ, ನೀವು ಯಾವಾಗಲೂ ಪ್ರಾರ್ಥಿಸಿರಿ. ಹೇ ಅಲ್ಲಾಹ್, ನೀನು ನಮಗೆ ನೇರಮಾರ್ಗವನ್ನು ತೋರಿಸಿಕೊಡು. ಎಂದರೆ ಯಾವ ಮಾರ್ಗದಲ್ಲಿ ಚಲಿಸಿ ಮುಂಚೆ ಜನರು ದೇವನ ಸಾಮೀಪ್ಯ ಗಳಿಸಿದರೋ ಆ ಮಾರ್ಗದಲ್ಲಿ (ಸೂರಃ ಫಾತಿಹ).

ಈ ವಚನ ಸೂಚಿಸುವುದೇನೆಂದರೆ ಅಲ್ಲಾಹನು ತನ್ನ ದಾಸರಿಗೆ ದೃಢವಾಗಿ ತಿಳಿಸುತ್ತಾನೆ: ನೀವು ನನ್ನ ಸಾಮೀಪ್ಯ ಗಳಿಸಬಲ್ಲಿರಿ.

## ಇಸ್ಲಾಮಿನ ಶ್ರೇಷ್ಠತೆ

ಇಸ್ಲಾಮ್ ಮತ್ತು ಅನ್ಯ ಧರ್ಮಗಳ ಮಧ್ಯೆ ಇರುವ ಸ್ಪಷ್ಟ ವ್ಯತ್ಯಾಸ ಮೇಲೆ ವಿವರಿಸಿದುದೇ ಆಗಿದೆ. ನೈತಿಕ ಉಪದೇಶಗಳಿಗೆ ಸಂಬಂಧಿಸಿ ಧರ್ಮಗಳ ಮಧ್ಯೆ ಪರಸ್ಪರ ದೊಡ್ಡ ವ್ಯತ್ಯಾಸಗಳೇನೂ ಇಲ್ಲ. ಪ್ರತಿಯೊಂದು ಧರ್ಮ ಕೆಟ್ಟ ಕೆಲಸ ಮಾಡುವುದನ್ನು ತಡೆಯುತ್ತದೆ; ಒಳ್ಳೆಯ ಕೆಲಸ ಮಾಡುವುದನ್ನು ಪ್ರೋತ್ಸಾಹಿಸುತ್ತದೆ. ಆದರೆ ಇಸ್ಲಾಮ್ ಹೇಳುವುದೇನೆಂದರೆ, ನೀವು ಅಲ್ಲಾಹನಿಗೆ ಪ್ರಿಯರಾದವರು ಮತ್ತು ಅವನ ಸಾಮೀಪ್ಯ ಗಳಿಸಿದವರೆಂದು ನಿಮಗೆ ಇಹಲೋಕದಲ್ಲಿಯೇ ತಿಳಿಯುವುದು. ಇದಕ್ಕೆ ಸಾಕ್ಷ್ಯಾಧಾರ ಇಸ್ಲಾಮಿನಲ್ಲಿ ಸಿಗುತ್ತದೆ. ಪ್ರತಿಯೊಂದು ಕಾಲಘಟ್ಟದಲ್ಲಿ ಅಂತಹ ಜನರು ಆಗಮಿಸಿದ್ದರು. ಅವರು ಹೇಳಿದರು: ಅಲ್ಲಾಹನನ್ನು ನಾವು ಕಂಡಿದ್ದೇವೆ ಮತ್ತು ಅಲ್ಲಾಹನು ನಮ್ಮೊಂದಿಗೆ ಮಾತನಾಡಿರುವನು ಎಂದು. ಇಂತಹ ಜನರಲ್ಲಿ ಹಝ್ರತ್ ಮುಈನುದ್ದೀನ್ ಚಿಶ್ತಿ[ರಹ್] ಹಝ್ರತ್ ಮುಹ್‌ಯುದ್ದೀನ್ ಇಬ್ನು ಅರಬಿ[ರಹ್] ಹಝ್ರತ್ ಜುನೈದ್ ಬಗ್‌ದಾದಿ[ರಹ್] ಮತ್ತು ಇತರ ಅನೇಕರು ಇಸ್ಲಾಮ್‌ನಲ್ಲಿ ಗತಿಸಿ ಹೋಗಿರುವರು. ಅವರು ತಮ್ಮ ಹೃದಯದಲ್ಲಿ ಅಲ್ಲಾಹನ ಪ್ರೀತಿ ಹುಟ್ಟಿಸಿದರು. ಅಲ್ಲಾಹನು ಸಹ ಅವರನ್ನು ಪ್ರೀತಿಸಿದನು. ಅವರಿಗೆ ತನ್ನ ಪ್ರೀತಿಯ ನಿಲುವಂಗಿ ತೊಡಿಸಿದನು. ಅವರ ಪ್ರತಿಯೊಂದು ಕಷ್ಟವನ್ನು ದೂರ ಸರಿಸಿದನು ಮತ್ತು ಪ್ರತಿಯೊಂದು ಕಷ್ಟಕಾಲದಲ್ಲಿ ಅವರಿಗೆ ಸಹಾಯ ನೀಡಿದನು.

## ನಮ್ಮ ಕಾಲಘಟ್ಟದಲ್ಲಿ ದೇವನಿಗೆ ಪ್ರಿಯನಾದ ಒಬ್ಬ ಮಹಾನುಭಾವರು

ಇಸ್ಲಾಮ್ ಧರ್ಮದಲ್ಲಿ ಅಲ್ಲಾಹನಿಗೆ ಪ್ರಿಯರಾದ ಅನೇಕ ಹಿರಿಯರು ಗತಿಸಿ ಹೋಗಿರುವರು. ಈ ಕಾಲಘಟ್ಟದಲ್ಲಿ ಸಹ ಅಲ್ಲಾಹನಿಗೆ ವಿಶಿಷ್ಟವಾಗಿ ಪ್ರಿಯರಾದ ಒಬ್ಬರು ಆಗಮಿಸಿದ್ದರು. ಅಲ್ಲಾಹನು ಈ ಕಾಲಘಟ್ಟದ ಭ್ರಷ್ಟತೆಯನ್ನು ಕಂಡು, ಜನರು ಅಲ್ಲಾಹನಿಂದ ದೂರ ಸರಿದು ಅನಾಸಕ್ತರಾಗಿರುವುದನ್ನು ಕಂಡು ಒಬ್ಬ ಮಹಾನುಭಾವರನ್ನು ಕಳುಹಿಸಿದನು. ಅವರು ಇಸ್ಲಾಮಿಗೆ ಸೇವೆ ಸಲ್ಲಿಸಿದರು. ಅವರು ಇಸ್ಲಾಮಿನ ಸತ್ಯತೆ ಸಾಬೀತುಗೊಳಿಸಿದರು. ಅವರು ಆಗಮಿಸಿದ ಕಾಲದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಉಪದೇಶಗಳನ್ನು ಅತ್ಯಂತ ಕೆಟ್ಟದ್ದೆಂದು ಹೇಳಲಾಗುತ್ತಿತ್ತು. ಇಸ್ಲಾಮ್ ನೂರು ವರ್ಷದೊಳಗೆ ಲೋಕದಿಂದ ಅಳಿದು ಹೋಗುವುದೆಂದು ಸಹ ಹೇಳಲಾಗುತ್ತಿತ್ತು. ಆಗ ಅಲ್ಲಾಹನ ಅಭಿಮಾನ ಉಕ್ಕಿಹೊಮ್ಮಿತು. ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಅಳಿಸಿಬಿಡಬಲ್ಲವನಾರು ಎಂದು ಅಲ್ಲಾಹನು ಹೇಳಿದನು. ಅದು ಎಂತಹ ಕಾಲಘಟ್ಟವಾಗಿತ್ತೆಂದರೆ ಇಸ್ಲಾಮ್ ಬಡವಾಗಿತ್ತು. ವಿದ್ಯಾಭ್ಯಾಸದ ಅಭಿವೃದ್ಧಿ ಮತ್ತು ವೈಜ್ಞಾನಿಕ ಪ್ರಗತಿಯ ಕಾರಣ ಇಸ್ಲಾಮಿನ ವಿರುದ್ಧ ಹೊಸ ಹೊಸ ಆಕ್ಷೇಪಗಳನ್ನು ಮಾಡಲಾಗಿತ್ತು. ಬುದ್ಧಿಗೆ ವಿರೋಧವಾದ ವಿಷಯಗಳು ಪವಿತ್ರ ಖುರ್‌ಆನ್‌ನಲ್ಲಿದೆ ಎಂದು ಹೇಳಲಾಗುತ್ತಿತ್ತು. ಡಾರ್ವಿನನ ವಿಕಾಸ ವಾದ ಪ್ರಕಟವಾದಾಗ ಇಸ್ಲಾಮಿನ ವಿರುದ್ಧ ಅದರ ಮೂಲಕ ಆಕ್ರಮಣ ನಡೆಸಲಾಯಿತು. ಜಿಯೋಲಜಿ ಮೂಲಕ ಸಹ ಇಸ್ಲಾಮನ್ನು ಆಕ್ರಮಣಗಳಿಗೆ ಗುರಿಪಡಿಸಲಾಯಿತು. ಎಸ್ಟ್ರೋನೊಮಿ ಮೂಲಕ

ಇಸ್ಲಾಮಿನ ಕುಂದುಕೊರತೆಗಳನ್ನು ಪ್ರಕಟಿಸಲಾಯಿತು. ಪ್ರತಿಯೊಂದು ಜ್ಞಾನದ ಅಭಿವೃದ್ಧಿಯೊಂದಿಗೆ ಸಂಶೋಧನೆ ನಡೆಸಿ ಇಸ್ಲಾಮ್ ನ್ಯೂನತೆಗಳಿಂದಲೂ ತಪ್ಪುಗಳಿಂದಲೂ ತುಂಬಿದೆ ಎಂದು ತಮ್ಮ ಸಂಶೋಧನೆಯ ಪರಿಣಾಮಗಳನ್ನು ಪ್ರಕಟಿಸಲಾಗಿತ್ತು. ಇಸ್ಲಾಮ್ ಯಾವುದೇ ಜ್ಞಾನ ವಿಭಾಗದ ಮುಂದೆ ನಿಲ್ಲಲಾರದೆಂದು ಹೇಳಲಾಯಿತು. ಈ ಕಾರಣದಿಂದ, ಮುಸ್ಲಿಮರು ವಿದ್ಯಾಭ್ಯಾಸದಲ್ಲಿ ಪ್ರಗತಿ ಗಳಿಸಿದರೆ ಸ್ವತಃ ಇಸ್ಲಾಮನ್ನು ಬಿಟ್ಟು ಬಿಡುವರೆಂದು ಸ್ಪಷ್ಟವಾಗಿ ಹೇಳಲಾಯಿತು. ಈ ಅಭಿಪ್ರಾಯ ಎಷ್ಟು ವಿಶಾಲವಾಗಿ ಹರಡಿತು ಎಂದರೆ ತಾವು ಮುಸ್ಲಿಮರೆಂದು ಹೇಳಿಕೊಳ್ಳುವವರಲ್ಲಿ ಎಂತಹ ಜನರು ಜನಿಸಿದರೆಂದರೆ ಅವರು ಹೇಳಿದರು: "ಇಸ್ಲಾಮ್‌ನಲ್ಲಿ ಸುಧಾರಣೆ ಆಗಬೇಕು. ಈಗಿನ ಕಾಲಘಟ್ಟಕ್ಕೆ ಅನುಸಾರವಾಗಿ ಅದರ ಉಪದೇಶಗಳನ್ನು ಬದಲಾಯಿಸಬೇಕು." ಇಂತಹ ಪರಿಸ್ಥಿತಿಯಲ್ಲಿ ಯಾವ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ[ಸ] "ನೀನು ನನಗೆ ಎಷ್ಟು ಪ್ರಿಯನಾಗಿರುವೆ ಎಂದರೆ ನಿನ್ನ ಗುಲಾಮರು ಸಹ ನನಗೆ ಪ್ರಿಯರಾಗುವರು" ಎಂದು ಹೇಳಿದ್ದನೋ ಆ ಅಲ್ಲಾಹನ ಅಭಿಮಾನ ಉಕ್ಕಿತು. ಅವನ ಪ್ರೀತಿ ಕಾರಂಜಿಯ ಹಾಗೆ ಹೊರಹೊಮ್ಮಿತು. ಅಲ್ಲಾಹನು ಇಸ್ಲಾಮಿನ ಗೌರವ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ[ಸ] ಶ್ರೇಷ್ಠತೆ ಸಾಬೀತುಗೊಳಿಸಲು ಎಂತಹ ಒಬ್ಬ ಮಹಾನುಭಾವರನ್ನು ಎದ್ದೇಳಿಸಿ ನಿಲ್ಲಿಸಿದನೆಂದರೆ ಅವರು ವೈಭವದ ದೃಷ್ಟಿಯಲ್ಲೂ ಸಂಪತ್ತಿನ ದೃಷ್ಟಿಯಲ್ಲೂ ಪ್ರಸಿದ್ಧಿ ಮತ್ತು ಗೌರವದ ದೃಷ್ಟಿಯಲ್ಲೂ ಲೋಕದಲ್ಲಿ ಯಾವುದೇ ಸ್ಥಾನ ಪಡೆದಿರಲಿಲ್ಲ. ಅವರ ಮೂಲಕ ಈ ಕಾಲದಲ್ಲಿ ಇಸ್ಲಾಮನ್ನು ಸ್ಥಾಪಿಸುವೆನೆಂದೂ ಲೋಕದಲ್ಲಿ ಹರಡುವೆನೆಂದೂ ಅಲ್ಲಾಹನು ಹೇಳಿದನು. ಅಂತಹ ಅಪಾಯಕರವಾದ ಸೂಕ್ಷ್ಮ ಕಾಲದಲ್ಲಿ ಇಸ್ಲಾಮಿನ ಸತ್ಯವನ್ನು ಸಾಬೀತುಗೊಳಿಸಲು ಅಲ್ಲಾಹನು ಒಂದು ಬಾಗಿಲನ್ನು ತೆರೆದನು. ಖಾದಿಯಾನ್‌ನಿಂದ ಆ ಮಹಾನುಭಾವರನ್ನು ಆಯ್ಕೆ ಮಾಡಿದನು. ಅವನು ಅವರೊಂದಿಗೆ ಹೀಗೆ ಹೇಳಿದನು: ನೀನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗುಲಾಮಗಿರಿಯ ನೊಗವನ್ನು ನಿನ್ನ ಕೊರಳಲ್ಲಿ ಪೂರ್ಣವಾಗಿ ಇರಿಸಿದ ಕಾರಣ ನಾನು ನಿನ್ನನ್ನು ಇಸ್ಲಾಮಿನ ಸೇವೆಗೋಸ್ಕರ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠತೆ ಸ್ಥಾಪಿಸಲು ನಿಲ್ಲಿಸುತ್ತೇನೆ.

## ವಾಗ್ದತ್ತ ಮಸೀಹರ ಆಗಮನದಿಂದ ಇಸ್ಲಾಮಿನ ಸತ್ಯತೆ ಸಾಬೀತಾಗುತ್ತದೆ

ಈ ಮಹಾನುಭಾವರಿಗೆ ಅಲ್ಲಾಹನೊಂದಿಗೆ ಪ್ರೀತಿ ಇತ್ತೆಂದು ತಿಳಿಯುವುದು ಹೇಗೆ ಮತ್ತು ಅಲ್ಲಾಹನಿಗೆ ಅವರೊಂದಿಗೆ ಪ್ರೀತಿ ಇತ್ತೆಂದು ತಿಳಿಯುವುದು ಹೇಗೆ? ಅವರ ಆಗಮನದಿಂದ ಇಸ್ಲಾಮಿನ ಸತ್ಯತೆ ಸಾಬೀತಾಗುವುದು ಹೇಗೆ? ಅನ್ಯ ಧರ್ಮದವರು ನಮ್ಮೊಂದಿಗೆ ಕೇಳಬಹುದು: ಈ ವ್ಯಕ್ತಿಯ ಆಗಮನದಿಂದ ಇಸ್ಲಾಮಿನ ಸತ್ಯತೆ ಸಾಬೀತಾಗುವುದು ಹೇಗೆ? ನೀವು ಇಸ್ಲಾಮನ್ನು ಪ್ರೀತಿಸುವ ಕಾರಣ ಈ ಉಪಾಯ ಯೋಜಿಸಿದ್ದೀರಿ ಎಂದು ಸಹ ಅವರು ಹೇಳಬಹುದು.

ಇದಕ್ಕೆ ಉತ್ತರವೇನೆಂದರೆ, ಅಲ್ಲಾಹನಿಗೆ ಪ್ರಿಯರಾದವನಿಗೆ ಅಲ್ಲಾಹನ ಬೆಂಬಲ ಲಭಿಸುತ್ತದೆ. ಆದುದರಿಂದ ಈ ಮಹಾನುಭಾವರಿಗೆ ಅಲ್ಲಾಹನ ಸಹಾಯ ಇತ್ತೋ ಇಲ್ಲವೋ ಎಂದು ನೋಡಬೇಕಾಗಿದೆ. ಅದನ್ನು ಈ ರೀತಿ ನೋಡಬಹುದು: ನಾನು ಸೂಚನೆ ರೂಪದಲ್ಲಿ ಹಿಂದೆ ಹೇಳಿದ್ದೆ. ಆ ಮಹಾನುಭಾವರು ಇಸ್ಲಾಮಿನ ಸೇವೆಗೋಸ್ಕರ ಎದ್ದು ನಿಂತಾಗ ಅವರ ಸ್ಥಿತಿ ಬಹಳ ಸಾಮಾನ್ಯವಾಗಿತ್ತು. ಅವರಿಗೆ ಯಾವ ವೈಭವವೂ ಇರಲಿಲ್ಲ. ಅವರು ಲೋಕದಲ್ಲಿ ಪ್ರಸಿದ್ಧರಾಗಿರಲಿಲ್ಲ. ಅವರ ಜೊತೆಗೆ ಸಂಪತ್ತಾಗಲೀ ಜನ ಬಲವಾಗಲೀ ಇರಲಿಲ್ಲ. ಅವರು ಶಕ್ತಿಶಾಲಿಯಾಗಿರಲಿಲ್ಲ. ಅಂತಹ ಕಾಲದಲ್ಲಿ ಅವರು ಪ್ರಕಟಿಸಿದರು – ಅಲ್ಲಾಹನು ನನಗೆ ಸಮಾಚಾರ ನೀಡಿರುವನು: "ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸುವೆನು" ಎಂದು. ಅವರು ಹೀಗೆ ಸಹ ಪ್ರಕಟಿಸಿದರು. ಅಲ್ಲಾಹನು ನನ್ನೊಂದಿಗೆ ಹೀಗೆ ಹೇಳಿರುವನು: **ಫಹಾನ ಅನ್ ತುಅನ ವ ತುಅ್‌ರಫ ಬೈನನ್ನಾಸ್ –** "ನಿನಗೆ ನೆರವು ದೊರಕುವ ಕಾಲ ಬಂದಿದೆ. ನೀನು ಲೋಕದಲ್ಲಿ ಗುರುತಿಸಲ್ಪಡುವೆ." (ತಧ್‌ಕಿರ ಪುಟ 220 ಚತುರ್ಥ ಮುದ್ರಣ).

ಆ ಮಹಾನುಭಾವರು ಹೀಗೆ ಸಹ ಪ್ರಕಟಿಸಿದರು. ಅಲ್ಲಾಹನು ನನಗೆ ಹೀಗೆ ತಿಳಿಸಿರುವನು: **ದುನ್‌ಯಾ ಮೇ ಏಕ್ ನಧೀರ್ ಆಯಾ. ಪರ್ ದುನ್‌ಯಾ ನೆ ಉಸ್‌ಕೊ ಖಬೂಲ್ ನ ಕಿಯಾ, ಲೇಕಿನ್ ಖುದಾ ಉಸೇ ಖಬೂಲ್ ಕರೇಗಾ ಔರ್ ಬಡೇ ಝೋರ್ ಆವರ್ ಹಮ್‌ಲೋಂಸೆ ಉಸ್‌ಕೀ ಸಚ್ಚಾಯೀ ಝಾಹಿರ್ ಕರೇಗಾ –** "ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆ ನೀಡುವವನು ಬಂದನು. ಆಗ ಲೋಕ ಅವನನ್ನು ಸ್ವೀಕರಿಸಲಿಲ್ಲ. ಆದರೆ ಅಲ್ಲಾಹನು ಅವನನ್ನು ಸ್ವೀಕರಿಸುವನು ಮತ್ತು ಬಹಳ ಬಿರುಸಾದ ದಾಳಿಗಳ ಮೂಲಕ ಅವನ ಸತ್ಯತೆಯನ್ನು ಪ್ರಕಟಗೊಳಿಸುವನು." (ತಧ್‌ಕಿರ ಪುಟ 181 ಚತುರ್ಥ ಮುದ್ರಣ).

ಈ ಭವಿಷ್ಯವಾಣಿಗಳನ್ನು ಯಾವ ಕಾಲದಲ್ಲಿ ಪ್ರಕಟಿಸಲಾಯಿತೆಂದರೆ ಆಗ ಅವರು ಒಬ್ಬಂಟಿಗನಾಗಿದ್ದರು. ಒಂದು ಗುಂಪಿನ ವಿಷಯ ಬಿಡಿರಿ, ಅವರೊಂದಿಗೆ ಕೆಲವು ಜನರು ಕೂಡ ಇರಲಿಲ್ಲ. ಅವರ ಗ್ರಾಮಕ್ಕೆ ಜನರು ಹೊರಗಿನಿಂದ ಬರುತ್ತಾ ಇರಲಿಲ್ಲ. ಅವರ ಗ್ರಾಮ ಯಾವುದೇ ಪ್ರಸಿದ್ಧಿ ಪಡೆದುದಾಗಿರಲಿಲ್ಲ. ಅದು ಸಾಮಾನ್ಯವೂ ಚಿಕ್ಕದೂ ಆಗಿತ್ತು. ಅಂತಹ ಆ ಸಮಯದಲ್ಲಿ ಅಲ್ಲಾಹನು ಹೇಳಿದನು: ನಾನು ನಿನ್ನ ಹೆಸರನ್ನು ಲೋಕದಾದ್ಯಂತ ಹರಡುವೆನು ಎಂದು. ಆ ಕಾಲದಲ್ಲಿ ಆ ಮಹಾನುಭಾವರ ಸ್ಥಿತಿ ಹೇಗಿತ್ತೆಂದರೆ ಅವರು ಆ ಗ್ರಾಮದಲ್ಲಿ ಹುಟ್ಟಿ ಬೆಳೆದವರಾಗಿದ್ದರೂ ಅವರ ಹೆಸರು ಕೂಡ ಬಹುತೇಕ ಜನರಿಗೆ ತಿಳಿದಿರಲಿಲ್ಲ. ಈಗ ನಾವು ನೋಡುತ್ತೇವೆ. ಅವರಿಗೆ ಲೋಕದಲ್ಲಿ ಗೌರವ ಮತ್ತು ಪ್ರಸಿದ್ಧಿ ಈಗ ಲಭಿಸಿದೆಯೋ ಇಲ್ಲವೋ ಎಂದು. ಅವರಿಗೆ ಅಲ್ಲಾಹನು ವಾಗ್ದಾನ ಮಾಡಿದ್ದ ಸಹಾಯ ಲಭಿಸಿದೆಯೋ ಇಲ್ಲವೋ ಎಂದು. ಅವರ ವಾದದ ಮೊದಲು ಅವರ ಸ್ಥಿತಿ ಹೇಗಿತ್ತೆಂದರೆ ಅವರ ಗ್ರಾಮದ ಜನರು ಕೂಡ ಅವರ ಬಗ್ಗೆ ತಿಳಿದಿರಲಿಲ್ಲ. ಆದರೆ ವಾದಗಳನ್ನು ಪ್ರಕಟಿಸಿದ ನಂತರ ಅವರಿಗೆ ಎಂತಹ ಪ್ರಸಿದ್ಧಿ ಲಭಿಸಿತೆಂದರೆ ಅವರ ಬಗ್ಗೆ ತಿಳಿಯದ ಜನರು ಯಾವುದೇ ದೇಶ ಅಥವಾ ಪ್ರದೇಶದಲ್ಲಿಲ್ಲ. ಪ್ರತಿಯೊಂದು ಜನಾಂಗ ಮತ್ತು ಪ್ರತಿಯೊಂದು ದೇಶದಲ್ಲಿ ಅವರ ಹೆಸರು ಹರಡಿದೆ. ಈ ರೀತಿ ಅವರು ಅಲ್ಲಾಹನಿಂದ ಸಮಾಚಾರ ಪಡೆದು ತಾನು ಅನಾಮಿಕನಾಗಿದ್ದ ಕಾಲದಲ್ಲಿ ಪ್ರಕಟಿಸಿದ ಭವಿಷ್ಯವಾಣಿ ಈಡೇರಿತು. ಯಾರಾದರೂ ಹೀಗೆ ಹೇಳಬಹುದು: ಮಿರ್ಝಾ ಸಾಹಿಬ್ ಒಂದು ಹೊಸ ವಾದ ಮಾಡಿದ ಕಾರಣ ಅವರಿಗೆ ಪ್ರಸಿದ್ಧಿ ಲಭಿಸಿತು. ಹೊಸದಾದ ವಾದ ಮಾಡುವವರ ಹೆಸರು ಪ್ರಸಿದ್ಧವಾಗುತ್ತದೆ. ನಮ್ಮ ಉತ್ತರ ಏನೆಂದರೆ, ಹೊಸ ವಾದ ಮಾಡಿದವರು ಅವರೊಬ್ಬರೇ

ಅಲ್ಲ. ಆ ಕಾಲದಲ್ಲಿ ಬೇರೆ ಜನರು ಸಹ ಹೊಸ ವಾದಗಳನ್ನು ಮಾಡಿದ್ದರು. ಅವರ ಹೆಸರು ಹರಡಲಿಲ್ಲ. ಇದಲ್ಲದೆ ಇನ್ನೊಂದು ವಿಷಯವೇನೆಂದರೆ, ಯಾರೂ ಸಹ ಮುಂಚಿತವಾಗಿ ತನ್ನ ಹೆಸರು ಲೋಕದಲ್ಲಿ ಪ್ರಸಿದ್ಧಿ ಗಳಿಸುವುದು ಎಂದು ಹೇಳಿದ ನಂತರ ಅವನ ಹೆಸರು ಪ್ರಸಿದ್ಧಿ ಗಳಿಸಲಿಲ್ಲ. ನಾನು ಪ್ರಸ್ತಾಪಿಸಿದ ಮಹಾನುಭಾವರು ಮಾತ್ರ ಎಂತಹವರೆಂದರೆ ಅವರು ಮುಂಚಿತವಾಗಿ ಏನನ್ನು ಹೇಳಿದರೋ ಅದೇ ರೀತಿ ಸಂಭವಿಸಿತು. ಇದರಿಂದ ತಿಳಿಯುವುದೇನೆಂದರೆ, ಅವರು ಅಲ್ಲಾಹನ ಪ್ರೀತಿಯನ್ನು ಹೀರಿದ್ದರು. ಪಂಜಾಬಿನಲ್ಲಿ ಎಂತಹ ಜನರಿದ್ದರೆಂದರೆ ಅವರು ವಾದಿಸಿದ್ದರೂ ಅವರ ಹೆಸರು ಖಂಡಿತವಾಗಿಯೂ ಪ್ರಸಿದ್ಧಿ ಪಡೆಯಲಿಲ್ಲ. ಅವರು ವಾಗ್ದತ್ತ ಮಸೀಹರು ವಾದಿಸಿದ ರೀತಿಯಲ್ಲಿ ಅಂತಹ ವಾದ ಮಾಡಿರಲೂ ಇಲ್ಲ.

## ವಾಗ್ದತ್ತ ಮಸೀಹರ ಮೂಲಕ ಇಸ್ಲಾಮಿನ ಪ್ರಚಾರ

ವಾಗ್ದತ್ತ ಮಸೀಹರು ಭವಿಷ್ಯವಾಣಿ ಪ್ರಕಟಿಸಿದ ಹಾಗೆಯೇ ಸಂಭವಿಸಿತೇ? ಖಂಡಿತವಾಗಿಯೂ ಸಂಭವಿಸಿದೆ. ಒಂದು ನೂರು ವರ್ಷದೊಳಗೆ ಇಸ್ಲಾಮ್ ಅಳಿದು ಹೋಗುವುದು ಎಂದು ಹೇಳಿದ ಜನರು ವಾಗ್ದತ್ತ ಮಸೀಹರ ಮೂಲಕ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು. ಮುಸ್ಲಿಮರು ವಿದ್ಯಾಭ್ಯಾಸದಲ್ಲೂ ಸಂಸ್ಕೃತಿಯಲ್ಲೂ ಹಿಂದುಳಿದ ಕಾರಣ ಇಸ್ಲಾಮನ್ನು ಮೌಢ್ಯದ ಧರ್ಮ ಎಂದು ಹೇಳಿ ಅದನ್ನು ಬಹಳ ತಾತ್ಸಾರ ಭಾವದಿಂದ ಕಾಣುತ್ತಿದ್ದರು. ಅವರ ಪೈಕಿ ಹಲವರು ಇಸ್ಲಾಮ್ ಧರ್ಮಕ್ಕೆ ಸೇರಿದರು. ಇಸ್ಲಾಮ್ ನಾಶವಾಗುವುದೆಂದು ತೀರ್ಪು ನೀಡಿದ್ದ ಕಾಲದಲ್ಲಿ ಅವರು ಇಸ್ಲಾಮ್ ಧರ್ಮವನ್ನು ಅವಲಂಬಿಸಿದರು. ಅವರು ಎಂತಹ ಕಾಲದಲ್ಲಿ ಇಸ್ಲಾಮ್ ಧರ್ಮಕ್ಕೆ ಸೇರಿದರೆಂದರೆ ಇಸ್ಲಾಮನ್ನು ಜನರಿಗೆ ಪ್ರಚಾರ ಮಾಡುವ ವಿಷಯವನ್ನು ಬಿಡಿರಿ, ಮುಸ್ಲಿಮರೆಂದು ಹೇಳಿಕೊಳ್ಳುವವರು ಸ್ವತಃ ಅದನ್ನು ಅಡಗಿಸಿಡುತ್ತಿದ್ದರು. ವಾಗ್ದತ್ತ ಮಸೀಹರು ಅಲ್ಲಾಹನಿಂದ ಸಮಾಚಾರ ಪಡೆದು ಹೇಳಿದ ಮಾತು – ನನ್ನ ಮೂಲಕ ಇಸ್ಲಾಮ್ ಲೋಕದಲ್ಲಿ ಹರಡುವುದು ಎಂಬ ಭವಿಷ್ಯವಾಣಿ ಈಡೇರಿತೇ ಇಲ್ಲವೇ? ನಾವು ಕಳೆದ ಇಪ್ಪತ್ತು ಇಪ್ಪತ್ತೈದು ವರ್ಷಗಳ ಕಾಲಾವಧಿಯನ್ನು ನೋಡಿದರೆ ತಿಳಿಯುವುದೇನೆಂದರೆ ಇಸ್ಲಾಮಿನ ಕಠಿಣ ಶತ್ರುವಾಗಿದ್ದವರಲ್ಲಿ ಎಂತಹ ಜನರು ಜನಿಸಿದರೆಂದರೆ, ನಾವು ನಿದ್ರಿಸುವ ಮೊದಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಪ್ರಾರ್ಥನೆ ಅರ್ಪಿಸದೆ ನಿದ್ರಿಸಲು ಪ್ರಾರಂಭಿಸುವುದಿಲ್ಲ ಎಂದು ಹೇಳುತ್ತಾರೆ.

ಯಾವ ದೇಶದಲ್ಲಿ ನಮಗೆ "ಇಸ್ಲಾಮ್ ಒಂದು ನೂರು ವರ್ಷಗಳೊಳಗೆ ನಾಶವಾಗುವುದು" ಎಂಬ ಶಬ್ದ ಕೇಳಿಸುತ್ತಿತ್ತೋ, ಯಾವ ದೇಶ ಅದರ ಯೋಚನೆ ಪ್ರಕಾರ ನಮ್ಮ ಮೇಲೆ ದಯೆದೋರಿ ನಮ್ಮನ್ನು ಏಕ ದೇವನ ಆರಾಧನೆಯಿಂದ ಬಿಡಿಸಿ ಮೂರು ದೇವರುಗಳ ಆರಾಧಕರನ್ನಾಗಿ ಮಾಡಲು ಕೋಟಿಗಟ್ಟಲೆ ರೂಪಾಯಿ ಖರ್ಚು ಮಾಡುತ್ತಾ ಇತ್ತೋ, ಯಾವ ಜನರು ನಮ್ಮನ್ನು ತಮ್ಮ ಶಿಕಾರಿಗಿರುವ ಬೇಟೆ ಮೃಗ ಎಂದು ಗಣಿಸಿ ಲಾಲಸೆಯ ದೃಷ್ಟಿಯಿಂದ ನೋಡುತ್ತಿದ್ದರೋ ಮತ್ತು ಇಸ್ಲಾಮನ್ನು ಮೌಢ್ಯದ ಮತ್ತು ತಿಳಿಗೇಡಿತನದ ಧರ್ಮ ಎಂದು ಹೇಳುತ್ತಿದ್ದರೋ ಅಂತಹ ಜನರ ಎದುರಿಗೆ ವಾಗ್ದತ್ತ ಮಸೀಹರ ಗುಲಾಮರು ನಿಂತು ಅವರಿಗೆ ಸೋಲನ್ನು ಉಣ್ಣಿಸಿದರು. ಅವರ ಮನೆಗೆ ತಲಪಿ ಲಾಇಲಾಹ ಇಲ್ಲಲ್ಲಾಹ್ ಎಂದು ಘೋಷಿಸಿದರು. ನೀವು ಇಂಗ್ಲೆಂಡನ್ನು ನೋಡಿರಿ. ನಮ್ಮನ್ನು ತ್ರಿದೇವಾರಾಧನೆಯಲ್ಲಿ ಹಿಡಿದಿಡಲು ಬಯಸಿದ ಜನರಲ್ಲಿ ಕೆಲವರ ಮನೆಗಳಲ್ಲಿ ಲಾಇಲಾಹ ಇಲ್ಲಲ್ಲಾಹ್ ಎಂಬ ಶಬ್ದ ಪ್ರತಿಧ್ವನಿಸುತ್ತಿದೆ. ಇದಲ್ಲದೆ ಈಗ ಈ ಶಬ್ದ ಅಮೇರಿಕದ ಕಡೆಗೂ ಚಲಿಸಿದೆ. ನಾವು ಒಬ್ಬ ಧರ್ಮ ಪ್ರಚಾರಕರನ್ನು ಅಮೇರಿಕಕ್ಕೆ ಕಳುಹಿಸಿದ್ದೇವೆ. ಅಮೇರಿಕದ ಜನರಲ್ಲಿ ಸಿದ್ಧರಾಗಿರುವವರನ್ನು ಇಸ್ಲಾಮಿನ ಕಡೆಗೆ ತಿರುಗುವಂತೆ ಮಾಡಲು ಅವರನ್ನು ಕಳುಹಿಸಲಾಗಿದೆ. ಲೌಕಿಕತೆಯ ಕಡೆಗೆ ಹೆಚ್ಚು ಬಾಗಿದ್ದ ಜರ್ಮನಿ ಸಹ ಅದರ ಬಗ್ಗೆ ಬೇಸರಗೊಂಡು ಆಧ್ಯಾತ್ಮಿಕತೆ ಬಗ್ಗೆ ಗಮನ ಹರಿಸುತ್ತಿದೆ. ಅದರ ಒಬ್ಬ ಕೌನ್ಸಲ್ ಕೆಲವು ದಿನಗಳ ಹಿಂದೆ ಮುಸ್ಲಿಮರಾದರು. ಜರ್ಮನಿಯಲ್ಲಿ ಇಸ್ಲಾಮ್ ಅಭಿವೃದ್ಧಿ ಗಳಿಸುವುದೆಂದು ಅವರು ಬರೆದಿದ್ದಾರೆ. ರಶ್ಯದಲ್ಲಿ ಸಹ ಕೆಲವರು ಮುಸ್ಲಿಮರಾಗಿದ್ದಾರೆ. ಅವರು ನನಗೆ ಬರೆದಿದ್ದಾರೆ – ನಮ್ಮ ದೇಶದಲ್ಲಿ ಶಾಂತಿ ಸಮಾಧಾನ ಸ್ಥಾಪನೆಯಾದರೆ ನಾವು ಇಸ್ಲಾಮಿನ ಪ್ರಚಾರಕ್ಕೆ ನಮ್ಮನ್ನು ಅರ್ಪಿಸುವೆವು. ನೀವು ನಮ್ಮನ್ನು ಎಲ್ಲಿಗೆ ಕಳುಹಿಸುವಿರೋ ಅಲ್ಲಿಗೆ ಹೋಗಲು ಸಿದ್ಧರಾಗುವೆವು ಎಂದು. ಇಸ್ಲಾಮಿಗೆ ಅಸ್ತಿಭಾರ ಅನೇಕ ಸ್ಥಳಗಳಲ್ಲಿ ಹಾಕಲಾಗಿದೆ. ಬೀಜದ ರೂಪದಲ್ಲಿ ಇಸ್ಲಾಮ್ ಅನೇಕ ಸ್ಥಳಗಳಿಗೆ ತಲಪಿದೆ. ಇದು ಅಲ್ಲಾಹನು ಹೇಳಿದ ಮಾತು ಈಡೇರಿದುದಲ್ಲದೆ ಇನ್ನೇನು? ಮುಸ್ಲಿಮರ ಆಡಳಿತೆ ನೂರಾರು ವರ್ಷಗಳಿಂದ ಜಾರಿಯಲ್ಲಿದ್ದರೂ ಯಾವುದಾದರೂ ಮುಸ್ಲಿಮ್ ಸರಕಾರದ ಮೂಲಕ ಹೀಗೆ ಮಾಡಲು ಸಾಧ್ಯವಾಗಿತ್ತೇ? ಖಂಡಿತ ಇಲ್ಲ. ಆದರೆ ಒಬ್ಬ ಮಹಾನುಭಾವರು ಯಾವುದೇ ಸಾಧನ ಸಂಪತ್ತು ಹೊಂದಿರದೆ ಇದ್ದಾಗ ಹೀಗೆ ಆಗುವುದೆಂದು ಭವಿಷ್ಯವಾಣಿ ನುಡಿಯುತ್ತಾರೆ. ಕೆಲವೇ ವರ್ಷಗಳಲ್ಲಿ ಹಾಗೆ ಆಗಲು ಪ್ರಾರಂಭವಾಗುತ್ತದೆ.

## ವಾಗ್ದತ್ತ ಮಸೀಹರನ್ನು ವಿರೋಧಿಸಿದುದು

ಕೆಲವರು ಹೀಗೆ ಹೇಳಬಹುದು: "ಕೆಲವರು ಮುಸ್ಲಿಮರಾದುದು ದೊಡ್ಡ ವಿಷಯವೇನೂ ಅಲ್ಲ" ಆದರೆ ವಾಗ್ದತ್ತ ಮಸೀಹರು ಹೇಳಿದುದು ಇಸ್ಲಾಮ್ ಲೋಕದಲ್ಲಿ ಹರಡುವುದು ಎಂದು ಮಾತ್ರವಲ್ಲ, ಅವರನ್ನು ಲೋಕ ವಿರೋಧಿಸುವುದು ಎಂದು ಸಹ ಅವರು ಹೇಳಿದ್ದರು. ಲೋಕ ವಿರೋಧಿಸಿತು. ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶ್ರೇಷ್ಠತೆ ಬಗ್ಗೆ ನಂಬಿಕೆ ಹೊಂದಿದ್ದೇವೆ ಎಂದು ವಾದಿಸುವವರು ಸಹ ಅಡ್ಡಿ ಒಡ್ಡಿದರು. ಅನ್ಯರು ವಿರೋಧಿಸಬೇಕಾದುದೇ ಆಗಿತ್ತು. ಆದರೆ ಸ್ವಂತ ಜನರೇ ಕಠಿಣವಾಗಿ ವಿರೋಧಿಸಿದರು. ವಿವಿಧ ರೀತಿ ದೌರ್ಜನ್ಯ ಮಾಡಿದರು. ಕಲ್ಲೆಸೆದರು, ಬೈದರು, ಪ್ರತಿಯೊಂದು ರೀತಿಯಲ್ಲಿ ಕಠಿಣವಾಗಿ ವರ್ತಿಸಿದರು. ಆದರೆ ವಾಗ್ದತ್ತ ಮಸೀಹರು ಹೀಗೆ ಹೇಳಿದರು: **ಅಯೆ ದಿಲ್ ತೂ ನೇಝ್ ಖಾತಿರ್ ಏನಾಂ ನಿಗಾಹ್ ದಾರ್. ಕ ಆಖಿರ್ ಕುಂದ್ ದಅವಾಯೆ ಹುಬ್ಬೆ ಪಯಂಬರಮ್**.

ಅಂದರೆ, ಈ ಜನರು ನನ್ನೊಂದಿಗೆ ಹೀಗೆ ಕೆಟ್ಟದಾಗಿ ವರ್ತಿಸಿದರೂ ಅವರು ಯಾರನ್ನು ಪ್ರೀತಿಸುವುದಾಗಿ ವಾದಿಸುತ್ತಾರೋ ಅವರ ಉಪದೇಶಗಳನ್ನು ಹಬ್ಬಿಸಲು ನಾನು ನಿಂತಿದ್ದೇನೆ. ಈ ಜನರು ನಾನು ಯಾರ ಗುಲಾಮನಾಗಿದ್ದೇನೋ ಅವರನ್ನು ಪ್ರೀತಿಸುವುದಾಗಿ ವಾದಿಸುವುದರಿಂದ ನಾನು ಅವರಿಗೋಸ್ಕರ ನಿಗಾ ಇರಿಸಿದ್ದೇನೆ.

ಸ್ವಧರ್ಮದವರೇ ವಾಗ್ದತ್ತ ಮಸೀಹರನ್ನು ಎದುರಿಸಿದರು. ಅವರ ಎದುರಿಗೆ ತಡೆಗಳನ್ನು ಇರಿಸಿದರು. ಅವರ ಅನುಯಾಯಿಗಳನ್ನು ಮನೆಗಳಿಂದ ಹೊರಗೆ ಹಾಕಿದರು. ಎಲ್ಲ ವಿಧಗಳ ಕಷ್ಟ ನೀಡಿದರು. ಹೀಗಿದ್ದರೂ ಬಡವರಾದ ಅವರ ಅನುಯಾಯಿಗಳ ಸಂಖ್ಯೆ ವರ್ಧಿಸುತ್ತಾ ಇತ್ತು. ಅವರು ಮನೆ ಖರ್ಚು ನೀಡದೆ ಇಸ್ಲಾಮಿನ ಪ್ರಚಾರಕ್ಕೆ ಹಣ ನೀಡಿದರು. ವಿರೋಧವಿದ್ದರೂ ಅವರು ಅಭಿವೃದ್ಧಿ ಹೊಂದಿದರು. ಇಸ್ಲಾಮ್ ಹಬ್ಬಬಾರದೆಂದು ಜನರು ಆಶಿಸಿದರು. ಆದರೆ ಅಲ್ಲಾಹನು ಪ್ರಕಾಶವಾಗಲಿ ಎಂದು ಬಯಸಿದನು. ಪ್ರಕಾಶ ಉಂಟಾಯಿತು. ಇಸ್ಲಾಮ್ ಲೋಕದಲ್ಲಿ ಹಬ್ಬಿತು ಮತ್ತು ಹಬ್ಬುತ್ತಿದೆ. ಇಸ್ಲಾಮ್ ಲೋಕವನ್ನು ಬೆಳಗಿಸಿತು. ಅದು ಈಗ ಸಹ ಬೆಳಗಿಸುತ್ತಾ ಇದೆ. ಇದು ಆ ಮಹಾನುಭಾವರು ಸತ್ಯವಂತರೆಂಬುದಕ್ಕೆ ವೈಭವಶಾಲಿ ಪುರಾವೆಯಾಗಿದೆ.

## ವಾಗ್ದತ್ತ ಮಸೀಹರ ಯಶಸ್ಸು

ಒಬ್ಬ ಅಮೇರಿಕನ್ ಲೇಖಕ ಬರೆಯುತ್ತಾನೆ: ಲೋಕದಲ್ಲಿ ಕೆಲಸ ಮಾಡುವವರು ಎರಡು ವಿಧಗಳ ಜನರಾಗಿದ್ದಾರೆ. ಒಂದು ವಿಧದ ಜನರು, ಜನರನ್ನು ತಮ್ಮನ್ನು ಹಿಂಬಾಲಿಸುವಂತೆ ಮಾಡುತ್ತಾರೆ. ಇನ್ನೊಂದು ವಿಧದ ಜನರು, ಜನರ ವಕ್ತಾರರಾಗಿರುತ್ತಾರೆ. ಉದಾಹರಣೆಗೆ, ಒಂದು ದೇಶದಲ್ಲಿ ವಿದ್ಯಾಭ್ಯಾಸದ ವ್ಯವಸ್ಥೆ ಇಲ್ಲದಿದ್ದರೆ ಅಲ್ಲಿ ಒಬ್ಬನು ನಿಂತು ವಿದ್ಯಾಭ್ಯಾಸವನ್ನು ಹಬ್ಬಿಸುವುದು ತನ್ನ ಉದ್ದೇಶ ಲಕ್ಷ್ಯವೆಂದು ಹೇಳುತ್ತಾನೆ. ಆರಂಭದಲ್ಲಿ ಅವನನ್ನು ವಿರೋಧಿಸಲು ಕೆಲವರು ಮುಂದೆ ಬರುವವರಾದರೂ ಕೊನೆಗೆ ಅವನು ಜಯಗಳಿಸುವನು. ಏಕೆಂದರೆ ಜನರ ಸ್ಥಿತಿ ಅವರನ್ನು ವಿದ್ಯೆ ಗಳಿಸಲು ನಿರ್ಬಂಧಿಸುವುದು. ಆದರೆ ಒಬ್ಬನು, ಜನರು ಅಂಗೀಕರಿಸಲು ನಿರ್ಬಂಧಕ್ಕೊಳಗಾಗದ ಯಾವುದಾದರೂ ವಿಷಯವನ್ನು ತಂದರೆ, ಅದು ಅವರ ವಿರುದ್ಧ ಉತ್ತೇಜಿಸುವುದು ಸಹ ಆಗಿದ್ದರೆ ಅಂತಹ ವ್ಯಕ್ತಿ ಜಯಗಳಿಸುವುದು ಬಹಳ ಕಷ್ಟಕರವಾಗಿದೆ. ವಾಗ್ದತ್ತ ಮಸೀಹರು ಇಂತಹವರೇ ಆಗಿದ್ದರು. ಏಕೆಂದರೆ ಅವರು ಆಗಮಿಸಿ ಏನನ್ನು ವಾದಿಸಿದರೋ ಅದನ್ನು ಎಲ್ಲರೂ ವಿರೋಧಿಸಿದರು. ಆ ಕಾಲದ ಸ್ಥಿತಿ ಅವರಿಗೆ ಪ್ರತಿಕೂಲವಾಗಿತ್ತು. ಆ ಜನರು ಹೀಗೆ ನಂಬುತ್ತಿದ್ದರು: ಅಲ್ಲಾಹನು ತನ್ನ ದಾಸರೊಂದಿಗೆ ಹಿಂದೆ ಮಾತನಾಡುತ್ತಾ ಇದ್ದನು. ಆದರೆ ಈ ಕಾಲಘಟ್ಟದಲ್ಲಿ ಅಲ್ಲಾಹನು ಯಾರೊಂದಿಗೂ ಮಾತನಾಡಲಾರನು. ವಾಗ್ದತ್ತ ಮಸೀಹರು ಇದನ್ನೇ ಜನರು ನಂಬುವಂತೆ ಮಾಡಲು ಬಯಸಿದ್ದರು. ಏಕೆಂದರೆ ಅವರು ಲೋಕದ ಸುಧಾರಣೆಗೆ ಆಗಮಿಸಿದ್ದರು. ಲೋಕದ ಜನರು ಯಾವ ಕಡೆಗೆ ಸಾಗುತ್ತಿದ್ದರೋ ಅದೇ ಕಡೆಗೆ ಚಲಾಯಿಸಲು ಅವರು ಆಗಮಿಸಿರಲಿಲ್ಲ. ಆದುದರಿಂದ ಅವರು ಜಯಶಾಲಿಯಾದುದು ಅವರ ಸತ್ಯತೆಗೆ ವೈಭವಶಾಲಿ ಸಾಕ್ಷ್ಯವಾಗಿದೆ. ಇದರಿಂದ ಇಸ್ಲಾಮ್ ಸತ್ಯ ಧರ್ಮವೆಂದು ತಿಳಿಯುತ್ತದೆ.

## ರಶ್ಯದ ಝಾರ್ ಬಗ್ಗೆ ವಾಗ್ದತ್ತ ಮಸೀಹರ ಭವಿಷ್ಯವಾಣಿ

ಹಝ್ರತ್ ವಾಗ್ದತ್ತ ಮಸೀಹ್[ಅ] ಒಂದು ಭವಿಷ್ಯವಾಣಿ ಪ್ರಕಟಿಸಿದ್ದರು. ಲೋಕದಲ್ಲಿ ಒಂದು ಭಯಾನಕ ಯುದ್ಧ ಸಂಭವಿಸುವುದೆಂದೂ ಆಗ ಝಾರನ ಸ್ಥಿತಿ ಕೆಟ್ಟು ಹೋಗುವುದೆಂದೂ ಅವರು ಪ್ರಕಟಿಸಿದ್ದರು. ಅವರು ಒಂದು ಪದ್ಯದಲ್ಲಿ ಹೇಳಿದರು: "ಝಾರ್ ಭೀ ಹೋಗಾ ತೋ ಹೋಗಾ ಉಸ್ ಗಡೀ ಮೇ ಬಾಹಾಲೆ ಝಾರ್" – ಝಾರ್ ಆ ಸಮಯದಲ್ಲಿ ಬಹಳ ದಾರುಣ ಸ್ಥಿತಿಗೊಳಗಾಗುವನು.

ಅವರು ಈ ಭವಿಷ್ಯವಾಣಿಯಲ್ಲಿ ಆ ಯುದ್ಧದ ಸಂಪೂರ್ಣ ಚಿತ್ರ ನೀಡಿದ್ದರು. ಕೆಲವು ಪ್ರಕಟನೆಗಳಲ್ಲಿ ರಣಾಂಗಣದ ಯಥಾರ್ಥ ಚಿತ್ರ ನೀಡಲಾಗಿತ್ತು. ಈ ಭವಿಷ್ಯವಾಣಿ ಅಡಕವಾದ ಪದ್ಯದ ಒಂದು ಭಾಗ ಹೀಗಿದೆ: ರಾತ್ ಜೋ ರಖ್ತೇ ಥೆ ಪೋಷಾಕೆ ಬರಂಗೇ ಯಾಸ್‌ಮಿನ್ ಸುಬ್‌ಹ್ ಕರ್‌ದೇಗಿ ಉನೇ ಮಿಸಲೆ ದರಖ್‌ತಾನೆ ಚಿನಾರ್. – ರಾತ್ರಿ ಮಲ್ಲಿಗೆ ಹಾಗೆ ಬೆಳ್ಳಗಾಗಿದ್ದ ಪೋಷಾಕು ಬೆಳಗ್ಗೆ ಚಿನಾರ್ ವೃಕ್ಷದಂತೆ ಕೆಂಪಾಗಿರುವುದು.

ಫ್ರಾನ್ಸ್ ಜರ್ಮನಿಯನ್ನು ಸೋಲಿಸಿದ ಮಹಾಯುದ್ಧ ನಡೆದುದು ಚಿನಾರ್ ವೃಕ್ಷಗಳಿದ್ದ ಸ್ಥಳದಲ್ಲಾಗಿತ್ತು. ರಕ್ತದ ನದಿಗಳು ಹರಿಯುತ್ತಿದ್ದುವು. ಚಿನಾರ್ ವೃಕ್ಷದ ಕೆಂಪೆಲೆಗಳು ನೆಲಕ್ಕೆ ಬಿದ್ದು, ಚೆಲ್ಲಿದ ರಕ್ತದ ಹಾಗೆ ಕಾಣಿಸುತ್ತಿದ್ದುವು. ಅದು ರಣಾಂಗಣವನ್ನು ಹೆಚ್ಚು ಭಯಾನಕವಾಗಿ ಮಾಡುತ್ತಿತ್ತು.

ವಾಗ್ದತ್ತ ಮಸೀಹರು ಮಹಾಯುದ್ಧ ಸಂಭವಿಸುವ ಬಗ್ಗೆ ಮುಂಚಿತವಾಗಿ ಭವಿಷ್ಯವಾಣಿ ಪ್ರಕಟಿಸಿದ್ದರು. ಅದರಲ್ಲಿ ರಶ್ಯದ ಝಾರ್ ಚಕ್ರವರ್ತಿಯ ಸ್ಥಿತಿ ದಾರುಣವಾಗುವುದು ಎಂದು ಹೇಳಲಾಗಿತ್ತು. ಹಝ್ರತ್ ವಾಗ್ದತ್ತ ಮಸೀಹರು ನಿಧನ ಹೊಂದಿದ ನಂತರ ಮಹಾಯುದ್ಧ ಸಂಭವಿಸಿತು. ಅದರಲ್ಲಿ ಅತ್ಯಂತ ದಾರುಣ ಸ್ಥಿತಿ ಸಂಭವಿಸಿದುದು ಝಾರ್ ಚಕ್ರವರ್ತಿಗಾಗಿತ್ತು. ಯುರೋಪಿನಲ್ಲಿ ಬೇರೆ ದೊರೆಗಳು ತಮ್ಮ ದೇಶವನ್ನು ಆಳುತ್ತಿದ್ದರು. ಆದರೆ ಝಾರ್ ಚಕ್ರವರ್ತಿ ಎಲ್ಲರಿಗಿಂತಲೂ ಶಕ್ತಿಶಾಲಿಯಾಗಿದ್ದನು. ಅವನು ಸಹಿ ಹಾಕುತ್ತಿದ್ದುದು "ದೇವನ ಪ್ರತಿನಿಧಿ" ಎಂದಾಗಿತ್ತು. ಹಝ್ರತ್ ವಾಗ್ದತ್ತ ಮಸೀಹರಿಗೆ ಅಲ್ಲಾಹನು ತಿಳಿಸಿದ್ದನು – ಒಂದು ದೊಡ್ಡ ಯುದ್ಧ ಸಂಭವಿಸುವುದು. ಅದರಲ್ಲಿ ರಶ್ಯದ ಝಾರ್ ಚಕ್ರವರ್ತಿಗೆ ಬಹಳ ಹಾನಿ ಉಂಟಾಗುವುದು. ಆ ವಿಪತ್ತು ಅವನು ಕೂಡಲೇ ಸತ್ತು ಹೋಗುವ ರೀತಿಯಲ್ಲಿರದು. ಅವನ ಸ್ಥಿತಿ ಅತ್ಯಂತ ನೋವನ್ನುಂಟುಮಾಡುವುದಾಗಿರುವುದು ಮತ್ತು ಅವನು ಅತ್ಯಂತ ಹೆಚ್ಚು ನೋವು ಅನುಭವಿಸಿ ಸಾಯುವನು. ಹೀಗೆ ಸಂಭವಿಸಿತೋ ಇಲ್ಲವೋ?

ರಶ್ಯದ ಝಾರ್ ಚಕ್ರವರ್ತಿ ವೈಭವದಿಂದ ರಾಜ್ಯವನ್ನು ಆಳುತ್ತಿದ್ದಾಗ ಒಂದು ಪ್ರದೇಶದಲ್ಲಿ ವಿದ್ರೋಹ ನಡೆದ ಬಗ್ಗೆ ವರದಿ ಲಭಿಸಿತು. ಅವನು ಆ ಪ್ರದೇಶಕ್ಕೆ ರೈಲು ಬಂಡಿಯಲ್ಲಿ ಹೊರಡುತ್ತಾನೆ ಮತ್ತು ತನ್ನ ಸೇನಾಧಿಪತಿಗೆ ಆಜ್ಞೆ ನೀಡುತ್ತಾನೆ – ಕಠಿಣ ಕ್ರಮಗಳನ್ನು ವಿದ್ರೋಹಿಗಳ ವಿರುದ್ಧ ಕೈಗೊಳ್ಳಬೇಕೆಂದು. ನಾನು ಈಗಲೇ ಬರುತ್ತೇನೆಂದು ಹೇಳುತ್ತಾನೆ. ಅವನು ಟ್ರೈನ್‌ನಲ್ಲಿ ಕೆಲವು ಸ್ಟೇಶನ್‌ಗಳನ್ನು ದಾಟಿಹೋದಾಗ ಅವನಿಗೆ ತಂತಿ ಸಂದೇಶ ಲಭಿಸುತ್ತದೆ – ಸ್ಥಿತಿ ಬಹಳ ಕೆಟ್ಟು ಹೋಗಿದೆ ಎಂದು. ಆಗ ಝಾರ್ ತನ್ನ ಸೇನಾಧಿಪತಿಗೆ ತಿಳಿಸುತ್ತಾನೆ – ಇನ್ನೊಬ್ಬನಿಗೆ ಕೆಲಸ ವಹಿಸಿಕೊಡಬೇಕೆಂದು. ಅವನ ಟ್ರೈನ್ ಇನ್ನು ಕೆಲವು ಸ್ಟೇಶನ್ ದಾಟಿದಾಗ ಸಮಾಚಾರ ಸಿಗುತ್ತದೆ – ಸ್ಥಿತಿ ಬಹಳ ಹಾಳಾಗಿದೆ ಎಂದು. ಆಗ ಝಾರ್ ಆಜ್ಞಾಪಿಸುತ್ತಾನೆ – ಮೃದುವಾಗಿ ವರ್ತಿಸಿರಿ ಎಂದು. ಝಾರ್ ಸ್ಟೇಶನ್‌ನಲ್ಲಿರುವಾಗಲೇ ಕೆಲವರು ಬಂದು ಹೇಳುತ್ತಾರೆ – ನೀವು ಎಲ್ಲ ಅಧಿಕಾರ ತ್ಯಜಿಸಿರಿ ಎಂದು. ಅನಂತರ ಅವರ ಸ್ಥಿತಿ ಏನಾಯಿತೆಂದು ನೀವು ಪತ್ರಿಕೆಗಳಲ್ಲಿ

34ನೇ ಪುಟಕ್ಕೆ

# ನೀನು ಮಾಡು – ಮಾಡಬೇಡ

ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್

## 2 – ಇಸ್ಲಾಮೀ ಸಂಸ್ಕೃತಿ

101. ನೀನು ಸಭೆಗಳಲ್ಲಿ ಪಿಸುಮಾತು ಆಡಬೇಡ.
102. ನೀನು ಜನರ ಕಡೆಗೆ ಬೆರಳು ತೋರಿಸಬೇಡ.
103. ಮಕ್ಕಳೇ, ನೀವು ಆಟಿಕೆಗಳನ್ನು ಸಂರಕ್ಷಿಸಿರಿ. ಅವುಗಳನ್ನು ಕೆಡಿಸಬೇಡಿರಿ.
104. ಹೇ ಮಹಿಳೆ, ನೀನು ಮಕ್ಕಳಿಗೆ ಪುಸ್ತಕ ಮತ್ತು ಆಟಿಕೆಗಳನ್ನು ಇಡಲು ಕಪಾಟು ಅಥವಾ ಪೆಟ್ಟಿಗೆ ಕೊಡು. ಒಮ್ಮೊಮ್ಮೆ ಅದನ್ನು ನೋಡುತ್ತಾ ಇರು – ಅದರಲ್ಲಿ ಅನಗತ್ಯ ವಸ್ತುಗಳನ್ನೂ ಕದ್ದ ವಸ್ತುಗಳನ್ನೂ ಇಟ್ಟಿಲ್ಲ ಎಂದು.
105. ನಿನ್ನ ಮಕ್ಕಳು ಜನರಿಂದ ಏನನ್ನೂ ಬೇಡದಂತೆ ಜಾಗ್ರತೆ ವಹಿಸು.
106. ನಿನ್ನ ಮಕ್ಕಳು ಬೈಗಳನ್ನೂ ಅಶ್ಲೀಲ ಮಾತುಗಳನ್ನೂ ಕಲಿಯದಂತೆ ಜಾಗ್ರತೆ ವಹಿಸು.
107. ನೀನು ಎಲ್ಲಿಗೆಯಾದರೂ ಅತಿಥಿಯಾಗಿ ಹೋಗುವುದಾದರೆ ನೀನು ಮಲಗಲು ಹೊದಿಕೆ ಮೊದಲಾದುವುಗಳನ್ನು ತೆಗೆದುಕೊಂಡು ಹೋಗು.
108. ನಿನಗೆ ರೋಗವಿದ್ದರೆ ಹೊರತು "ನಾನು ಈ ವಸ್ತು ತಿನ್ನುವುದಿಲ್ಲ, ಆ ವಸ್ತು ತಿನ್ನುವುದಿಲ್ಲ" ಎಂದು ಹೇಳಬೇಡ. ಏಕೆಂದರೆ ಮನುಷ್ಯನಿಗೆ ಒಂದೇ ರೀತಿಯ ಕಾಲ ಇರುವುದಿಲ್ಲ.
109. ನೀನು ಎಲ್ಲಿಗಾದರೂ ಅತಿಥಿಯಾಗಿ ಹೋಗುವುದಾದರೆ ಮುಂಚಿತವಾಗಿ ತಿಳಿಸು.
110. ನಿನ್ನ ಮನೆಗೆ ಯಾರಾದರೂ ಅತಿಥಿ ಬಂದರೆ ಮೊತ್ತಮೊದಲು ಮಲಗುವ ಸ್ಥಳ ಮತ್ತು ಶೌಚಾಲಯವನ್ನು ತೋರಿಸಬೇಕು.
111. ನೀನು ಒಂದು ಮನೆಗೆ ಅತಿಥಿಯಾಗಿ ಹೋದರೆ ಅಂದಾಜು ಎಷ್ಟು ದಿನ ತಂಗುವುದಾಗಿ ತಿಳಿಸು.
112. ನೀನು ಯಾತ್ರೆ ಮಾಡುವಾಗ ನಿನ್ನ ಸಾಮಗ್ರಿಗಳ ಬಗ್ಗೆ ಅಜಾಗ್ರತೆ ಸಲ್ಲದು.
113. ನೀನು ಒಬ್ಬಂಟಿಗನಾಗಿ ಪ್ರಯಾಣ ಮಾಡಬೇಡ. ಸಾಧ್ಯವಿದ್ದರೆ ಯಾರನ್ನಾದರೂ ಜೊತೆಗೆ ಕರೆದುಕೊಳ್ಳು.
114. ಆತಿಥೇಯ ಅಥವಾ ಪತ್ನಿ ಮಕ್ಕಳು ರೋಗಿಗಳಾಗಿರುವಾಗ ನೀನು ಅಲ್ಲಿಗೆ ಅತಿಥಿಯಾಗಿ ಹೋಗಬೇಡ.
115. ನೀನು ಪುನರಾವರ್ತಿಸುತ್ತಾ ಮಾತನಾಡದಿರು.
116. ನೀನು ಅತಿಥಿಯಾಗಿ ಅಸಮಯದಲ್ಲಿ ಹೋಗಬೇಡ.
117. ನೀನು ವಿಹಾರಕ್ಕೆ ಹೋಗುವಾಗ ಒಬ್ಬಬ್ಬ ಸ್ನೇಹಿತರನ್ನು ಜೊತೆಗೆ ಸೇರಿಸು.
118. ಬಲಹೀನ ಪ್ರಯಾಣಿಕನಿಗೆ ರೈಲು ಬಂಡಿ ಮತ್ತು ಬಸ್ಸುಗಳಲ್ಲಿ ಕುಳಿತಿಕೊಳ್ಳಲು ಸ್ಥಳ ಸಿಗದಿದ್ದರೆ ನೀನು ಅವನಿಗೆ ಸಹಾಯ ಮಾಡು.
119. ನೀನು ಕನ್ನಡಕವನ್ನು ಬಳಸದಿರುವಾಗ ಭದ್ರವಾಗಿ ಇಡು.
120. ನೀನು ಸಭೆಗಳಲ್ಲಿ ಕಾಲು ಚಾಚಿ ಕುಳಿತುಕೊಳ್ಳಬೇಡ.
121. ನೀನು ಹರಿದ ಅಥವಾ ಮುದುಡಿದ ಬಟ್ಟೆ ಧರಿಸಿ ಹೊರಗೆ ಹೋಗಬೇಡ.
122. ನೀನು ಮನೆಯಿಂದ ಹೊರಗೆ ಹೋಗುವ ಮೊದಲು ಕನ್ನಡಿಯಲ್ಲಿ ನೋಡಿಕೊಳ್ಳು.
123. ನೀನು ಶರ್ಟಿನ ಗುಂಡಿ ಬಿಚ್ಚಿ ತಿರುಗಾಡಬೇಡ.
124. ನೀನು ನಿನ್ನ ಮನೆ ಬಾಗಿಲುಗಳನ್ನೂ ಕಿಟಿಕಿ ಬಾಗಿಲುಗಳನ್ನೂ ನಿಶಬ್ದವಾಗಿ ಮುಚ್ಚು – ಜನರಿಗೆ ಕಷ್ಟವಾಗದಿರಲಿ.
125. ನೀನು ದಿಂಬಿಗೆ ಒರಗಿಕೊಂಡು ಊಟಮಾಡದಿರು.
126. ಮನೆಯ ಗೋಡೆಗಳನ್ನೂ ನೆಲವನ್ನೂ ಚಾಕ್ ಅಥವಾ ಇದ್ದಲಿನ ತುಂಡಿನಿಂದ ಗೆರೆ ಹಾಕಿ ಕೆಟ್ಟದಾಗಿ ಕಾಣಿಸುವಂತೆ ಮಾಡಬೇಡ.
127. ನಿನ್ನ ತಲೆಯಲ್ಲೂ ಬಟ್ಟೆಗಳಲ್ಲೂ ಹೇನು ಮೊದಲಾದುವು ಉಂಟಾಗುವುದಾದರೆ ನೀನು ಕೊಳಕನೆಂದೂ ನೀನು ನಿರ್ಲಕ್ಷ್ಯ ಹೊಂದಿರುವವನೆಂದೂ ಅದು ಸೂಚಿಸುತ್ತದೆ.
128. ನಿನ್ನ ಹಿರಿಯರನ್ನೂ ಸಮಾನರನ್ನೂ "ತಾವು" ಎಂದೂ ಕಿರಿಯರನ್ನು "ನೀನು" ಎಂದೂ ಹೇಳಿ ಮಾತನಾಡು.
129. ಮಾರ್ಗಗಳಲ್ಲಿ ಒಂದು ಬದಿಯಲ್ಲಿ ನಡೆದುಹೋಗು.
130. ನೀನು ನಿನ್ನ ಪತ್ನಿಗೂ ಮಕ್ಕಳಿಗೂ ಗೌರವ ನೀಡು.
131. ನೀನು ಜನರ ಅಂತಸ್ತಿನ ಬಗ್ಗೆ ಲಕ್ಷ್ಯ ನೀಡು.

132. ಹೆಣ್ಣು ಗಂಡಸರ ಮತ್ತು ಗಂಡು ಹೆಂಗಸರ ಬಟ್ಟೆ ಧರಿಸದಿರಲಿ.
133. ನೀನು ಪುರುಷನಾದರೆ ಹೆಣ್ಣಿನ ಹಾಗೆ ವರ್ತಿಸಬೇಡ.
134. ನೀನು ಅಧ್ಯಾಪಕರನ್ನು, ಪತ್ನಿಯ ಪಿತನನ್ನು ಮತ್ತು ಹಿರಿಯ ಸಹೋದರನನ್ನು ತನ್ನ ಪಿತನ ಹಾಗೆ ಗೌರವಿಸು.
135. ನೀನು ವಿವಾಹವಾಗಲು ನಿನಗೆ ಸಮಾನವಾದವರ ಸಂಬಂಧ ಹುಡುಕು.
136. ನೀನು ವೃದ್ಧರೊಂದಿಗೆ ಹಿರಿಯನ ಹಾಗೆ, ತರುಣರೊಂದಿಗೆ ತರುಣನ ಹಾಗೆ, ಮಕ್ಕಳೊಂದಿಗೆ ಮಗುವಿನ ಹಾಗೆ ಆಗಲು ಪ್ರಯತ್ನಿಸು.
137. ನೆನಪಿಡು, ಇಸ್ಲಾಮೀ ನಾಗರಿಕತೆಯ ಅಸ್ತಿಭಾರ ಭ್ರಾತೃ ಭಾವನೆಯಲ್ಲಿದೆ; ಲೌಕಿಕ ಆಡಂಬರದಲ್ಲಿ ಅಲ್ಲ.
138. ವಿವಾಹದ ಉದ್ದೇಶ ಪತ್ನಿಯನ್ನು ಪಡೆಯುವುದೇ ಹೊರತು ಸಂಪತ್ತನ್ನಲ್ಲ ಎಂದು ನೆನಪಿಡು.
139. ಹೇ ಮಹಿಳೆ, ನಿನ್ನ ಪತಿಯ ಅನುಮತಿ ಇಲ್ಲದೆ ಮನೆಯಿಂದ ಹೊರಗೆ ಹೋಗದಿರು.
140. ಹೇ ಮಹಿಳೆ, ನೀನು ನಿನ್ನ ಪತಿಯ ಅನುಮತಿಯಿಲ್ಲದೆ ಐಚ್ಛಿಕ ಉಪವಾಸ ಅನುಷ್ಠಿಸಬಾರದು.
141. ನೀನು ಯಾರಿಗಾದರೂ ಯಾವುದಾದರೂ ವಸ್ತು ಉಪಯೋಗಿಸಲು ಕೊಟ್ಟರೆ ಬರೆದಿಡು.
142. ನೀನು ನಿನ್ನ ಹೆಸರನ್ನು ಪಾತ್ರೆಗಳಲ್ಲಿ ಬರೆಸು. ಪಾತ್ರೆಗಳು ಬದಲಾಯಿಸಲ್ಪಡದಿರಲು ಇದು ಸಹಾಯಕವಾಗಿದೆ.
143. ಹೇ ಮಹಿಳೆ, ಅಲ್ಲಾಹನು ಪುರುಷನಿಗೆ ಮಹಿಳೆಯ ಮೇಲೆ ಶ್ರೇಷ್ಠತೆ ನೀಡಿರುವನೆಂದು ನೆನಪಿಡು.
144. ಹೇ ಪುರುಷ, ಪತ್ನಿಯೊಂದಿಗೆ ಉತ್ತಮವಾಗಿ ವರ್ತಿಸುವುದು ನಿನ್ನ ಕರ್ತವ್ಯವಾಗಿದೆ ಎಂದು ನೆನಪಿಡು.
145. ನೀನು ಸಮಯದ ಪಾಲನೆ ಮಾಡು.
146. ಹೇ ಮಹಿಳೆ, ನೀನು ಪರಪುರುಷನೊಂದಿಗೆ ಆವಶ್ಯಕವಾದಾಗ ಪರದೆ ಧರಿಸಿ ಮಾತನಾಡಬಹುದು. ಆದರೆ ಮಾತನಾಡುವಾಗ ಭಯದಿಂದಲೂ ಮೃದುವಾಗಿಯೂ ಮಾತನಾಡಬಾರದು.
147. ನಿನಗೆ ನಿನ್ನನ್ನು ನೋಡಬೇಕಾದರೆ ನಿನ್ನ ಸ್ನೇಹಿತರ ಕನ್ನಡಿಯಲ್ಲಿ ನಿನ್ನನ್ನು ನೋಡು.
148. ನೀನು ನಿನ್ನ ಖರ್ಚನ್ನು ನಿನ್ನ ಆದಾಯದ ಒಳಗೆ ಇರಿಸು.
149. ಹೇ ಮಹಿಳೆ, ನಿನ್ನ ಕರ್ತವ್ಯ ಅಲ್ಲಾಹನ ಆರಾಧನೆ, ಪತಿಯ ಅನುಸರಣೆ ಮತ್ತು ಮಕ್ಕಳ ಪಾಲನೆ ಪೋಷಣೆ ಮತ್ತು ತರಬೇತಿ ಆಗಿದೆ.
150. ನೀನು ಅನಿವಾರ್ಯ ಸಂದರ್ಭಗಳಲ್ಲಿ ಹೊರತು ಪತ್ನಿಯಿಂದ ಅಗಲಿ ಇರಬೇಡ.
151. ನೀನು ನಿನ್ನ ಪತ್ನಿ ಮತ್ತು ಮಕ್ಕಳೊಂದಿಗೆ ಒಟ್ಟಿಗೆ ಊಟಮಾಡು.
152. ನೀನು ಜನರು ಅಸಹ್ಯಪಡುವ ರೀತಿ ವರ್ತಿಸಬೇಡ.
153. ನೀನು ಪರಸ್ತ್ರೀಯರ ಮತ್ತು ಅರ್ಧ ನಗ್ನ ಸ್ತ್ರೀಯರ ಚಿತ್ರಗಳಿಂದ ನಿನ್ನ ಮನೆ ಅಥವಾ ಕೋಣೆಯನ್ನು ಅಲಂಕರಿಸದಿರು.
154. ನೀನು ಚಿಕ್ಕ ಮಕ್ಕಳನ್ನು ಸತಾಯಿಸಬೇಡ.
155. ನೀನು ಪ್ರಾಣಿಗಳನ್ನು ಹಿಂಸಿಸಬೇಡ.
156. ನೀನು ಬಹಳ ಬೊಬ್ಬೆ ಹೊಡೆದು ಮಾತನಾಡಬೇಡ.
157. ನೀನು ಜನರೊಂದಿಗೆ ನಗುಮುಖದಿಂದ ವರ್ತಿಸು.
158. ನೀನು ಒಳ್ಳೆಯ ಜನರ ಬಗ್ಗೆ ಒಳ್ಳೆಯದಾಗಿಯೇ ಯೋಚಿಸು.
159. ನೀನು ಕರುಣೆಯಿಂದ ವರ್ತಿಸು.
160. ನೀನು ಸಮಾಜ ಸೇವೆಯಲ್ಲಿ ಆಸಕ್ತನಾಗು.
161. ನೀನು ದೇಶವನ್ನು ಪ್ರೀತಿಸು.
162. ನೀನು ಹಿರಿಯರ ಮಕ್ಕಳನ್ನು ಗೌರವಿಸು.
163. ನೀನು ನಿನ್ನ ತಂದೆಯ ಹಿರಿಯರನ್ನೂ ಸ್ನೇಹಿತರನ್ನೂ ನಿನ್ನ ಹಿರಿಯರನ್ನಾಗಿ ಭಾವಿಸು.
164. ನೀನು ಜನರ ಹಕ್ಕುಗಳನ್ನು ಅಂಗೀಕರಿಸು.
165. ನಿನ್ನಲ್ಲಿ ಯಾವುದೇ ದುರ್ಗುಣ ಕಾಣಿಸದಿರಲಿ.
166. ನೀನು ವಿಧವೆಯರ ಮತ್ತು ಅನಾಥರ ಮೇಲೆ ದಯೆದೋರು; ಅವರಿಗೆ ಸಹಾಯ ನೀಡು.
167. ನೀನು ಅತ್ಯಂತ ಚಿಕ್ಕ ಪಾರಿತೋಷಿಕ ಸ್ವೀಕರಿಸಲೂ ಹಿಂಜರಿಯಬೇಡ (ವಿಶಿಷ್ಟ ಕಾರಣಗಳ ಹೊರತು).
168. ನೀನು ಉಗ್ಗು ಮಾತಿನವರನ್ನು, ಅಂಧರನ್ನು, ಕುಂಟರನ್ನು ಮತ್ತಿತರ ರೀತಿ ಅಂಗವಿಕಲರಾದವರನ್ನು ಅನುಕರಿಸಬೇಡ.
169. ನೀನು ಯಾರ ನಡೆವಳಿಕೆಯನ್ನೂ ದೂಷಿಸಬೇಡ.

170. ನೀನು ಮೊಕದ್ದಮೆ ಹೂಡುವುದರಿಂದ ಸಾಧ್ಯವಿರುವಷ್ಟು ದೂರ ಸರಿ.
171. ನೀನು ಜನರನ್ನು ತಿಳಿಗೇಡಿಗಳನ್ನಾಗಿ ಮಾಡದಿರು.
172. ನೀನು ಗೌರವಾನ್ವಿತರನ್ನು ಅಪಮಾನಿಸದಿರು.
173. ನೀನು ನೌಕರನಾಗಿದ್ದರೆ ನಿನ್ನ ಕೆಲಸವನ್ನು ಪರಿಶ್ರಮಪಟ್ಟು ಮತ್ತು ನಂಬಿಕೆಗೆ ಅರ್ಹ ರೀತಿಯಲ್ಲಿ ಮಾಡು.
174. ನೀನು ಅಧಿಕಾರಿಯಾಗಿದ್ದರೆ ನಿನ್ನ ಅಧೀನದಲ್ಲಿರುವ ನೌಕರರ ಹಕ್ಕುಗಳಿಗೆ ಭಂಗ ಉಂಟುಮಾಡದಿರು.
175. ನೀನು ನಿನ್ನ ಆಯುಸ್ಸನ್ನು ವರ್ಧಿಸಲು ಬಯಸುವುದಾದರೆ ನಿನ್ನ ಬಡ ಸಂಬಂಧಿಕರೊಂದಿಗೆ ಉತ್ತಮವಾಗಿ ವರ್ತಿಸು.
176. ನೀನು ಮಹಿಳೆಯರನ್ನು ಗೌರವಿಸು.
177. ನಿನ್ನೊಂದಿಗೆ ಯಾರಾದರೂ ಮಾತನಾಡುವಾಗ ಆತನ ಮಾತಿಗೆ ಲಕ್ಷ್ಯ ನೀಡು.
178. ನೀನು ಮಾತನಾಡುವಾಗ ಸ್ಪಷ್ಟವಾಗಿ ಮಾತನಾಡು.
179. ನೀನು ಯಾವುದೇ ಗೂಢ ತಂತ್ರದಲ್ಲಿ ಭಾಗವಹಿಸದಿರು.
180. ನೀನು ಜನರೊಂದಿಗೆ ಸೌಹಾರ್ದ ಸ್ಥಾಪಿಸು.
181. ನೀನು ಜನರಿಗೆ ಸೌಮ್ಯವಾಗಿ ಮನವರಿಕೆ ಮಾಡಿಕೊಡು.
182. ನೀನು ನಿನ್ನವರನ್ನು ಸೇವಕರೆಂದು ಭಾವಿಸದಿರು. ನೀನು ಅವರ ಸೇವೆ ಮಾಡುವವನಾಗು.
183. ನೀನು ಅನ್ಯರ ಸುಖವನ್ನು ಭಂಗಗೊಳಿಸದಿರು.
184. ನೀನು ಭಿಕ್ಷೆ ಬೇಡುವವರನ್ನು ಧಿಕ್ಕರಿಸದಿರು.
185. ನೀನು ಅನಾಥರೊಂದಿಗೆ ಕಠೋರವಾಗಿ ವರ್ತಿಸದಿರು.
186. ನೀನು ಉಪಯೋಗಿಸುತ್ತಿರುವ ವಸ್ತುಗಳ ಬಗ್ಗೆ ನಿನ್ನ ನೆರೆಹೊರೆಯವರೊಂದಿಗೆ ಮತ್ತು ಬಡವರೊಂದಿಗೆ ಜಿಪುಣತೆಯಿಂದ ವರ್ತಿಸದಿರು.
187. ನೀನು ಸುಂದರ ಹುಡುಗರೊಂದಿಗೆ ಅನಾವಶ್ಯಕವಾಗಿ ಸಂಬಂಧ ಇರಿಸಬೇಡ.
188. ನೀನು ಹಿರಿಯರ ಮುಂದೆ ಬರಿ ತಲೆಯಲ್ಲಿ ಕುಳಿತುಕೊಳ್ಳಬೇಡ.
189. ನೀನು ನಿನ್ನ ನೆರೆಹೊರೆಯವರನ್ನು ಸಣ್ಣ ಸಣ್ಣ ಒಳಿತುಗಳಿಂದಲೂ ದೂರವಿಡಬೇಡ.
190. ನೀನು ಎಲ್ಲರೊಂದಿಗೂ ವಿಶಿಷ್ಟವಾಗಿ ಬಡವರೊಂದಿಗೆ ಉತ್ತಮ ಸ್ವಭಾವದಿಂದ ವರ್ತಿಸು.
191. ನಿನಗೆ ಸಾಧ್ಯವಿದ್ದರೆ ದೌರ್ಜನ್ಯಗಾರನಿಂದ ದೌರ್ಜನ್ಯ ಪೀಡಿತನ ಹಕ್ಕುಗಳನ್ನು ಕೊಡಿಸಲು ಪ್ರಯತ್ನಿಸು.
192. ನೀನು ಪದೇ ಪದೇ ಒಂದೇ ಮಾತನ್ನು ಪುನರಾವರ್ತಿಸದಿರು.
193. ನೀನು ಬಡವರಿಗೆ ನಿನ್ನ ಮಕ್ಕಳ ಕೈಗಳಿಂದಲೂ ದಾನ ಧರ್ಮ ಕೊಡಿಸು.
194. ನೀನು ಹರತಾಳ, ಮುಷ್ಕರಗಳಲ್ಲಿ ಭಾಗವಹಿಸದಿರು.
195. ನೀನು ನಿನ್ನ ಜಾತಿಯ ಹೆಸರನ್ನು ಬದಲಾಯಿಸಿ ಹೇಳಬೇಡ.
196. ನೀನು ಅತಿಥಿಗಳನ್ನು ಗೌರವಿಸು.
197. ನೀನು ನಿನ್ನ ಆತಿಥೇಯನ ಮೇಲೆ ಯಾವುದೇ ತರ ಭಾರ ಹಾಕಬೇಡ.
198. ನೀನು ಸ್ತ್ರೀಯರ ಹಾಡು ಆಲಿಸದಿರು. ನೃತ್ಯ ನೋಡದಿರು.
199. ನೀನು ನಿನ್ನ ಅಣ್ಣನನ್ನು ತಂದೆಯ ಹಾಗೆ ಮತ್ತು ತಮ್ಮನನ್ನು ಮಗನ ಹಾಗೆ ಭಾವಿಸು.
200. ನೀನು ನಿನ್ನ ತಾಯಿಯ ಪಾದಗಳ ಕೆಳಗೆ ಇರುವ ಸ್ವರ್ಗವನ್ನು ಗಳಿಸು.

* * * * *

**31 ನೇ ಪುಟದಿಂದ**

ಓದಿರಬಹುದು. ಅವನ ಕಣ್ಣ ಮುಂದೆಯೇ ಅವನ ಹೆಣ್ಣು ಮಕ್ಕಳೊಂದಿಗೆ ನಾಚಿಕೆಗೇಡಿನಿಂದ ವರ್ತಿಸಿದುದಕ್ಕಿಂತ ದಾರುಣವಾದ ಸಂಭವ ಬೇರೆ ಏನಿದೆ. ಅವನನ್ನು ಕೊಂದು ಅವನನ್ನು ಅತ್ಯಂತ ದಾರುಣ ಸ್ಥಿತಿಗೆ ಒಳಪಡಿಸಲಾಯಿತು. ಈ ಘಟನೆಗಳು ಹಗಲು ಬೆಳಕಿನ ಹಾಗೆ ಸಾಬೀತುಪಡಿಸುವುದೇನೆಂದರೆ ಈ ಸಮಾಚಾರ ಮುಂಚಿತವಾಗಿ ನೀಡಿದವರು ಅಲ್ಲಾಹನಿಂದ ಆಗಮಿಸಿದವರಾಗಿದ್ದರೆಂದು. ಅಲ್ಲಾಹನೊಂದಿಗೆ ಅವರಿಗೆ ಬಹಳ ದೊಡ್ಡ ಸಾಮೀಪ್ಯವಿತ್ತು. ಇದರಿಂದ ಹೇಗೆಯೂ ಸಾಬೀತಾಗುತ್ತದೆ: ಇಸ್ಲಾಮ್ ಎಂತಹ ಧರ್ಮವೆಂದರೆ ಅದರಲ್ಲಿ ಎಂತಹ ಮನುಷ್ಯರು ಜನಿಸುತ್ತಾರೆಂದರೆ ಅವರಲ್ಲಿ ಅಲ್ಲಾಹನ ಬಗ್ಗೆ ಪ್ರೀತಿ ಹುಟ್ಟುತ್ತದೆ ಮತ್ತು ಅಲ್ಲಾಹನು ಅವರೊಂದಿಗಿರುವ ತನ್ನ ಪ್ರೀತಿಯ ಬಗ್ಗೆ ಸಾಕ್ಷ್ಯ ನೀಡುತ್ತಾನೆ. ◆

# ಅಹ್ಮದಿಯಾ ಮುಸ್ಲಿಂ ಜಮಾಅತಿನ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಹಿಸ್ ಹೋಲಿನಸ್ ಪೋಪ್ ಫ್ರಾನ್ಸಿಸ್‌ರಿಗೆ ಬರೆದ ಪತ್ರ

**ಹಿಸ್ ಹೋಲಿನಸ್ ಪೋಪ್ ಫ್ರಾನ್ಸಿಸ್**



**ಮುಬಾರಕ್ ಮಸ್‌ಜಿದ್**
**ಶೀಪಚ್ಚ್ ಲೇನ್**
**ಟಿಲ್‌ಫೋರ್ಡ್, ಸರ್ರೈ**
**GU 10 2AQ**
**ಯುನೈಟೆಡ್ ಕಿಂಗ್‌ಡಮ್**

ಯುವರ್ ಹೋಲಿನೆಸ್,

ಇಂದಿನ ಕಾಲದಲ್ಲಿ ನಾವೆಲ್ಲರೂ ಸಂದಿಗ್ಧವೂ ಅಪಾಯಕಾರಿಯೂ ಆಗಿರುವ ಪರಿಸ್ಥಿತಿಯಲ್ಲಿ ದಾಟಿ ಹೋಗುತ್ತಿರುವುದರಿಂದಲೂ ಲೋಕವು ಇಂದು ಅನಿಶ್ಚಿತತೆ ಮತ್ತು ಹತಾಶೆಯಲ್ಲಿ ಮುಳುಗಿರುವುದರಿಂದಲೂ ನಾನು ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಕೋವಿಡ್–19 ಮಹಾಮಾರಿ ಲೋಕವನ್ನು ತನಗೆ ಶರಣಾಗತಗೊಳಿಸಿದೆ ಮತ್ತು ಈ ಮಹಾಮಾರಿ ಎಲ್ಲ ದೇಶಗಳನ್ನೂ ಎಲ್ಲ ಜನಾಂಗಗಳನ್ನೂ ಬಾಧಿಸಿದೆ. ಇದರ ಫಲಸ್ವರೂಪವಾಗಿ ಮಾನವರ ನೋವು ಮತ್ತು ಕಷ್ಟಾನುಭವಗಳ ಸಂವೇದನೆಯುಳ್ಳ ಪ್ರತಿಯೊಬ್ಬನು ಆತಂಕಭರಿತನಾಗಿ ಅಸ್ವಸ್ಥನಾಗಿದ್ದಾನೆ. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಈ ಬೃಹತ್ ಪರೀಕ್ಷೆ ಮತ್ತು ರೋಗದಿಂದ ಲೋಕಕ್ಕೆ ಮುಕ್ತಿಯನ್ನು ನೀಡಲೆಂದು ಮತ್ತು ಅದರ ಮಾರಕ ವಿಷಕಾರಿ ಪರಿಣಾಮಗಳಿಂದ ಲೋಕವನ್ನು ರಕ್ಷಿಸಲಿ ಎಂದು ನಾನು ಹೃದಯಂತರಾಳದಿಂದ ಪ್ರಾರ್ಥಿಸುತ್ತೇನೆ.

ಮನುಷ್ಯರು ತಮ್ಮ ಸೃಷ್ಟಿಕರ್ತನ ಕಡೆಗೆ ಬೆನ್ನು ತಿರುಗಿಸಿದಾಗ ಜನಸಮೂಹದಲ್ಲಿ ಇಂತಹ ಮಹಾಮಾರಿಗಳೂ ನೈಸರ್ಗಿಕ ವಿಪತ್ತುಗಳೂ ಸಂಭವಿಸಿರುವುದಾಗಿ ಚರಿತ್ರೆ ಸಾಕ್ಷ್ಯವಹಿಸುತ್ತದೆ. ಇತ್ತೀಚೆಗೆ ತಾವು ನೀಡಿದ ಒಂದು ಭಾಷಣ ನನ್ನ ಗಮನಕ್ಕೆ ಬಂದಿದೆ. ಆ ಭಾಷಣದಲ್ಲಿ ತಾವು ಹೀಗೆ ಹೇಳಿದಿರಿ: ನಾನು ಸರ್ವಶಕ್ತನಾದ ದೇವನೊಂದಿಗೆ ಮಾನವರ ವರ್ತನೆಯಿಂದ ನೀನು ತೃಪ್ತನಾಗಿರುವೆಯೋ ಎಂದು ಕೇಳುವುದಾದರೆ ದೇವನು ತನ್ನ ಅತೃಪ್ತಿಯನ್ನು ಪ್ರಕಟಿಸುವನು. ಇಂದಿನ ಕಾಲದ ನೈಸರ್ಗಿಕ ವಿಪತ್ತುಗಳು ಇಂದಿನ ಲೋಕದ ದುಷ್ಕರ್ಮಗಳಿಗೆ ಮತ್ತು ನಿರ್ಲಕ್ಷ್ಯತೆಗಳಿಗೆ ಉತ್ತರವಾಗಿರುವ ಪ್ರತಿಕ್ರಿಯೆಗಳಾಗಿವೆ ಎಂಬ ತಮ್ಮ ನಂಬಿಕೆಯನ್ನು ಸಹ ತಾವು ಸೂಚಿಸಿರುವಿರಿ. ನಾನು ತಮ್ಮ ಭಾವನೆಗಳೊಂದಿಗೆ ಸಂಪೂರ್ಣವಾಗಿ ಒಮ್ಮತವನ್ನು ಹೊಂದಿದ್ದೇನೆ. ಈ ಸಂದೇಶವನ್ನು ಲೋಕದಲ್ಲಿ ವ್ಯಾಪಕವಾಗಿ ಹರಡುವುದು ಆವಶ್ಯಕವಾಗಿದೆ ಎಂದು ನಾನು ಭಾವಿಸುತ್ತೇನೆ. ಮಾನವರೆಲ್ಲರೂ ಹೆಚ್ಚಿನ ದುಃಖ ಮತ್ತು ಸಂಭಾವ್ಯ ನಾಶಗಳಿಂದ ರಕ್ಷಿಸಲ್ಪಡಲು ಸರ್ವಶಕ್ತನಾದ ದೇವನ ಕಡೆಗೆ ಅಭಿಮುಖೀಕರಿಸುವುದು ತುರ್ತಾಗಿ ಆವಶ್ಯಕವಾಗಿದೆ ಎಂದು ನಾನು ದೃಢವಾಗಿ ನಂಬುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಧಾರ್ಮಿಕ ನಾಯಕನಾದ ನಾನು ತಮಗೆ ತಿಳಿಸಲು ಇಚ್ಛಿಸುವುದೇನೆಂದರೆ, ಅಹ್ಮದಿಯಾ ಮುಸ್ಲಿಮ್ ಜಮಾಅತ್ 1889ರಲ್ಲಿ ಭಾರತದ ಖಾದಿಯಾನ್ ಎಂಬ ಗ್ರಾಮದಲ್ಲಿ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಅವರಿಂದ ಸ್ಥಾಪಿಸಲ್ಪಟ್ಟಿತು. ಮಾನವರೆಲ್ಲರೂ ತಮ್ಮ ಸೃಷ್ಟಿಕರ್ತನ ಸಾಮೀಪ್ಯವನ್ನು ಬಯಸುವಂತೆ ಮಾಡುವ ಮತ್ತು ಅವರು ಪರಸ್ಪರ ಈಡೇರಿಸಬೇಕಾದ ಕರ್ತವ್ಯಗಳ ಮತ್ತು ಹೊಣೆಗಾರಿಕೆಗಳ ಕಡೆಗೆ ಗಮನಹರಿಸುವಂತೆ ಮಾಡುವ ಮಹತ್ವಪೂರ್ಣ ಉದ್ದೇಶಲಕ್ಷ್ಯವನ್ನು ಈಡೇರಿಸಲಿಕ್ಕೋಸ್ಕರ ತನ್ನನ್ನು ಸರ್ವಶಕ್ತನಾದ ಅಲ್ಲಾಹನು ತನ್ನನ್ನು ನಿಯೋಜಿಸಿರುವನೆಂದು ಅವರು ವಾದಿಸಿದರು. ಮಾನವರು ಎಲ್ಲ ವಿಧಗಳ ದುಷ್ಕರ್ಮಗಳನ್ನೂ ದೌರ್ಜನ್ಯಗಳನ್ನೂ ಅನ್ಯಾಯಗಳನ್ನೂ ತ್ಯಜಿಸಿ ಸರ್ವಶಕ್ತನಾದ ದೇವನ ಕೋಪದಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕೆಂದು ಅವರು ನಿರಂತರವಾಗಿ ಒತ್ತಿ ಹೇಳುತ್ತಿದ್ದರು.

**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಹೀಗೆ ಸಹ ಹೇಳಿದರು: "ಮನುಷ್ಯರ ಧಾರ್ಮಿಕ ವಿಶ್ವಾಸ ಮತ್ತು ಅವಿಶ್ವಾಸದ ಬಗ್ಗೆ ಪರಲೋಕದಲ್ಲಿ ತೀರ್ಮಾನವಾಗುವುದು. ನೈಸರ್ಗಿಕ ವಿಪತ್ತುಗಳು ಈಗ ಸಂಭವಿಸುತ್ತಿರುವುದು ಮತ್ತು ಹಿಂದಿನ ಕಾಲದಲ್ಲಿ ಜನರು ವಿಪತ್ತುಗಳ ಮೂಲಕ ನಾಶವಾದುದು ಕೇವಲ ಜನರ ಧಾರ್ಮಿಕ ಅವಿಶ್ವಾಸಗಳ ಕಾರಣದಿಂದ ಮಾತ್ರವಲ್ಲ. ಜನರ ದುರಹಂಕಾರ, ಅತಿರೇಕ ವರ್ತನೆ ಮತ್ತು ಕ್ರೌರ್ಯಗಳ ಕಾರಣದಿಂದ ಅವರು ನಾಶವಾದರು. ಫರೋವ ಚಕ್ರವರ್ತಿ ನಾಶವಾದುದು ಸಹ ಅವನ ಧಾರ್ಮಿಕ ಅವಿಶ್ವಾಸದ ಕಾರಣದಿಂದಲ್ಲ. ಆತನ ಅನ್ಯಾಯಭರಿತ ವರ್ತನೆ ಮತ್ತು ಆತನು ಮಾಡಿದ ಬರ್ಬರ ಕೃತ್ಯಗಳ ಕಾರಣದಿಂದ ಆತನು ನಾಶವಾದನು."**

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನಾಯಕನೆಂಬ ನೆಲೆಯಲ್ಲಿ ನಾನು, ಲೋಕದ ನಾಯಕರೊಂದಿಗೆ ನ್ಯಾಯ ಮತ್ತು ಪ್ರಾಮಾಣಿಕತೆಯಿಂದ ವರ್ತಿಸಿ ಲೋಕದಲ್ಲಿ ವಾಸ್ತವಿಕವೂ ದೀರ್ಘಕಾಲ ನೆಲೆನಿಲ್ಲುವಂತಹದೂ ಆಗಿರುವ ಶಾಂತಿಯನ್ನು ಸ್ಥಾಪಿಸಿ ಎಲ್ಲ ದೇಶಗಳ ಮತ್ತು ಎಲ್ಲ ಜನಾಂಗಗಳ ಹಕ್ಕುಗಳನ್ನು ಗೌರವಿಸಿ ಅವುಗಳನ್ನು ಖಾತರಿಪಡಿಸಬೇಕೆಂದು ದೀರ್ಘ ಕಾಲದಿಂದ ಅವರನ್ನು

ಪತ್ರಗಳ ಮೂಲಕ ಒತ್ತಾಯಪಡಿಸುತ್ತಾ ಇದ್ದೇನೆ.

ಈ ವಿಷಯಕ್ಕೆ ಸಂಬಂಧಿಸಿ ನಾನು ನಿಮ್ಮ ಪೂರ್ವವರ್ತಿ ಹಿಸ್ ಹೋಲಿನೆಸ್ ಪೋಪ್ ಬೆನೆಡಿಕ್ಟ್ XVI ಅವರಿಗೆ 2011ರಲ್ಲಿ ಪತ್ರ ಬರೆದಿದ್ದೆ. ಲೋಕದಲ್ಲಿ ಅಂತರ್ ಧರ್ಮೀಯ ಸಾಮರಸ್ಯವನ್ನು ಹಾಗೂ ಶಾಂತಿ ಸೌಹಾರ್ದಗಳನ್ನು ವರ್ಧಿಸಲು ಲೋಕದ ಎಲ್ಲ ಧಾರ್ಮಿಕ ನಾಯಕರು ಒಗ್ಗೂಡಿ ಪ್ರಯತ್ನಿಸಬೇಕು ಎಂಬ ಉದ್ದೇಶದಿಂದ ನಾನು ಆ ಪತ್ರವನ್ನು ಬರೆದಿದ್ದೆ. ಲೋಕದ ಇಂದಿನ ಅಭದ್ರ ಪರಿಸ್ಥಿತಿಯಲ್ಲಿ ನಾನು ನನ್ನ ನಂಬಿಕೆಯನ್ನು ತಮಗೆ ತಲಪಿಸುವುದು ಅತ್ಯಾವಶ್ಯಕವಾಗಿದೆ ಎಂದು ಭಾವಿಸುತ್ತೇನೆ. ಇಂದಿನ ಕಾಲದ ಧಾರ್ಮಿಕ ನಾಯಕರ ಅತ್ಯಂತ ಮಹತ್ವಪೂರ್ಣ ಹೊಣೆಗಾರಿಕೆ ಇದಾಗಿದೆ: ಈ ವೈರಸ್ ಹಾವಳಿ ಮಾನವರೆಲ್ಲರಿಗೂ ನೀಡಲಾದ ದೈವಿಕ ಮುನ್ನೆಚ್ಚರಿಕೆ ಎಂದೂ ಅದರಿಂದ ತಪ್ಪಿಸಿಕೊಳ್ಳಲಿರುವ ಏಕಮಾತ್ರ ಮಾರ್ಗ ಸೃಷ್ಟಿಕರ್ತನ ಮುಂದೆ ವಿನಯದಿಂದ ಬಾಗುತ್ತಾ ಅವನ ಹಕ್ಕುಗಳನ್ನೂ ಪರಸ್ಪರ ಒಬ್ಬರಿನ್ನೊಬ್ಬರ ಬಗ್ಗೆ ಇರುವ ಹಕ್ಕುಗಳನ್ನೂ ಈಡೇರಿಸುವುದಾಗಿದೆ ಎಂಬ ವಾಸ್ತವಿಕತೆ ಬಗ್ಗೆ ಮಾನವರೆಲ್ಲರಿಗೂ ಮಾರ್ಗದರ್ಶನ ನೀಡಿ ಲೋಕವನ್ನು ಇಂದಿನ ಆತಂಕಭರಿತ ಸ್ಥಿತಿಯಿಂದ ಬದಲಾಯಿಸಿ ಅದನ್ನು ಶಾಂತಿ, ಪ್ರೀತಿ ಮತ್ತು ಕಾರುಣ್ಯದ ದಾಮವನ್ನಾಗಿ ಮಾಡಬೇಕು.

ಇನ್ನೊಂದು ವಿಷಯವೇನೆಂದರೆ ಕೋವಿಡ್–19 ಮಹಾಮಾರಿಯ ಹಾವಳಿ ಕೊನೆಗೊಂಡ ತಕ್ಷಣ ಎಲ್ಲ ಸಮಸ್ಯೆಗಳು ಪರಿಹರಿಸಲ್ಪಡುವುವು ಎಂದು ಭಾವಿಸಲು ಸಾಧ್ಯವಿಲ್ಲ. ಈ ಮಹಾಮಾರಿ ಲೋಕದಲ್ಲಿ ದೇಶಗಳ ಮತ್ತು ಜನಾಂಗಗಳ ಮೇಲೆ ಉಂಟುಮಾಡಿದ ಅಭೂತಪೂರ್ವವಾದ ಸಾಂಪತ್ತಿಕ ಮತ್ತು ಆರ್ಥಿಕ ಬಿಕ್ಕಟ್ಟಿನಿಂದ ಸಂಭವಿಸಲಿರುವ ಸಂಕಷ್ಟಗಳ ಮತ್ತು ಸಂಘರ್ಷಗಳ ಬೆದರಿಕೆ ದಿಗಂತದಲ್ಲಿ ದೃಶ್ಯವಾಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಇದರ ಫಲಸ್ವರೂಪವಾಗಿ ದೇಶಗಳ ಒಳಗೆ ಮತ್ತು ದೇಶಗಳ ಮಧ್ಯೆ ಇನ್ನಷ್ಟು ಸಂಘರ್ಷಗಳು ಸಂಭವಿಸಲು ಸಾಧ್ಯತೆಗಳಿವೆ. ಲೋಕದ ಶಾಂತಿ ಮತ್ತು ಸ್ಥಿರತೆಗೆ ಮುಂದಿನ ತಿಂಗಳುಗಳಲ್ಲೂ ವರ್ಷಗಳಲ್ಲೂ ಹೆಚ್ಚು ಹೆಚ್ಚಾಗಿ ಭಂಗವುಂಟಾಗುವುದರ ಬಗ್ಗೆ ನಾನು ಭಯಪಡುತ್ತೇನೆ. ಆದುದರಿಂದ ನಾವು ಈ ಅಪಾಯದ ಬಗ್ಗೆ ಜಾಗತಿಕ ನಾಯಕರ ಗಮನವನ್ನು ತ್ವರಿತವಾಗಿ ಹರಿಸುವುದು ಆವಶ್ಯಕವಾಗಿದೆ.

ರೋಮನ್ ಕ್ಯಾಥಲಿಕ್ ಚರ್ಚಿನ ಜಾಗತಿಕ ನಾಯಕರಾದ ತಮಗೆ ವ್ಯಾಪಕವಾದ ಸಂಪರ್ಕ ವಲಯವಿದೆ. ಆದುದರಿಂದ ನಾನು ನಿಮ್ಮೊಂದಿಗೆ ಪ್ರಾಮಾಣಿಕವಾಗಿ ಅಪೇಕ್ಷಿಸುತ್ತೇನೆ. ತಾವು ತಮ್ಮ ಎಲ್ಲ ಮಾಧ್ಯಮಗಳನ್ನೂ ಪ್ರಭಾವಗಳನ್ನೂ ಜಾಗತಿಕ ನಾಯಕರಿಗೂ ಜನರಿಗೂ ಮಾರ್ಗದರ್ಶನ ನೀಡಲು ಬಳಸಬೇಕು. ಅವರೆಲ್ಲರೂ ಸೃಷ್ಟಿಕರ್ತನನ್ನು ಗುರುತಿಸಿ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವ ಮೂಲಕ ಮಾನವರನ್ನು ಮಹಾಮಾರಿಯ ಹಾನಿಕರವಾದ ಪರಿಣಾಮಗಳಿಂದಲೂ ಸಂಭವ್ಯವಾದ ತೃತೀಯ ಮಹಾಯುದ್ಧದ ವಿನಾಶಗಳಿಂದಲೂ ರಕ್ಷಿಸುವವರಾಗಲಿ.

ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ನೇತಾರನಾಗಿ ನಾನು ಪ್ರತಿಜ್ಞೆ ಮಾಡುತ್ತೇನೆ, ಲೋಕವನ್ನು ನಾಶದಿಂದ ರಕ್ಷಿಸಲು ಮತ್ತು ಮಾನವರನ್ನು ತಮ್ಮ ಸೃಷ್ಟಿಕರ್ತನನ್ನು ಗುರುತಿಸುವ ಕಡೆಗೆ ಮರಳಿಸಲು ಮಾಡುವ ಪ್ರತಿಯೊಂದು ಪ್ರಯತ್ನದಲ್ಲಿ ಮತ್ತು ಕಾರ್ಯಯೋಜನೆಯಲ್ಲಿ ಸಹಾಯ ಮಾಡಲು ಮತ್ತು ಭಾಗವಹಿಸಲು ನಾವು ಸದಾ ಸನ್ನದ್ಧರಾಗಿರುವೆವು. ಸಮೃದ್ಧಿಗೋಸ್ಕರ ಮಾಡುವ ಎಲ್ಲ ಪ್ರಯತ್ನಗಳನ್ನು ಸರ್ವಶಕ್ತನಾದ ಅಲ್ಲಾಹನು ಅನುಗ್ರಹಿಸಲಿ. ಲೋಕದ ಎಲ್ಲ ನಾಯಕರು ಮತ್ತು ಎಲ್ಲ ಧರ್ಮಗಳ ಜನರು ತಮ್ಮ ಧಾರ್ಮಿಕ ನಂಬಿಕೆಗಳಲ್ಲಿ ಇರಬಹುದಾದ ಭಿನ್ನತೆಯನ್ನು ಬದಿಗೆ ಸರಿಸಿ ಒಗ್ಗೂಡಿ ಮಾನವರ ವಿಮೋಚನೆ ಎಂಬ ಉದಾತ್ತ ಧ್ಯೇಯಕ್ಕೋಸ್ಕರ ಕಾರ್ಯನಿರತರಾಗಲಿ.

ಖಂಡಿತವಾಗಿಯೂ ಇದು ಈಗ ಮತ್ತು ಯಾವಾಗಲೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮುಖ್ಯ ದ್ಯೇಯವಾಗಿದೆ ಮತ್ತು ನಾವು ಅದಕ್ಕೋಸ್ಕರ ಪ್ರತಿಯೊಂದು ರೀತಿಯ ಪ್ರಯತ್ನ ಮಾಡುತ್ತಿದ್ದೇವೆ.

ಸರ್ವಶಕ್ತನಾದ ಅಲ್ಲಾಹನು ಲೋಕಕ್ಕೆ ಬುದ್ಧಿಯನ್ನೂ ತಿಳುವಳಿಕೆಯನ್ನೂ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

ಶುಭಾಶಯ ಮತ್ತು ಪ್ರಾರ್ಥನೆಗಳೊಂದಿಗೆ

ಸ್ನೇಹಪೂರ್ವಕವಾಗಿ

**ಮಿರ್ಝಾ ಮಸ್‌ರೂರ್ ಅಹ್ಮದ್**

**ಖಲೀಫತುಲ್ ಮಸೀಹ್ V**

**ಹೆಡ್ ಆಫ್ ದಿ ವರ್ಲ್ಡ್ ವೈಡ್ ಅಹ್ಮದಿಯಾ ಮುಸ್ಲಿಮ್ ಕಮ್ಯೂನಿಟಿ.**

# ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋಚ್ಚ ನೇತಾರ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಸಂಯುಕ್ತ ರಾಷ್ಟ್ರ ಸಂಘ (UNO) ಸೆಕ್ರೆಟರಿ ಜನರಲ್ ಹಿಸ್ ಎಕ್ಸಿಲೆನ್ಸಿ ಮಿಸ್ಟರ್ ಅಂಟೋನಿಯೋ ಗುಟೆರ್ರಸ್ ಅವರಿಗೆ ಬರೆದ ಪತ್ರ

**ಹಿಸ್ ಎಕ್ಸಿಲೆನ್ಸಿ ಮಿಸ್ಟರ್ ಅಂಟೋನಿಯೋ ಗುಟೆರ್ರಸ್**
**ಯುನೈಟೆಡ್ ನೇಶನ್ಸ್**
**ನ್ಯೂಯೋರ್ಕ್ NY 10017**



**ಮುಬಾರಕ್ ಮಸ್‌ಜಿದ್**
**ಶೀಪಚ್ಟ್ ಲೇನ್**
**ಟೆಲ್‌ಫೋರ್ಡ್, ಸರ್ರೈ**
**GU 10 2AQ**
**ಯುನೈಟೆಡ್ ಕಿಂಗ್‌ಡಮ್**

ಯುವರ್ ಎಕ್ಸಿಲೆನ್ಸಿ,

ಲೋಕ ಎದುರಿಸುತ್ತಿರುವ ಅಪಾಯಕರ ಸನ್ನಿವೇಶಗಳ ಕಾರಣದಿಂದ ಕೋವಿಡ್–19 ಮಾಹಾಮಾರಿಯ ವಿಷಮ ಪರಿಸ್ಥಿತಿಯ ಬೆಳಕಿನಲ್ಲಿ ನಾನು ಅನೇಕ ಜಾಗತಿಕ ಮಹಾ ಶಕ್ತಿಶಾಲಿ ದೇಶಗಳ ನಾಯಕರಿಗೆ ಪತ್ರಗಳನ್ನು ಬರೆದಿದ್ದೇನೆ. ಲೋಕದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಖಾತರಿಪಡಿಸಲು ಸ್ಥಾಪಿಸಲಾದ ಪ್ರಮುಖ ಅಂತರ್‌ರಾಷ್ಟ್ರೀಯ ಸಂಘಟನೆಯಾದ ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಆಗಿರುವ ತಮ್ಮ ಭುಜಗಳ ಮೇಲೆ ಮಹತ್ವಪೂರ್ಣವಾದ ಹೊಣೆಗಾರಿಕೆಯನ್ನು ಹೊರಿಸಲಾಗಿದೆ. ಆದುದರಿಂದ ನಾನು ಈ ಸಂದರ್ಭವನ್ನು ಬಳಸಿಕೊಂಡು ತಮ್ಮೊಂದಿಗೆ ಒತ್ತಾಯ ಪೂರ್ವಕವಾಗಿ ಅಪೇಕ್ಷಿಸುತ್ತೇನೆ – ತಾವು ತಮ್ಮ ವೇದಿಕೆಯನ್ನು ಎಲ್ಲ ಮಾನವರ ಹಿತಕ್ಕೋಸ್ಕರ ಉಪಯೋಗಪಡಿಸಬೇಕೆಂದು.

ನನ್ನ ಅಭಿಪ್ರಾಯವೇನೆಂದರೆ, ಸಂಯುಕ್ತ ರಾಷ್ಟ್ರ ಸಂಘದ ಸ್ಥಾಪನೆಯ ಮೂಲಭೂತ ಉದ್ದೇಶವನ್ನು ಈಡೇರಿಸಲಿರುವ ಮಾರ್ಗ, ಎಲ್ಲ ದೇಶಗಳನ್ನು ಒಂದೇ ವೇದಿಕೆಗೆ ತಂದು ಎಲ್ಲ ದೇಶಗಳೊಂದಿಗೆ ಸಮಾನವಾಗಿ ವರ್ತಿಸಬೇಕು. ಯಾವುದೇ ಪೂರ್ವಗ್ರಹಗಳಿಗೆ ಗುರಿಯಾಗದೆ ಮತ್ತು ಕೆಲವು ಆಯ್ದ ಶಕ್ತಿಶಾಲಿ ದೇಶಗಳಿಗೆ ಅಧೀನರಾಗದೆ ದೇಶಗಳು ಬಾಳುವಂತಾಗಬೇಕು.

ಎಲ್ಲ ಕಾಲಗಳಲ್ಲೂ ಸಂಯುಕ್ತ ರಾಷ್ಟ್ರ ಸಂಘದ ಉದ್ದೇಶಲಕ್ಷ್ಯ ದೇಶಗಳ ಮಧ್ಯೆ ಐಕ್ಯತೆಯನ್ನೂ ಪರಸ್ಪರ ವಿಶ್ವಾಸವನ್ನೂ ಸ್ಥಾಪಿಸಿ ಜಾಗತಿಕ ಶಾಂತಿ ಒಂದು ವಾಸ್ತವಿಕ ಸ್ಥಿತಿಯಾಗಿ ಸಂಭವಿಸುವಂತೆ ಮಾಡಬೇಕು ಎಂದಾಗಿದೆ. ಅದೊಂದು ದೂರದ ಕನಸಾಗಿ ಪರಿಣಮಿಸಬಾರದು. ಇದಕ್ಕೋಸ್ಕರ ಆವಶ್ಯಕವಾದುದೇನೆಂದರೆ, ಎಲ್ಲ ದೇಶಗಳ ಹಕ್ಕುಗಳನ್ನು ಸಂಯುಕ್ತ ರಾಷ್ಟ್ರ ಸಂಘ ಗೌರವಿಸಿ ಖಾತರಿಪಡಿಸಬೇಕು. ಹಾಗೆ ಮಾಡಿದರೆ ಮಾತ್ರ ಲೋಕದ ಜನರು ದೇವಾನುಗ್ರಹಗಳಿಗೆ ಪಾತ್ರರಾಗುವರು.

ಕೋವಿಡ್–19 ಈ ಮಾರಕ ರೋಗ ಎಲ್ಲ ದೇಶಗಳ ಯುವ ಜನರಿಗೂ ವೃದ್ಧರಿಗೂ ಬಡವರಿಗೂ ಶ್ರೀಮಂತರಿಗೂ ಬಲಿಷ್ಠರಿಗೂ ಬಲಹೀನರಿಗೂ ಯಾವುದೇ ತಾರತಮ್ಯವಿಲ್ಲದೆ ಅಗಾಧ ವ್ಯಾಕುಲತೆಯನ್ನೂ ಯಾತನೆಯನ್ನೂ ಉಂಟುಮಾಡಿದೆ. ಈ ವೈರಸ್ ಮಾನವರ ತಪ್ಪು ಮಾಡುವ ಸಾಧ್ಯತೆಗಳನ್ನೂ ಬಲಹೀನತೆಗಳನ್ನೂ ಹಿರಿದಾಗಿ ಪ್ರತಿಬಿಂಬಿಸಿದೆ. ನಾಳೆ ಏನಾಗುವುದೆಂದು ನಮ್ಮ ಪೈಕಿ ಯಾರಿಗೂ ತಿಳಿಯದಾಗಿದೆ.

ಕೆಲವು ತಿಂಗಳುಗಳಿಂದ ವಿವಿಧ ದೇಶಗಳ ಸರಕಾರಗಳು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಮಹಾಮಾರಿಯನ್ನು ಬೇಗನೆ ಹತೋಟಿಗೆ ತರಲು ಮತ್ತು ನಿರ್ಮೂಲನೆ ಮಾಡಲು ಬಹಳ ಪರಿಶ್ರಮಿಸುತ್ತಿವೆ. ಸಂಯುಕ್ತ ರಾಷ್ಟ್ರ ಸಂಘ, ಜಾಗತಿಕ ಆರೋಗ್ಯ ಸಂಘಟನೆ (WHO) ಮೂಲಕ ಮಹಾಮಾರಿ ಹರಡುವುದನ್ನು ತಡೆಗಟ್ಟಲು ಮತ್ತು ಅದರ ದುಷ್ಪರಿಣಾಮಗಳಿಂದ ಪೀಡಿತರಾದವರನ್ನು ಚಿಕಿತ್ಸೆ ಮಾಡಲು ಕ್ರಮಗಳನ್ನು ಕೈಗೊಂಡಿದೆ. ರೋಗ ತಡೆಗಟ್ಟುವ ಮತ್ತು ರೋಗ ಚಿಕಿತ್ಸೆಯ ಪರಿಣಾಮಗಳು ಯಶಸ್ವಿಯಾಗಿದೆ ಮತ್ತು ಮಹಾಮಾರಿಯ ಹರಡುವಿಕೆಯನ್ನು ನಿಧಾನಗೊಳಿಸಿದೆ ಎಂಬುದು ಕೃತಜ್ಞತೆಯಿಂದ ಸ್ಮರಿಸಬಹುದಾಗಿದೆ.

ಆದಾಗ್ಯೂ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ನೇತಾರನೆಂಬ ನೆಲೆಯಲ್ಲಿ ನನ್ನ ದೃಢವಿಶ್ವಾಸದ ಬಗ್ಗೆ ನಿಮ್ಮ ಗಮನ ಹರಿಸುವುದು ನನ್ನ ಕರ್ತವ್ಯ ಮತ್ತು ಹೊಣೆಗಾರಿಕೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಈ ಮಹಾಮಾರಿಯ ಬಗ್ಗೆ ಎಲ್ಲ ದೇಶಗಳ ನಾಯಕರು ಸ್ವಲ್ಪ ಕಾಲ ಚಿಂತಿಸಬೇಕು. ಅಸಾಧಾರಣವಾಗಿ ಗಂಡಾಂತರಕಾರಿಯಾಗಿರುವ ಪರಿಸ್ಥಿತಿಯನ್ನು ಎದುರಿಸಲು ಕೇವಲ ಲೌಕಿಕ ಮಾರ್ಗಗಳನ್ನು ಮಾತ್ರ ಅವಲಂಬಿಸುವುದು ಅಸಮರ್ಪಕವೂ ಸಾಕಾಗದ್ದೂ ಆಗಿದೆ. ಎಲ್ಲ ದೇಶಗಳು ಚಿಂತಿಸಬೇಕು – ಈ ವೈರಸ್ ಇಷ್ಟು ಶೀಘ್ರವಾಗಿ ಲೋಕದಾದ್ಯಂತ ಹರಡಿ ಲೋಕದಲ್ಲಿ ಇಷ್ಟೆಲ್ಲ ಅನಾಹುತಗಳನ್ನುಂಟುಮಾಡಿ ಲೋಕವನ್ನು ಸ್ಥಗಿತಗೊಳ್ಳುವಂತೆ ಮಾಡಿದುದರ ಕಾರಣವೇನು? ಕೇವಲ ಮನುಷ್ಯನ ಪರಿಶ್ರಮದಿಂದ ಇಷ್ಟು ವ್ಯಾಪಕವಾಗಿ ದುರ್ಬಲಗೊಳಿಸುವ ಪರಿಣಾಮಗಳು ಉಂಟಾಗಲಾರವು ಎಂದು ನಾನು ದೃಢವಾಗಿ ನಂಬುತ್ತೇನೆ. ಆದುದರಿಂದ ಒಬ್ಬ ಧಾರ್ಮಿಕ ವಿಶ್ವಾಸಿಯಾದ ಒಬ್ಬ ನೇತಾರನಾದ ನಾನು ಹೀಗೆ ನಂಬುತ್ತೇನೆ: ಕಳೆದ ಕೆಲವು ವಾರಗಳಿಂದ ಸಂಭವಿಸುತ್ತಿರುವ ಕ್ಲೇಶಗಳ ಕಾರಣ ಸರ್ವಶಕ್ತನಾದ ದೇವನ ವಿಧಿ ನಿರ್ಣಯವಾಗಿದೆ. ಅದು ಮಾನವರಿಗೆ ನೀಡಲಾದ ಒಂದು ಗಂಭೀರ ಮುನ್ನೆಚ್ಚರಿಕೆಯಾಗಿದೆ – ಎಲ್ಲ ವಿಧ ಅನ್ಯಾಯ ಮತ್ತು ದೌರ್ಜನ್ಯಗಳನ್ನು ತ್ಯಜಿಸಬೇಕೆಂದು. ಈ ಮಹಾಮಾರಿ ಮಾನವರಿಗೆ ನೀಡಲಾದ ಒಂದು ಕಣ್ಣು ಕೋರೈಸುವ ಸಂದೇಶವಾಗಿದೆ – ಲೋಕದ ಜನರು ದೇವನ ಕಡೆಗೆ ಅಭಿಮುಖೀಕರಿಸಿ

ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನೂ ಸಹಜೀವಿಗಳಾದ ಮನುಷ್ಯರಿಗೆ ಸಂಬಂಧಿಸಿದ ಹಕ್ಕುಗಳನ್ನೂ ಈಡೇರಿಸಬೇಕೆಂಬ ಸಂದೇಶ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ 1889ರಲ್ಲಿ ಭಾರತದ ಖಾದಿಯಾನ್ ಎಂಬ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಸಂಘಟನೆಯಾಗಿದ್ದು ಅದರ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅವರ ಮೇಲೆ ಶಾಂತಿ ಇರಲಿ) ತಾನು ಸರ್ವಶಕ್ತನಾದ ಅಲ್ಲಾಹನಿಂದ ನಿಯೋಜಿಸಲ್ಪಟ್ಟ ಸುಧಾರಕ ಎಂದು ವಾದಿಸಿದ್ದರು. ಲೋಕದ ಜನರನ್ನು ದೇವನ ಸಮೀಪಕ್ಕೆ ತರುವುದು ಮತ್ತು ಜನರು ಒಬ್ಬರಿನ್ನೊಬ್ಬರಿಗೆ ತಮ್ಮ ಹೊಣೆಗಾರಿಕೆಗಳನ್ನೂ ಕರ್ತವ್ಯಗಳನ್ನೂ ನಿರ್ವಹಿಸುವ ಬಗ್ಗೆ ಉಪದೇಶಿಸುವುದು ಅವರಿಗೆ ನೀಡಲಾದ ದೈವಿಕ ಹೊಣೆಗಾರಿಕೆಯಾಗಿತ್ತು.

**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಅವರ ಮೇಲೆ ಅಲ್ಲಾಹನ ಶಾಂತಿ ಇರಲಿ) ಹೀಗೆ ಹೇಳಿದ್ದರು: "ಮನುಷ್ಯರ ಧಾರ್ಮಿಕ ವಿಶ್ವಾಸ ಮತ್ತು ಅವಿಶ್ವಾಸದ ಬಗ್ಗೆ ಪರಲೋಕದಲ್ಲಿ ತೀರ್ಮಾನವಾಗುವುದು. ನೈಸರ್ಗಿಕ ವಿಪತ್ತುಗಳು ಈಗ ಸಂಭವಿಸುತ್ತಿರುವುದು ಮತ್ತು ಹಿಂದಿನ ಕಾಲದಲ್ಲಿ ಜನರು ವಿಪತ್ತುಗಳ ಮೂಲಕ ನಾಶವಾದುದು ಕೇವಲ ಜನರ ಧಾರ್ಮಿಕ ಅವಿಶ್ವಾಸಗಳ ಕಾರಣದಿಂದ ಮಾತ್ರವಲ್ಲ. ಜನರ ದುರಹಂಕಾರ, ಅತಿರೇಕ ವರ್ತನೆ ಮತ್ತು ಕ್ರೌರ್ಯಗಳ ಕಾರಣದಿಂದ ಅವರು ನಾಶವಾದರು. ಫರೋವ ಚಕ್ರವರ್ತಿ ನಾಶವಾದುದು ಸಹ ಆತನ ಧಾರ್ಮಿಕ ಅವಿಶ್ವಾಸದ ಕಾರಣದಿಂದಲ್ಲ. ಆತನ ಅನ್ಯಾಯಭರಿತ ವರ್ತನೆ ಮತ್ತು ಆತನು ಮಾಡಿದ ಬರ್ಬರ ಕೃತ್ಯಗಳ ಕಾರಣದಿಂದ ಆತನು ನಾಶವಾದನು."**

ಇಷ್ಟು ಮಾತ್ರವಲ್ಲ, ನಾವು ನಮ್ಮ ಗತಕಾಲದ ಚರಿತ್ರೆಯನ್ನು ತಿಳಿದುಕೊಳ್ಳುವುದು ಮಾತ್ರ ಸಾಕಾಗಲಾರದು. ಚರಿತ್ರೆ ಕಲಿಸುವ ಪಾಠವನ್ನು ಅರಿತುಕೊಳ್ಳುವುದು ಮುಖ್ಯವಾಗಿದೆ. ನೈಸರ್ಗಿಕ ದುರಂತಗಳು, ಭೀಕರ ಅನಾಹುತಗಳು, ಮಹಾಮಾರಿಗಳು ಸಂಭವಿಸುವುದನ್ನು ಕಡೆಗಣಿಸಬಾರದು. ಅವು ದೈವಿಕ ವಿಧಿ ಪ್ರಕಾರ ಸಂಭವಿಸುತ್ತಿವೆ ಎಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಅವು ಎಲ್ಲ ವಿಧಗಳ ಅನ್ಯಾಯಗಳನ್ನು ತ್ಯಜಿಸಿ ಸೃಷ್ಟಿಕರ್ತನನ್ನು ಗುರುತಿಸುವ ಬಗ್ಗೆ ನೀಡಲಾಗುವ ಮುನ್ನೆಚ್ಚರಿಕೆ ಎಂದು ಗಣಿಸಬೇಕು. ದೇವನ ಸಂಪ್ರೀತಿ ಗಳಿಸಲು ಮತ್ತು ಅವನ ಸಾಮೀಪ್ಯ ಪಡೆಯಲು ದೇವನಿಗೆ ಸಂಬಂಧಿಸಿದ ಹಕ್ಕುಗಳನ್ನೂ ಅವನ ಸೃಷ್ಟಿಗಳಿಗೆ ಸಂಬಂಧಿಸಿದ ಹಕ್ಕುಗಳನ್ನೂ ಈಡೇರಿಸುವುದು ಆವಶ್ಯಕವಾಗಿವೆ.

ಇತ್ತೀಚೆಗೆ ಪೋಪ್ ಫ್ರಾನ್ಸಿಸ್ ಬಹಿರಂಗವಾಗಿ ತನ್ನ ಭಯವನ್ನು ಪ್ರಕಟಿಸಿ ಹೇಳಿದರು: ಮಾನವರ ವರ್ತನೆ ಬಗ್ಗೆ ದೇವನು ತೃಪ್ತನಾಗಿರುವನೋ ಎಂದು ಕೇಳಿದರೆ ದೇವನು ತನ್ನ ಅತೃಪ್ತಿಯನ್ನು ಸೂಚಿಸಿ ಪ್ರತಿಕ್ರಿಯೆ ನೀಡುವನು ಎಂದು. ನೈಸರ್ಗಿಕ ದುರಂತಗಳು ಇಂದಿನ ಲೋಕದ ತಪ್ಪುಗಳಿಗೆ ಮತ್ತು ನಿರ್ಲಕ್ಷ್ಯತೆಗಳಿಗಿರುವ ಪ್ರತಿಕ್ರಿಯೆ ಆಗಿದೆ ಎಂದು ಅವರು ಸೂಚಿಸಿದರು. ನಾನು ಈ ಅಭಿಪ್ರಾಯದೊಂದಿಗೆ ಒಮ್ಮತ ಹೊಂದಿದ್ದೇನೆ. ಜಾಗತಿಕ ನಾಯಕರು, ಸರಕಾರಗಳು ಮತ್ತು ಜನರು ನಮ್ಮ ಮುಂದಿರುವ ಈ ಕಠಿಣ ವಾಸ್ತವಿಕತೆಯ ಬಗ್ಗೆ ತೀವ್ರವಾಗಿ ಗಮನಹರಿಸುವುದು ಅತ್ಯಾವಶ್ಯಕವಾಗಿದೆ.

ಕೋವಿಡ್–19 ಲೋಕದ ಆರ್ಥಿಕ ವ್ಯವಸ್ಥೆಯನ್ನು ತೀವ್ರವಾಗಿ ಬಾಧಿಸಿದೆ ಎಂಬುದು ನಿರ್ವಿವಾದ ವಿಷಯವಾಗಿದ್ದು ಮುಂದಿನ ವಾರಗಳು, ತಿಂಗಳುಗಳು ಮತ್ತು ವರ್ಷಗಳು ಅತ್ಯಂತ ಹಾನಿಕರವೂ ಪಂಥಾಹ್ವಾನ ನೀಡುವುದೂ ಆಗುವುವು. ಕೆಲವು ತಿಂಗಳುಗಳ ನಂತರ ಲೋಕದ ಸ್ಥಿತಿ ಎಷ್ಟು ವಿಷಮಕರವಾಗುವುದೆಂಬುದರ ಬಗ್ಗೆ ನಿಶ್ಚಯವಾಗಿಯೂ ಬಹುತೇಕ ಜನರಿಗೆ ಇಷ್ಟರ ತನಕ ಪೂರ್ಣವಾಗಿ ಮನವರಿಕೆಯಾಗಿಲ್ಲ. ಚರಿತ್ರೆ ನಮಗೆ ಕಲಿಸುವ ಪಾಠ ಇದಾಗಿದೆ: ಸರಕಾರಗಳು ತಮ್ಮ ಹಿತಾಸಕ್ತಿಗೆ ಲೋಕದ ದೇಶಗಳ ಸಾಮೂಹಿಕ ಹಿತಾಸಕ್ತಿಯ ಮೇಲೆ ಆದ್ಯತೆ ನೀಡುವಾಗ ಅದರ ಪರಿಣಾಮ ಅನಿವಾರ್ಯವಾಗಿ ದುರಂತಮಯವಾಗುತ್ತದೆ. ಅನಿವಾರ್ಯವಾಗಿ ಆರ್ಥಿಕ ಅಥವಾ ವಾಣಿಜ್ಯ ಸಮರಗಳು ಪ್ರಾರಂಭವಾಗುತ್ತವೆ. ಅದರಿಂದ ದ್ವೇಷವೂ ಹಗೆತನವೂ ಪೋಷಿಸಲ್ಪಟ್ಟು ಕೊನೆಗೆ ಬಹಿರಂಗ ಸಂಗ್ರಾಮಗಳು ಮತ್ತು ರಕ್ತಪಾತ ಮಾಡುವ ಸಂಘರ್ಷಗಳು ಪ್ರಾರಂಭವಾಗಿ ಊಹಿಸಲಾಗದಂತಹ ವಿಧ್ವಂಸಕಾರಿ ಆಯುಧಗಳು ಬಳಸಲ್ಪಡುತ್ತವೆ.

ಆದುದರಿಂದ ವಿನಯದಿಂದಲೂ ಪ್ರಾಮಾಣಿಕವಾಗಿಯೂ ಸಂಯುಕ್ತ ರಾಷ್ಟ್ರ ಸಂಘದ ಸೆಕ್ರೆಟರಿ ಜನರಲ್ ಆಗಿರುವ ತಮ್ಮೊಂದಿಗೆ ಅಪೇಕ್ಷಿಸುತ್ತೇನೆ – ನ್ಯಾಯನಿಷ್ಠೆಯ ಅಸ್ತಿಭಾರ ಹೊಂದಿದ ಮತ್ತು ಎಲ್ಲ ದೇಶಗಳ ಹಕ್ಕುಗಳನ್ನು ಎತ್ತಿ ಹಿಡಿಯುವ ಧೋರಣೆಗಳನ್ನು ರೂಪಿಸಿ ಲೋಕವನ್ನು ಇನ್ನಷ್ಟು ಯಾತನೆಗಳಿಂದಲೂ ವಿನಾಶಗಳಿಂದಲೂ ರಕ್ಷಿಸಬೇಕೆಂದು.

ನೀವು ನನ್ನ ಶ್ರದ್ಧಾಪೂರ್ವಕವಾದ ಅಪೇಕ್ಷೆಯನ್ನು ಗಂಭೀರವಾಗಿ ಗಮನಿಸುವಿರಾಗಿ ನಾನು ಭರವಸೆ ಹೊಂದಿರುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ. ಲೋಕಶಾಂತಿಗೋಸ್ಕರ ಎಲ್ಲ ಪಕ್ಷಗಳ ಹಕ್ಕುಗಳನ್ನು ಗೌರವಿಸುವ, ಆರ್ಥಿಕ, ಭೌಗೋಳಿಕ ಮತ್ತು ರಾಜಕೀಯ ಧೋರಣೆಗಳನ್ನು ಎಲ್ಲ ಜನರು ಮತ್ತು ದೇಶಗಳು ಐಕ್ಯಗೊಂಡು ಲಾಭ ಪಡೆಯುವಂತೆ ರೂಪಿಸಲು ನಿಮ್ಮ ಪಾತ್ರ ನಿರ್ವಹಿಸುವವರಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಸರ್ವಶಕ್ತನಾದ ಅಲ್ಲಾಹನು ನಿಮಗೆ ಮತ್ತು ಇತರ ಜಾಗತಿಕ ನಾಯಕರಿಗೆ ಸಾಮರ್ಥ್ಯವನ್ನು ದಯಪಾಲಿಸಲಿ – ಮಾನವರ ಏಳಿಗೆಗೆ ಪ್ರಯತ್ನಿಸಲು ಮತ್ತು ನಮ್ಮ ಮುಂದಿನ ಪೀಳಿಗೆಗೆ ಶಾಂತಿಯ ಮತ್ತು ಸಮೃದ್ಧಿಯ ಬಳುವಳಿಯನ್ನು ಬಿಟ್ಟು ಹೋಗಲಿಕ್ಕೆ ಸಾಧ್ಯವಾಗಲು.

ಶುಭಾಶಯಗಳು ಮತ್ತು ಪ್ರಾರ್ಥನೆಗಳೊಂದಿಗೆ
ಪ್ರಾಮಾಣಿಕವಾಗಿ

**ಮಿರ್ಝಾ ಮಸ್‌ರೂರ್ ಅಹ್ಮದ್ V**
**ಖಲೀಫತುಲ್ ಮಸೀಹ್**
**ಹೆಡ್ ಆಫ್ ದಿ ವರ್ಲ್ಡ್ ವೈಡ್ ಅಹ್ಮದಿಯಾ ಮುಸ್ಲಿಮ್ ಕಮ್ಯೂನಿಟಿ**

# ಪವಿತ್ರ ಖುರ್‌ಆನ್ ಬಗ್ಗೆ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪತ್ರಿಕಾ ಪ್ರಕಟಣೆ

**ಪವಿತ್ರ ಖುರ್‌ಆನಿನ 26 ವಚನಗಳು ಹಿಂಸಾಚಾರವನ್ನೂ ಉಗ್ರವಾದವನ್ನೂ ಕಲಿಸುತ್ತಿವೆ ಎಂದು ದೂಷಿಸುವುದು ಆ ವಚನಗಳ ವಾಸ್ತವಿಕ ಅರ್ಥವನ್ನು ಗ್ರಹಿಸದುದರಿಂದಾಗಿದೆ.**

ಪವಿತ್ರ ಖುರ್‌ಆನಿನ 26 ವಚನಗಳನ್ನು ಕಿತ್ತುಹಾಕಬೇಕೆಂದು ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ದಾಖಲಿಸಿರುವುದು ಸಾರ್ವಜನಿಕ ಹಿತಾಸಕ್ತಿಯಿಂದಲ್ಲ. ಅದರ ಉದ್ದೇಶ ದೇಶದಲ್ಲಿ ಶಾಂತಿ ಭಂಗವನ್ನುಂಟುಮಾಡುವುದಾಗಿದೆ. ಪವಿತ್ರ ಖುರ್‌ಆನಿನ 26 ವಚನಗಳು ಹಿಂಸಾಚಾರವನ್ನೂ ಉಗ್ರವಾದವನ್ನೂ ಕಲಿಸುತ್ತಿವೆ ಎಂದು ದೂಷಿಸುವುದು ಆ ವಚನಗಳ ವಾಸ್ತವಿಕ ಅರ್ಥವನ್ನು ಗ್ರಹಿಸದುದರಿಂದಾಗಿದೆ.

ಪವಿತ್ರ ಖುರ್‌ಆನಿನ ವಿರುದ್ಧ ಮಾಡುತ್ತಿರುವ ಆಪಾದನೆಯನ್ನು ಭಾರತದ ಅಹ್ಮದಿಯಾ ಮುಸ್ಲಿಮ್ ಜಮಾಅತ್ ತೀವ್ರವಾಗಿ ಖಂಡಿಸುತ್ತದೆ ಮತ್ತು ಆ ವಚನಗಳ ನೈಜ ಅರ್ಥವನ್ನು ಮನವರಿಕೆ ಮಾಡಲು ತಮ್ಮ ಬಳಿಗೆ ಬರಬೇಕೆಂದು ಒತ್ತಾಯಿಸುತ್ತದೆ.

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಸ್ಪಷ್ಟವಾಗಿ ನಂಬುವುದೇನೆಂದರೆ, ಪವಿತ್ರ ಖುರ್‌ಆನಿನ ಯಾವುದೇ ಅಧ್ಯಾಯ, ವಚನ, ಅಕ್ಷರ ಅಥವಾ ವಿರಾಮ ಚಿಹ್ನೆಯನ್ನು ಕೂಡ ಬಿಟ್ಟುಬಿಡಲು ಸಾಧ್ಯವಿಲ್ಲ. ಪವಿತ್ರ ಖುರ್‌ಆನಿನ ಉಪದೇಶಗಳು ಎಲ್ಲ ಕಾಲಗಳಿಗೂ ಎಲ್ಲ ಸ್ಥಳಗಳಿಗೂ ಅನ್ವಯಿಸುವಂತಹದಾಗಿದ್ದು ಅವು ಮನುಷ್ಯರನ್ನು ನೇರವಾದ ಮಾರ್ಗದಲ್ಲಿ ಚಲಿಸಲು ಮಾರ್ಗದರ್ಶನ ನೀಡುತ್ತವೆ.

ಪವಿತ್ರ ಖುರ್‌ಆನ್ ಸರ್ವಶಕ್ತನಾದ ಅಲ್ಲಾಹನ ವಚನವಾಗಿದೆ. ಅದರಲ್ಲಿ ಮಾನವರ ಹಿತಕ್ಕೋಸ್ಕರ ಉಪದೇಶಗಳಿವೆ. ಅಂತರ್ ಧರ್ಮೀಯ ಐಕ್ಯತೆ ಮತ್ತು ಮಾನವರ ಬಗ್ಗೆ ಅನುಕಂಪದೋರುವ ಆಜ್ಞೆಗಳು ಅದರಲ್ಲಿ ಅಡಕವಾಗಿದ್ದು ನ್ಯಾಯ ಪರಿಪಾಲನೆ ಮತ್ತು ಶಿಸ್ತನ್ನೂ ಜಾಗತಿಕ ಶಾಂತಿಯನ್ನೂ ಖಾತರಿ ನೀಡುತ್ತದೆ.

ಕೆಲವು ಭಯೋತ್ಪಾದಕ ಗುಂಪುಗಳು ಪವಿತ್ರ ಖುರ್‌ಆನಿನ ಕೆಲವು ವಚನಗಳನ್ನು ತಮ್ಮ ಸ್ವಾರ್ಥ ಲಾಭಕ್ಕೋಸ್ಕರ ಮತ್ತು ಲೋಕದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸಲು ದುರುಪಯೋಗಪಡಿಸುತ್ತಾರಾದರೂ ಪವಿತ್ರ ಖುರ್‌ಆನಿನ ವಿರುದ್ಧ ಆಪಾದನೆ ಮಾಡುವುದು ಯಾವುದೇ ರೀತಿಯಲ್ಲಿಯೂ ಸಮರ್ಥನೀಯವಲ್ಲ.

ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: ಒಬ್ಬ ನಿರಪರಾಧಿಯನ್ನು ಹತ್ಯೆ ಮಾಡಿದರೆ ಅದು ಮಾನವರೆಲ್ಲರನ್ನು ಹತ್ಯೆ ಮಾಡಿದುದಕ್ಕೆ ಸಮವಾದ ಅಪರಾಧ. ಇಸ್ಲಾಮ್ ಶಾಂತಿ ಮತ್ತು ಭದ್ರತೆ ಸ್ಥಾಪಿಸುವ ಬಗ್ಗೆ ಆದ್ಯತೆ ನೀಡುತ್ತದೆ. ಜೀವ ಹತ್ಯೆಯನ್ನು ಅದು ಒಪ್ಪುವುದಿಲ್ಲ. ಪವಿತ್ರ ಖುರ್‌ಆನನ್ನು ಪರಿಶುದ್ಧ ಹೃದಯದಿಂದಲೂ ಆತ್ಮಶುದ್ಧಿಯೊಂದಿಗೂ ಅಧ್ಯಯನ ಮಾಡುವುದಾದರೆ ಸರ್ವಶಕ್ತನಾದ ದೇವನೇ ಸ್ವತಃ ಆ ವಚನಗಳ ಅರ್ಥವನ್ನು ಮನವರಿಕೆ ಮಾಡಿಕೊಡುವನು.

ಪವಿತ್ರ ಖುರ್‌ಆನಿನ ಅಕ್ಷರಗಳನ್ನೂ ಅರ್ಥವನ್ನೂ ಸಂರಕ್ಷಿಸುವ ಹೊಣೆಗಾರಿಕೆಯನ್ನು ಸರ್ವಶಕ್ತನಾದ ದೇವನು ಸ್ವತಃ ವಹಿಸಿಕೊಂಡಿದ್ದಾನೆ. ಪವಿತ್ರ ಖುರ್‌ಆನಿನ ವಚನಗಳು ಕಳೆದ ಹದಿನಾಲ್ಕು ನೂರು ವರ್ಷಗಳಿಗಿಂತ ಹೆಚ್ಚಿನ ಕಾಲದಿಂದ ಮಿಲಿಯಗಟ್ಟಲೆ ಜನರ ಹೃದಯಗಳಲ್ಲಿ ಸಂರಕ್ಷಿಸಲ್ಪಟ್ಟಿವೆ. ಅದರ ಒಂದೇ ಒಂದು ಅಕ್ಷರವಾಗಲಿ, ವಿರಾಮ ಚಿಹ್ನೆಯಾಗಲಿ ಬದಲಾವಣೆಗೆ ಈಡಾಗಿಲ್ಲ ಎಂದು ಎಲ್ಲ ಮುಸ್ಲಿಮರು ಅಂಗೀಕರಿಸುತ್ತಾರೆ.

ಪವಿತ್ರ ಖುರ್‌ಆನಿನ ಆಧ್ಯಾತ್ಮಿಕ ರಕ್ಷಣೆಗೋಸ್ಕರ ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಂದು ಕಾಲಘಟ್ಟದಲ್ಲಿ ಆಧ್ಯಾತ್ಮಿಕ ಪ್ರಕಾಶ ಗಳಿಸಿದ ಮಹಾನುಭಾವರನ್ನು ನಿಯೋಜಿಸುತ್ತಾ ಇದ್ದನು. ಅವನು ಈ ಕಾಲಘಟ್ಟದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಅವರನ್ನು ನಿಯೋಜಿಸಿರುವನು. ಅವರ ಮೂಲಕ ಅಲ್ಲಾಹನು ಪವಿತ್ರ ಖುರ್‌ಆನಿನ ಬಗ್ಗೆ ಜನರು ಹೊಂದಿದ್ದ ತಪ್ಪು ಗ್ರಹಿಕೆಗಳನ್ನು ನಿವಾರಿಸಿರುವನು ಮತ್ತು ಪವಿತ್ರ ಖುರ್‌ಆನಿನ ವೈಭವವನ್ನು ಲೋಕದಲ್ಲಿ ಪುನಃ ಸ್ಥಾಪಿಸಿರುವನು.

ನಮ್ಮ ದೇಶವಾದ ಭಾರತದಲ್ಲಿ ಅನೇಕ ಧರ್ಮಗಳ ಮತ್ತು ವಿಶ್ವಾಸಗಳ ಜನರು ವಾಸಿಸುತ್ತಿದ್ದಾರೆ. ಇಲ್ಲಿ ಪ್ರತಿಯೊಬ್ಬನಿಗೆ ಧಾರ್ಮಿಕ ಸ್ವಾತಂತ್ರ್ಯವಿದೆ. ಪ್ರತಿಯೊಬ್ಬ ನಾಗರಿಕನು ತನ್ನ ಸಹಜೀವಿಗಳಾದ ಜನರ ಧಾರ್ಮಿಕ ಭಾವನೆಗಳ ಬಗ್ಗೆ ಕಾಳಜಿ ಹೊಂದಿದ್ದು ಎಲ್ಲ ಧರ್ಮಗಳ ಧಾರ್ಮಿಕ ನಾಯಕರನ್ನೂ ಹಿರಿಯರನ್ನೂ ಅವರ ಧಾರ್ಮಿಕ ಗ್ರಂಥಗಳನ್ನೂ ಗೌರವಿಸುತ್ತಾನೆ. ನಮ್ಮ ದೇಶದ ಶಾಂತಿ ಮತ್ತು ಸುವ್ಯವಸ್ಥೆಗೆ ಇದು ಅಸ್ತಿಭಾರವಾಗಿದೆ. ಆದರೆ ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ಅನ್ಯರ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟುಮಾಡುವುದು ಅನುಚಿತವಾಗಿದೆ. ಅಂತಹ ಜನರು ಪವಿತ್ರ ಖುರ್‌ಆನನ್ನು ದೂಷಿಸುವ ಮೊದಲು ಅದನ್ನು ಅಧ್ಯಯನ ಮಾಡಲು ಪರಿಶ್ರಮಿಸಬೇಕೆಂದು ಅಪೇಕ್ಷಿಸುತ್ತೇವೆ. ಹೆಚ್ಚಿನ ಮಾಹಿತಿಗೆ: Pressamjindia@gmail.com (ದಿನಾಂಕ: 19–3–2021).

ಪ್ರಕಟಿಸಿದವರು: **Office Press & Media**
**Ahmadiyya Muslim Jama'at India**
**Qadian - 143516**

# ಮೌಲಾನಾ ಮುಹಮ್ಮದ್ ಉಮರ್ ಸಾಹಿಬ್



ಖಾದಿಯಾನ್: ಜನಾಬ್ ಮೌಲಾನಾ ಮುಹಮ್ಮದ್ ಉಮರ್ ಸಾಹಿಬರು 21–1–2021ರಂದು ತನ್ನ 87ನೇ ವಯಸ್ಸಿನಲ್ಲಿ ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ಮೌಲಾನಾ ಉಮರ್ ಸಾಹಿಬ್ 1955ರಲ್ಲಿ ಖಾದಿಯಾನಿನ ಮದ್ರಸ ಅಹ್ಮದಿಯಾದಲ್ಲಿ ಪ್ರವೇಶಿಸಿದರು. 1961ರಲ್ಲಿಮೌಲವಿ ಫಾಝಿಲ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. 1962 ಮೊದಲ್ಗೊಂಡು ಪ್ರಚಾರ ರಂಗದಲ್ಲಿ ಸೇವೆ ಆರಂಭಿಸಿದರು. ಭಾರತದ ದೊಡ್ಡ ದೊಡ್ಡ ನಗರಗಳಲ್ಲಿ ಅವರು ಸೇವೆ ಸಲ್ಲಿಸಿದ್ದಾರೆ.

ಯಾದ್‌ಗೀರ್ ಸಂವಾದದಲ್ಲಿ ಅವರು ಭಾಗವಹಿಸಿದ್ದರು. ಕೊಯಂಬತ್ತೂರ್‌ನಲ್ಲಿ 9 ದಿವಸಗಳ ಕಾಲ ನಡೆದ ಚರಿತ್ರೆ ಪ್ರಸಿದ್ಧವಾದ ಸಂವಾದದಲ್ಲೂ ಅವರು ಪಾಲುಗೊಂಡಿದ್ದರು. ಸುಮಾರು ಒಂದು ವರ್ಷ ಕಾಲ ಫೆಲಸ್ತೀನದಲ್ಲಿ ಸೇವೆ ಸಲ್ಲಿಸಲು ಅವರಿಗೆ ಸೌಭಾಗ್ಯ ಲಭಿಸಿದೆ. ಪವಿತ್ರ ಖುರ್‌ಆನಿನ ತಮಿಳು ಭಾಷಾಂತರ, ಹಝ್ರತ್ ಮಸೀಹ್ ಮೌಊದ್‌ರವರ(ಅ) ಅನೇಕ ಕೃತಿಗಳು ಮತ್ತು ಇನ್ನಿತರ ಪುಸ್ತಕಗಳನ್ನು ಅವರು ತಮಿಳಿಗೆ ಭಾಷಾಂತರಿಸಿದ್ದಾರೆ. ಅವರು ನಾಝಿರ್ ಇಸ್ಲಾಹೋ ಇರ್ಶಾದ್, ತಅ್‌ಲೀಮುಲ್ ಖುರ್‌ಆನ್ ವಖ್ಫೆ ಆರ್‌ಝಿ, ನಾಇಬ್ ನಾಝಿರ್ ಅಅ್‌ಲಾ ಆಗಿ ಬಹಳ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ.

ಮದ್ರಸ ಅಹ್ಮದಿಯಾದಿಂದ ಪಾಸಾದ ನಂತರ 53 ವರ್ಷಗಳ ಕಾಲ ಜಮಾಅತಿನ ಸೇವೆ ಮಾಡಲು ಅವರಿಗೆ ಸೌಭಾಗ್ಯ ಲಭಿಸಿತು. ಅವರ ಸಂತಪ್ತ ಕುಟುಂಬದಲ್ಲಿ ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಇದ್ದಾರೆ.

ಹಝ್ರತ್ ಮಸೀಹ್ ಮೌಊದ್‌ರವರ(ಅ) ನಾಲ್ಕು ಗ್ರಂಥಗಳನ್ನು ಮೌಲಾನಾ ಸಾಹಿಬರು ಭಾಷಾಂತರಿಸಿದ್ದಾರೆ. ವಿವಿಧ ವಿಷಯಗಳಲ್ಲಿ ಏಳು ಪುಸ್ತಕಗಳನ್ನು ತಮಿಳು ಭಾಷೆಯಲ್ಲಿ ರಚಿಸಿದ್ದಾರೆ. "ಸಮಾಧಾನ ವಝಿ" ಎಂಬ ತಮಿಳು ಮಾಸಿಕದ ಸಂಪಾದಕರಾಗಿ ಅವರು ಸೇವೆ ಸಲ್ಲಿಸಿದ್ದಾರೆ. ಅವರು "ಯುಗರಶ್ಮಿ" ತ್ರೈಮಾಸಿಕದ ಹಿತೈಷಿಯೂ ಅಭಿಮಾನಿಯೂ ಆಗಿದ್ದರು.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ಅನುಗ್ರಹಿಸಲಿ – ಆಮೀನ್.

# ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್



ಖಾದಿಯಾನ್: ಜನಾಬ್ ಮೌಲವಿ ಮುಹಮ್ಮದ್ ನಜೀಬ್ ಖಾನ್ ಸಾಹಿಬ್ ತನ್ನ 55ನೇ ವಯಸ್ಸಿನಲ್ಲಿ 14–2–2021ರಂದು ನಿಧನರಾದರು. ("ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್").

ತನ್ನ 18ನೇ ವಯಸ್ಸಿನಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದ ಅವರು ಖಾದಿಯಾನಿನ ಮದ್ರಸ ಅಹ್ಮದಿಯಾದಲ್ಲಿ ಕಲಿತು ತೇರ್ಗಡೆ ಹೊಂದಿದರು. ಅವರು ಚಂಡೀಗಢ್, ಅಂಡಮಾನ್ ನಿಕೋಬಾರ್, ದೆಹಲಿ, ಕೊಲ್ಲಂ, ತಿರುವನಂತಪುರ, ಕಾಕ್ಕನಾಡ್, ಆಲಪ್ಪಿ ಎಂಬೆಡೆಗಳಲ್ಲಿ ಮುಬಲ್ಲಿಗ್ ಆಗಿ ಸೇವೆ ಸಲ್ಲಿಸಿದ್ದಾರೆ. ಅಂಡಮಾನಿನಲ್ಲಿ ಮಸೀದಿ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಿದ್ದರು. ಆಲಪ್ಪಿಯಲ್ಲಿ ಸಹ ಮಸೀದಿ ನಿರ್ಮಾಣ ಕಾರ್ಯದಲ್ಲಿ ಅವರು ತುಂಬಾ ಮುತುವರ್ಜಿ ವಹಿಸಿದ್ದರು. ಅಹ್ಮದಿಯರ ವಿವಾಹ ಸಂಬಂಧಿತ ವಿಚಾರಗಳಲ್ಲೂ ಕುಟುಂಬ ಸಮಸ್ಯೆಗಳನ್ನು ಪರಿಹರಿಸುವುದರಲ್ಲೂ ಅವರು ಆಸಕ್ತರಾಗಿದ್ದರು.

ಜಮಾಅತಿನ ನಿಯತಕಾಲಿಕಗಳಲ್ಲಿ ಅವರು ಲೇಖನ ಬರೆಯುತ್ತಿದ್ದರು. ಅಲ್‌ವಸಿಯ್ಯತ್, ತಜಲಿಯಾತೆ ಇಲಾಹಿಯ್ಯ, ಇರ್ಫಾನೆ ಇಲಾಹಿ ಎಂಬೀ ಪುಸ್ತಕಗಳನ್ನು ಅವರು ಮಲಯಾಳಕ್ಕೆ ಭಾಷಾಂತರಿಸಿದ್ದಾರೆ. ಕೇರಳದ ಅಹ್ಮದೀ ಮಕ್ಕಳಿಗೆ ವಖ್ಫೆ ನೌ ಸಿಲೆಬಸನ್ನು ಆಧಾರವಾಗಿರಿಸಿ ನಿಸಾಬೆ ತಅ್‌ಲೀಂ ಎಂಬ ಮದ್ರಸ ಪಾಠ ಪುಸ್ತಕಗಳನ್ನು ಅವರು ಸಿದ್ಧಪಡಿಸಿದ್ದಾರೆ. ಯಸ್ಸರ್‌ನಲ್ ಖುರ್‌ಆನನ್ನು ಮಲಯಾಳಕ್ಕೆ ತರ್ಜುಮೆ ಮಾಡಿದ್ದಾರೆ. 'ವಖ್ಫೆ ನೌ ಯೋಜನೆ ಮತ್ತು ನಮ್ಮ ಹೊಣೆಗಾರಿಕೆಗಳು' ಎಂಬ ಶೀರ್ಷಿಕೆಯಲ್ಲಿ ಖಲೀಫರ ಖುತ್‌ಬಗಳನ್ನು ಕ್ರೋಢೀಕರಿಸಿದ್ದಾರೆ.

ದಅ್‌ವತೆ ಇಲಲ್ಲಾಹ್ ಕೇರಳ ಇನ್‌ಚಾರ್ಜ್ ಮತ್ತು ನೂರುಲ್ ಇಸ್ಲಾಂ ನಾಇಬ್ ಸದರ್ ಆಗಿ ಅವರು ಸೇವೆ ಸಲ್ಲಿಸಿದರು. ನಿಧನರಾಗುವಾಗ ಅವರು ದಅ್‌ವತೆ ಇಲಲ್ಲಾಹ್ ನಾಇಬ್ ನಾಝಿರ್ ಎಂಬ ಹುದ್ದೆಯಲ್ಲಿದ್ದರು. ಅವರು ಪತ್ನಿಯನ್ನೂ ಮೂವರು ಪುತ್ರರನ್ನೂ ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್ಫಿರತನ್ನೂ ಜನ್ನತನ್ನೂ ದಯಪಾಲಿಸಲಿ – ಆಮೀನ್.

## ಹಳೆಯ 'ಸೂಪರ್ ಅರ್ಥ್' ಪತ್ತೆ

**ನ್ಯೂಯಾರ್ಕ್:** ಭೂಮಿಯ ಗಾತ್ರಕ್ಕಿಂತ ಶೇ.50ರಷ್ಟು ದೊಡ್ಡದಾಗಿರುವ ಮತ್ತು 3 ಪಟ್ಟು ಹೆಚ್ಚು ದ್ರವ್ಯರಾಶಿ ಹೊಂದಿರುವ 1000 ಕೋಟಿ ವರ್ಷಗಳಷ್ಟು ಹಳೆಯ ಬಾಹ್ಯಗ್ರಹ (ಸೌರವ್ಯೂಹದಾಚೆಗೆ ನಕ್ಷತ್ರವೊಂದರ ಕಕ್ಷೆಯಲ್ಲಿ ಪರಿಭ್ರಮಿಸುವ ಗ್ರಹ)ವನ್ನು ನಾಸಾದ ಉಪಗ್ರಹವೊಂದು ಪತ್ತೆ ಹಚ್ಚಿದೆ. ಈ ಗ್ರಹವು ಭೂಮಿಯಷ್ಟೇ ಸಾಂದ್ರತೆಯನ್ನು ಹೊಂದಿದೆ. ಅದರ ಗುಣವಿಶೇಷಗಳ ಆಧಾರದಲ್ಲಿ ಈ ಗ್ರಹವನ್ನು 'ಸೂಪರ್ ಅರ್ಥ್' ಎಂದು ಕರೆಯಲಾಗಿದೆ. ಮಿಲ್ಕೀ ವೇ ನಕ್ಷತ್ರ ಪುಂಜದಲ್ಲಿರುವ ಪುರಾತನ ನಕ್ಷತ್ರವೊಂದರ ಕಕ್ಷೆಯಲ್ಲಿ ಸುತ್ತುತ್ತಿರುವ ನಾಸಾದ ಟ್ರಾನ್ಸಿಟಿಂಗ್ ಎಕ್ಸೋಪ್ಲಾನೆಟ್ ಸರ್ವೇ ಸ್ಯಾಟಲೆಟ್ (ಟೆಸ್) ಇದನ್ನು ಪತ್ತೆ ಹಚ್ಚಿದೆ. **(ಉದಯವಾಣಿ 19–1–2021)**

==========================================================

## ಕೊಕೇನ್ ಸಾಗಣೆ: ಬಿಜೆಪಿ ನಾಯಕಿ ಸೆರೆ

**ಕೋಲ್ಕತಾ:** ಪಶ್ಚಿಮ ಬಂಗಾಲದ ಬಿಜೆಪಿ ಯುವ ಘಟಕದ ನಾಯಕಿ ಪಮೇಲಾ ಗೋಸ್ವಾಮಿ ಅವರು ಮಾದಕ ದ್ರವ್ಯ ಸಾಗಣೆ ವೇಳೆ ಸಿಕ್ಕಿಬಿದ್ದಿದ್ದಾರೆ. ಬಂಗಾಲ ಬಿಜೆಪಿ ಯುವ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿರುವ ಪಮೇಲಾ ಅವರ ಪರ್ಸ್‌ನಲ್ಲಿ ಮತ್ತು ಕಾರಿನಲ್ಲಿ ಕೆಲವು ಲಕ್ಷ ಮೌಲ್ಯದ 100 ಗ್ರಾಂ.ನಷ್ಟು ಕೊಕೇನ್ ಪತ್ತೆಯಾಗಿದೆ. ಪಮೇಲಾ ಜತೆಗೆ ಕಾರಿನಲ್ಲಿ ಸಂಚರಿಸುತ್ತಿದ್ದ ಯುವ ಮೋರ್ಚಾದ ಮತ್ತೊಬ್ಬ ನಾಯಕ ಪ್ರಬೀರ್ ಕುಮಾರ್ ದೇವ್‌ರನ್ನೂ ಬಂಧಿಸಲಾಗಿದೆ. **(ಉದಯವಾಣಿ 21–2–2021)**

==========================================================

## ಟ್ವಿಟರ್‌ನಲ್ಲಿ 'ರಿಪ್ಡ್ ಜೀನ್ಸ್' ಹವಾ

**ಹೊಸದಿಲ್ಲಿ:** ಫ್ಯಾಶನ್ ಹೆಸರಿನಲ್ಲಿ ಹರಿದ ಜೀನ್ಸ್ ಪ್ಯಾಂಟ್‌ಗಳನ್ನು (ರಿಪ್ಡ್ ಜೀನ್ಸ್) ತೊಡುವುದು ಸರಿಯಲ್ಲ ಎಂದಿರುವ ಉತ್ತರಾಖಂಡ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್ ವಿರುದ್ಧ ಟ್ವಿಟರ್‌ನಲ್ಲಿ ಅಭಿಯಾನವೇ ಶುರುವಾಗಿದೆ. ಸಾಕಷ್ಟು ಮಹಿಳೆಯರು ತಮ್ಮಲ್ಲಿನ ಹರಿದ ಜೀನ್ಸ್ ಪ್ಯಾಂಟ್‌ಗಳನ್ನು ತೊಟ್ಟು ಅದರ ಫೋಟೋಗಳನ್ನು ಅಪ್‌ಲೋಡ್ ಮಾಡುವ ಮೂಲಕ ಸಿಎಂ ವಿರುದ್ಧ ತಮ್ಮ ಅಸಮಾಧಾನ ಹೊರಹಾಕಿದ್ದಾರಲ್ಲದೆ, ತೀರಥ್ ಅವರು ತಮ್ಮ ಮನಃಸ್ಥಿತಿಯನ್ನು ಬದಲಿಸಿಕೊಳ್ಳಲಿ ಎಂದು ಅವರು ಆಗ್ರಹಿಸಿದ್ದಾರೆ.

**(ಉದಯವಾಣಿ 19–3–2021)**

==========================================================

## ಕಾಸರಗೋಡಿನ ಹುಡುಗಿಗೆ 13 ಚಿನ್ನ

ಒಟ್ಟು 13 ಚಿನ್ನ ಪಡೆದ ಅಸ್ಮಥ್ ಶರ್ಮಿನ್ ಟಿ.ಎಸ್. ಕೇರಳದ ಕಾಸರಗೋಡಿನವರು. ತಂದೆ ಶರೀಫ್ ಟಿ.ಎ. ಉದ್ಯೋಗಿಯಾಗಿದ್ದು, ತಾಯಿ ಶಹೀದಾ ಕೆ.ಎಚ್. ಗೃಹಿಣಿ. ಸಹೋದರ ದುಬೈಯಲ್ಲಿ ಎಂಜಿನಿಯರ್ ಆಗಿದ್ದು, ಸಹೋದರಿ ಫಾರ್ಮಾಸಿಸ್ಟ್ ಆಗಿದ್ದಾರೆ.

ಮೊದಲಿನಿಂದಲೂ ಕಷ್ಟಪಟ್ಟು ಓದುತ್ತಿದ್ದೆ. ಇಂಗ್ಲಿಷ್ ಮಾಧ್ಯಮದಲ್ಲಿಯೇ ಓದಿದ್ದು, ಕನ್ನಡ ಗೊತ್ತಿಲ್ಲ. ಸ್ನಾತಕೋತ್ತರ ಪದವಿ ಬಗ್ಗೆ ಯೋಚಿಸಿಲ್ಲ. ಸದ್ಯ ಉದ್ಯೋಗಕ್ಕೆ ಸೇರಬೇಕೆಂದಿದ್ದೇನೆ. ತನ್ನ ಸಾಧನೆಗೆ ಪೋಷಕರು, ಉಪನ್ಯಾಸಕರು, ಸ್ನೇಹಿತರ ಸಹಕಾರ ಬಹಳಷ್ಟಿದೆ ಎಂದು ಅಸ್ಮಥ್ ಹೇಳಿದಳು. **(ಉದಯವಾಣಿ 4–4–2021)**

==========================================================

## ಅಮೆರಿಕ ಸೇನೆಗೆ ಮಹಿಳಾ ಮುಸ್ಲಿಂ ಆಧ್ಯಾತ್ಮ ಗುರು



**ವಾಷಿಂಗ್ಟನ್:** ಭಾರತೀಯ ಮೂಲದ ಸಲೇಹಾ ಜಬೀನ್, ಅಮೆರಿಕ ಸೇನೆಯಲ್ಲಿ ಮೊದಲ ಮಹಿಳಾ ಮುಸ್ಲಿಂ ಚಾಪ್ಲೇನ್ (ಆಧ್ಯಾತ್ಮಿಕ ಗುರು) ಎಂಬ ಖ್ಯಾತಿಗೆ ಪಾತ್ರರಾಗಿದ್ದಾರೆ. ಅಮೆರಿಕ ವಾಯುಪಡೆಯ ಚಾಪ್ಲೇನ್ ತರಗತಿಯನ್ನು ಆಯ್ಕೆ ಮಾಡಿಕೊಂಡು ವ್ಯಾಸಂಗ ಪೂರ್ತಿಗೊಳಿಸಿದ್ದಾರೆ. ಮುಂದಿನ ದಿನಗಳಲ್ಲಿ ತಮ್ಮ ಬಳಿ ಬರುವ ಸೈನಿಕರಿಗೆ ಸಲೇಹಾ ಜಬೀನ್ ಆಧ್ಯಾತ್ಮಿಕ ಮಾರ್ಗದರ್ಶನ ನೀಡಲಿದ್ದಾರೆ. ಅಮೆರಿಕ ವಾಯುಪಡೆಯಲ್ಲಿನ ಹಿರಿಯ ಕಿರಿಯ ಸಹೋದ್ಯೋಗಿಗಳ ಸಹಕಾರದಿಂದ ಈ ಸಾಧನೆ ಸಾಧ್ಯವಾಯಿತೆಂದು ಸಲೇಹಾ ತಿಳಿಸಿದ್ದಾರೆ. 14 ವರ್ಷಗಳ ಹಿಂದೆ ವ್ಯಾಸಂಗ ಮಾಡಲೆಂದು ಅವರು ಅಮೆರಿಕಕ್ಕೆ ಬಂದಿದ್ದರು. ಸಲೇಹಾ, ಬಿ.ಎ ಹಾಗೂ ಧರ್ಮಶಾಸ್ತ್ರ ವಿಷಯದಲ್ಲಿ ಮಾಸ್ಟರ್ಸ್ ಪದವಿಯನ್ನು ಹೊಂದಿದ್ದಾರೆ. ಕ್ರಿಶ್ಚಿಯನ್, ಹಿಂದೂ ಸೇರಿದಂತೆ ಹಲವು ಧರ್ಮಗಳ ಆಧ್ಯಾತ್ಮಿಕ ಮಾರ್ಗದರ್ಶಕರು ಅಮೆರಿಕ ಸೇನೆಯಲ್ಲಿದ್ದಾರೆ. 2011ರಲ್ಲಿ ಅಮೆರಿಕ ಸೇನೆಯ ಮೊದಲ ಮಹಿಳಾ ಹಿಂದೂ ಚಾಪ್ಲೇನ್ ಖ್ಯಾತಿಗೆ ಭಾರತೀಯ ಮೂಲದ ಪ್ರತಿಮಾ ಧರ್ಮ್ ಎಂಬವರು ಪಾತ್ರರಾಗಿದ್ದರು.

**(ವಾಟ್ಸಾಪ್ 21–2–2021)**

==========================================================

## ಮುಟ್ಟಾದ ಮಹಿಳೆ ಮಾಡಿದ ಆಹಾರ ತಿಂದ್ರೆ ಪಶುಜನ್ಮ ಪ್ರಾಪ್ತಿ!



**ಅಹಮದಾಬಾದ್:** ಮುಟ್ಟಾದ ಮಹಿಳೆ ತಯಾರಿಸಿದ ಆಹಾರವನ್ನು ಒಮ್ಮೆ ಸೇವಿಸಿದರೂ ಅಂಥವರು ಮುಂದಿನ ಜನ್ಮದಲ್ಲಿ ಪಶುವಾಗಿ ಜನಿಸುತ್ತಾರೆ. ಗಂಡನಿಗೆ ಆಹಾರ ತಯಾರಿಸುವ ಮುಟ್ಟಾದ ಮಹಿಳೆ ನಾಯಿ ಜನ್ಮ ತಾಳುತ್ತಾಳೆ. ಮುಟ್ಟಾದ ಮಹಿಳೆ ಮಾಡಿದ ಆಹಾರ ಸ್ವೀಕರಿಸಿದ ಗಂಡಸು ಎತ್ತಾಗಿ ಜನ್ಮ ತಾಳುತ್ತಾನೆ! ಮಹಿಳೆಯರ ಬಗ್ಗೆ ಇಂಥದ್ದೊಂದು ಆಕ್ಷೇಪಾರ್ಹ ಹೇಳಿಕೆ ನೀಡುವ ಮೂಲಕ ಗುಜರಾತ್‌ನ ಭುಜ್‌ನಲ್ಲಿರುವ

ಸ್ವಾಮಿ ನಾರಾಯಣ ದೇಗುಲದ ಸ್ವಾಮಿ ಕೃಷ್ಣ ಸ್ವರೂಪ್ ದಾಸ್‌ಜಿ ವಿವಾದಕ್ಕೆ ಸಿಲುಕಿದ್ದಾರೆ.

ಋತುಚಕ್ರದ ವೇಳೆ ದೇಗುಲ ಪ್ರವೇಶಿಸಿದ್ದಾರೆಯೇ ಎಂದು ಪರೀಕ್ಷಿಸಲು 68 ವಿದ್ಯಾರ್ಥಿನಿಯರ ಒಳ ಉಡುಪು ಬಿಚ್ಚಿಸಿದ್ದರಿಂದ ಉಂಟಾದ ವಿವಾದ ತಣ್ಣಗಾಗುವ ಮೊದಲೇ ಸ್ವಾಮಿ ನಾರಾಯಣ ಸಂಸ್ಥೆ ಮತ್ತೊಮ್ಮೆ ಇಂಥದ್ದೇ ಕಾರಣಕ್ಕಾಗಿ ಸುದ್ದಿಗೆ ಗ್ರಾಸವಾಗಿದೆ. ರಾತ್ರಿ ಸಭೆಗಳಲ್ಲಿ ನೀಡುವ ಪ್ರವಚನದ ವೇಳೆ ಕೃಷ್ಣ ಸ್ವರೂಪ್ ದಾಸ್‌ಜಿ ನೀಡಿದ ಈ ಹೇಳಿಕೆಗಳ ವಿಡಿಯೋ ವೈರಲ್ ಆಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಆದರೆ, ಈ ವಿಡಿಯೋ ಒಂದು ವರ್ಷ ಹಳೆಯದಾದರೂ, ಈ ಪಂಥದಲ್ಲಿ ಮಹಿಳೆಯರ ಬಗ್ಗೆ ಇರುವ ಭಾವನೆಯನ್ನು ಬಯಲು ಮಾಡಿದೆ.

"ಪುರುಷರೂ ಅಡುಗೆ ಮಾಡುವುದನ್ನು ಕಲಿಯಬೇಕು. ಇದರಿಂದ ಶಾಸ್ತ್ರಗಳಲ್ಲಿ ಹೇಳಿರುವುದನ್ನು ಯಥಾವತ್ತಾಗಿ ಪಾಲಿಸಲು ಸಹಾಯವಾಗುತ್ತದೆ. ಪ್ರತಿ ಪುರುಷನೂ ಮದುವೆಗೆ ಮುನ್ನ ಅಡುಗೆ ಕಲಿಯಬೇಕು" ಎಂದು ದಾಸ್‌ಜೀ ಹೇಳಿದ್ದಾರೆ.

"ಧರ್ಮದಲ್ಲಿರುವ ಗೌಪ್ಯ ವಿಷಯಗಳನ್ನು ಹೇಳಬಾರದು ಎಂಬುದಾಗಿ ಕೆಲ ಸಂತರು ಸಲಹೆ ನೀಡಿದ್ದಾರೆ. ಆದ್ರೆ ಅದನ್ನು ಹೇಳದೆ ಇದ್ದರೆ ಜನರಿಗೆ ಅದು ತಿಳಿಯುವುದೇ ಇಲ್ಲವಾದ್ದರಿಂದ ಹೇಳುತ್ತಿದ್ದೇನೆ." ಎಂದು ಅವರು ಸಮರ್ಥಿಸಿಕೊಂಡಿದ್ದಾರೆ.

**(ವಾಟ್ಸಾಪ್ 24-2-2021)**


"ಜಗವೆಲ್ಲಾ ಹುಟ್ಟಿರುವುದು ಮುಟ್ಟಾದ ಹೊಲದಲ್ಲಿ. ಮುಟ್ಟಬೇಡ ಎನ್ನುವಾತ ಹುಟ್ಟಿರುವುದಾದರೂ ಎಲ್ಲಿಂದ?"


'ಸರ್ವಜ್ಞ'

# ಕುರಾನ್ ಕುರಿತ ಅರ್ಜಿ ಸುಪ್ರೀಂನಿಂದ ವಜಾ

**ಹೊಸದಿಲ್ಲಿ:** ಮುಸ್ಲಿಮರ ಪವಿತ್ರ ಗ್ರಂಥ ಕುರಾನ್‌ನ ಕೆಲವು ಸಾಲುಗಳನ್ನು ತೆಗೆದುಹಾಕಬೇಕೆಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯೊಂದನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾ ಮಾಡಿದೆ. ಜತೆಗೆ, 'ಕ್ಷುಲ್ಲಕ' ಅರ್ಜಿ ಸಲ್ಲಿಸಿದ್ದಕ್ಕಾಗಿ ಅರ್ಜಿದಾರನಿಗೆ 50 ಸಾವಿರ ರೂ. ದಂಡವನ್ನೂ ವಿಧಿಸಿದೆ.

ಉತ್ತರಪ್ರದೇಶ ಶಿಯಾ ವಕ್ಸ್ ಮಂಡಳಿಯ ಮಾಜಿ ಮುಖ್ಯಸ್ಥ ಸೈಯದ್ ವಾಸಿಂ ರಿಜ್ವಿ ಅವರು ಈ ಅರ್ಜಿ ಸಲ್ಲಿಸಿದ್ದರು. ಕುರಾನ್‌ನಲ್ಲಿನ 26 ಸಾಲುಗಳು ಮೂಲ ಗ್ರಂಥಕ್ಕಿಂತ ಭಿನ್ನವಾಗಿದ್ದು, ಈ ಸಾಲುಗಳು ಇಸ್ಲಾಂ ಮೇಲೆ ನಂಬಿಕೆಯಿಡದ ವ್ಯಕ್ತಿಗಳ ವಿರುದ್ಧದ ದಾಳಿಯನ್ನು ಸಮರ್ಥಿಸಿಕೊಳ್ಳುತ್ತವೆ ಎಂದು ರಿಜ್ವಿ ಅರ್ಜಿಯಲ್ಲಿ ಉಲ್ಲೇಖಿಸಿದ್ದರು. ಜತೆಗೆ, ಈ ಸಾಲುಗಳು ಪ್ರತ್ಯೇಕತಾವಾದ ಮತ್ತು ಭಯೋತ್ಪಾದನೆಗೆ ಉತ್ತೇಜನ ನೀಡುತ್ತಿದ್ದು, ಅವುಗಳನ್ನು 'ಅಸಾಂವಿಧಾನಿಕ, ಪರಿಣಾಮಕಾರಿಯಲ್ಲದ್ದು' ಎಂದು ಘೋಷಿಸಬೇಕು ಎಂದೂ ಕೋರಿದ್ದರು. ಆದರೆ ಇದೊಂದು ತೀರಾ ಕ್ಷುಲ್ಲಕ ಅರ್ಜಿಯಾಗಿದ್ದು, ಇದನ್ನು ಪರಿಗಣಿಸಲು ಸಾಧ್ಯವೇ ಇಲ್ಲ ಎಂದು ಹೇಳಿ ಸುಪ್ರೀಂ ಕೋರ್ಟ್ ಅರ್ಜಿಯನ್ನು ವಜಾ ಮಾಡಿದೆ. **(ಉದಯವಾಣಿ 13-4-2021)**




"ಹಿಂದುಗಳೇ, ನೀವು ಬ್ರಿಟಿಷರ ವಿರುದ್ಧ ಹೋರಾಡಿ ನಿಮ್ಮ ಶಕ್ತಿಯನ್ನು ವ್ಯರ್ಥಮಾಡಬೇಡಿರಿ. ನಮ್ಮ ಆಂತರಿಕ ಶತ್ರುಗಳಾದ ಮುಸ್ಲಿಮರು, ಕ್ರೈಸ್ತರು ಮತ್ತು ಕಮ್ಯೂನಿಷ್ಟರ ವಿರುದ್ಧ ಹೋರಾಡಲು ನಿಮ್ಮ ಶಕ್ತಿಯನ್ನು ಉಳಿಸಿಕೊಳ್ಳಿರಿ." ಎಂ.ಎಸ್. ಗೋಲ್ವಾಲ್ಕರ್

**(ವಾಟ್ಸಾಪ್ 24-2-2021)**

# ಕೊಲೆಸ್ಟರಾಲ್ ಎಂದರೇನು?

* ಡಾ. ಸಿ.ಟಿ. ಕೇಶವಮೂರ್ತಿ

**ಕೊಲೆಸ್ಟರಾಲ್ ಎಂದರೆ ಭಯ ಭೀತರಾಗಬೇಕಾಗಿಲ್ಲ, ದೇಹವೇ ಅದನ್ನು ತಯಾರಿಸುತ್ತದೆ ಎಂದ ಮೇಲೆ ಅದು ಉಪಯುಕ್ತವಾದ ವಸ್ತು ಎಂಬುದರಲ್ಲಿ ಸಂದೇಹವೇ ಇಲ್ಲ.**

ಕೊಲೆಸ್ಟರಾಲ್ ಎಂಬುದು ರಕ್ತದಲ್ಲಿ ಸೇರಿಕೊಂಡಿರುವ ಒಂದು ವಿಧದ ಕೊಬ್ಬು. ದೇಹವೇ ತನ್ನ ಲಿವರ್‌ನಲ್ಲಿ ತಯಾರಿಸಿಕೊಳ್ಳುವ ಕೊಲೆಸ್ಟರಾಲ್‌ನೊಡನೆ ನಾವು ಸೇವಿಸುವ ಆಹಾರದಲ್ಲಿರುವ ಕೊಲೆಸ್ಟರಾಲ್ ಸೇರಿಕೊಂಡು ರಕ್ತದಲ್ಲಿ ಸಂಗ್ರಹಗೊಳ್ಳುತ್ತದೆ. ಅದೊಂದು ಮೃದುವಾದ ಜಿಗುಟಾದ ವಸ್ತು.

ರಾಸಾಯನಿಕ ರಚನೆಯಲ್ಲಿ ಅದು 27 ಕಾರ್ಬನ್ ಅಣುಗಳನ್ನು ಒಂದೇ ಸಾಲಿನಲ್ಲಿ ಹೊಂದಿದೆ. ಪಿತ್ತಜನಕಾಂಗವು ಕೊಲೆಸ್ಟರಾಲ್ ಅನ್ನು ತಯಾರಿಸುವ ಶಕ್ತಿಯನ್ನು ಪಡೆದಿದೆ.

* ಜೀವಕೋಶಗಳ ಹೊರಗೋಡೆಯ ರಚನೆಗೆ,
* ನರತಂತು ಹೊರಕವಚದ ರಚನೆಗೆ,
* ಮಿದುಳಿನ ನರಕಣಗಳ ಹೊದಿಕೆಯ ರಚನೆಗೆ– ಕೊಲೆಸ್ಟರಾಲ್ ಬೇಕೇಬೇಕು.

ಪ್ರತೀ 100 ಮಿಲಿಲೀಟರ್ ರಕ್ತದಲ್ಲಿ 130ರಿಂದ 200 ಮಿಲಿಗ್ರಾಮ್‌ನಷ್ಟು ಕೊಲೆಸ್ಟರಾಲ್ ಇದ್ದರೆ ಅದು ಸಾಮಾನ್ಯ ಮಟ್ಟ ಎನ್ನಿಸಿಕೊಳ್ಳುತ್ತದೆ. 160 ಮಿಲಿಗ್ರಾಮ್ ಮಟ್ಟದಲ್ಲಿ ಅದನ್ನು ಕಾಯ್ದುಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಉತ್ತಮವಾದದ್ದು.

ದೇಹವೇ ತನಗೆ ಬೇಕಾದಷ್ಟು, ಸಾಕಾಗುವಷ್ಟು ಕೊಲೆಸ್ಟರಾಲ್ ಅನ್ನು ಲಿವರ್‌ನಲ್ಲಿ (ಎಣ್ಣೆ ಮೂಲಗಳಿಂದ) ತಯಾರಿಸಿಕೊಳ್ಳುವುದರಿಂದ ಆಹಾರದ ಮೂಲಕ ಪಡೆಯುವ ಭಾಗವೆಲ್ಲ ಹೆಚ್ಚುವರಿಯಾದದ್ದೇ; ಆದ್ದರಿಂದಲೇ ಅದು ಹೆಚ್ಚು 'ವರಿ' ಉಂಟು ಮಾಡುತ್ತದೆ. ಅದರ ಸೇವನೆಯನ್ನು ದಿನಕ್ಕೆ ಎಂಟರಿಂದ 10 ಮಿಲಿಗ್ರಾಮ್ ಮಟ್ಟದಲ್ಲಿ ನಿಯಂತ್ರಿಸಿಕೊಳ್ಳಬೇಕು.

**ಹೃದಯದ ಬಗ್ಗೆ ಅಚ್ಚರಿ ಹುಟ್ಟಿಸುವ ಮಾಹಿತಿಗಳು**

**ಮಾನವ ಹೃದಯವು ಪ್ರತಿವರ್ಷ 35 ದಶಲಕ್ಷ ಬಾರಿ ಮಿಡಿಯುತ್ತದೆ. ಅಂದರೆ 3.5 ಕೋಟಿ ಸಲ.**

* **75 ವರ್ಷಗಳ ಜೀವಮಾನದಲ್ಲಿ ಒಂದು ಕೋಟಿ ಬ್ಯಾರೆಲ್‌ಗಳಷ್ಟು ರಕ್ತವನ್ನು ತಳ್ಳುತ್ತದೆ.**
* **ಮಾನವ ಹೃದಯದ ತೂಕವು ಅರ್ಧ ಕೆ.ಜಿ.ಗಿಂತ ಕಡಿಮೆ.**
* **ಅದು ರಕ್ತವನ್ನು 30 ಅಡಿಗಳಷ್ಟು ದೂರ ಚಿಮ್ಮುವಷ್ಟು ಒತ್ತಡವನ್ನು ಉಂಟುಮಾಡುತ್ತದೆ.**
* **ಹೆಚ್ಚಿನ ಹೃದಯಾಘಾತಗಳು ಸಂಭವಿಸುವುದು ಬೆಳಗ್ಗಿನ ಜಾವದಲ್ಲೇ – ಒಂಬತ್ತು ಗಂಟೆಯ ಒಳಗೆ.**

ಕೊಲೆಸ್ಟರಾಲ್‌ನಿಂದ ಸಮೃದ್ಧವಾಗಿರುವ ಆಹಾರವನ್ನು ಸೇವಿಸುವ ಜನರಲ್ಲಿ ಕೊಲೆಸ್ಟರಾಲ್ ಮಟ್ಟವು ಶೇ. 250 ಮಿಲಿಗ್ರಾಮನ್ನೂ ಮೀರುವುದುಂಟು. ಮೊಟ್ಟೆ, ವಿವಿಧ ಪ್ರಾಣಿಗಳ ಮಾಂಸ, ಹಾಲು ಮತ್ತು ಅದರ ಉತ್ಪನ್ನಗಳಾದ ಕೆನೆ, ಬೆಣ್ಣೆ, ತುಪ್ಪ, ಶ್ರೀಖಂಡ, ಕೆನೆಮೊಸರು, ಐಸ್ ಕ್ರೀಮ್ ಮತ್ತು ಚಾಕೊಲೇಟುಗಳಲ್ಲು ಕೊಲೆಸ್ಟರಾಲ್ ತುಂಬಿದೆ.

ಕೊಲೆಸ್ಟರಾಲ್ ಜಿಡ್ಡಿನ ರೂಪದಲ್ಲಿರುವುದರಿಂದ ರಕ್ತದಲ್ಲಿ ಬೆರೆತು ಹೊಂದಿಕೊಂಡು ಹೋಗಲಾರದು. ಹಾಗಾಗಲು ಅದು ಪ್ರೊಟೀನ್‌ನೊಡನೆ ಬೆರೆತು ಲೈಪೋ–ಪ್ರೊಟೀನ್ ಆಗಬೇಕಾಗುತ್ತದೆ.

ಕಡಿಮೆ ಸಾಂದ್ರತೆಯ ಪ್ರೊಟೀನ್‌ನೊಡನೆ ಬೆರೆತಾಗ ಅದು ಲೋ– ಡೆನ್ಸಿಟ್ ಕೊಲೆಸ್ಟರಾಲ್ – ಎಲ್‌ಡಿಎಲ್ ಆಗುತ್ತದೆ. ಎಲ್‌ಡಿಎಲ್ ಹೃದಯಕ್ಕೆ ಹಾನಿಯನ್ನು ಉಂಟುಮಾಡುತ್ತದೆ. ಅದು ರಕ್ತನಾಳದ ಒಳಮೈಯಲ್ಲಿ ಸುಲಭವಾಗಿ ನುಸುಳಿ, ಶೇಖರಗೊಳ್ಳುತ್ತದೆ. ರಕ್ತದ ಹರಿವಿಗೆ ಭಾಗಶಃ ತೊಂದರೆಯೊಡ್ಡುತ್ತದೆ. ರಕ್ತ ಹೆಪ್ಪುಗಟ್ಟುವಂತೆ ಮಾಡಿ ಅಡಚಣೆ ಉಂಟುಮಾಡುತ್ತದೆ. ಹಾಗಾಗಿ ಅದು ಕೆಟ್ಟ ಕೊಲೆಸ್ಟರಾಲ್.

ಹೆಚ್ಚಿನ ಸಾಂದ್ರತೆಯ ಪ್ರೊಟೀನ್‌ನೊಡನೆ ಬೆರೆತಾಗ ಆದು ಹೈ–ಡೆನ್ಸಿಟಿ ಕೊಲೆಸ್ಟರಾಲ್ (ಲೈಪೋಪ್ರೊಟೀನು) ಎಚ್‌ಡಿಎಲ್ ಆಗುತ್ತದೆ.

ಎಚ್‌ಡಿಎಲ್ ಕೊಲೆಸ್ಟರಾಲ್ ಒಳ್ಳೆಯ ಕೊಲೆಸ್ಟರಾಲ್ ಎನ್ನಿಸಿಕೊಂಡಿದೆ. ಅದು ಧಮನಿಗಳಲ್ಲಿ ಎಲ್‌ಡಿಎಲ್, ಕ್ಯಾಲ್ಸಿಯಮ್, ಕೊಬ್ಬು ಸಂಗ್ರಹಗೊಳ್ಳದಂತೆ ತಡೆಯುತ್ತದೆ. ರಕ್ತನಾಳಗಳ ಗೋಡೆಯಿಂದ ಎಲ್‌ಡಿಎಲ್ ಕೊಲೆಸ್ಟರಾಲ್ ಅನ್ನು ಹೀರಿ ತೆಗೆದು ರಕ್ತಕ್ಕೆ ಸೇರಿಸುತ್ತದೆ. ಅದು ಲಿವರ್‌ನಲ್ಲಿ ಬದಲಾವಣೆಗೊಂಡು ಅನಂತರ ಮಲದಲ್ಲಿ ವಿಸರ್ಜನೆಗೊಳ್ಳುತ್ತದೆ. ಹಾಗಾಗಿ ಇದು ಒಳ್ಳೆಯ ಕೊಲೆಸ್ಟರಾಲ್.

ಇದರ ಮಟ್ಟ ರಕ್ತದಲ್ಲಿ ಶೇ. 40 ಮಿಲಿಗ್ರಾಮ್ ಅಥವಾ ಇನ್ನೂ ಹೆಚ್ಚು ಇದ್ದರೆ ದೇಹಾರೋಗ್ಯಕ್ಕೆ ಒಳ್ಳೆಯದು. ಆದರೆ ಭಾರತೀಯರಲ್ಲಿ 40ಕ್ಕಿಂತ ಕಡಿಮೆಯೇ ಇರುವುದು ಕಂಡುಬಂದಿದೆ; ಹಾಗಾಗಿ ಅವರಲ್ಲಿ ಹೃದಯಾಘಾತ ಸಂಭವ ಹೆಚ್ಚು. (**ತರಂಗ 28 ಜನವರಿ 2021**).

■

ಕವನ

# ಪ್ರಾರ್ಥನೆ

* ಕೆ.ಎಂ. ಉಮರ್

ಮುಗಿದು ಹೋಯಿತು ಜೀವನದ ಬಹುದೊಡ್ಡ ಭಾಗ
ಬಾಕಿ ಉಳಿದಿದೆ ಕುಟುಂಬಸ್ತರಿಗೆ ಉಪದೇಶ ನೀಡಲು ಅತಿ ಚಿಕ್ಕ ಭಾಗ.
ನಡೆದು ಬಂದ ಹಾದಿಯೆಲ್ಲ ಶುದ್ಧವಾಗಿಯೆ ಇದೆ ಎಂದು
ಎದೆ ತಟ್ಟಿ ಹೇಳುವ ಧೈರ್ಯ ಎನಗಿಲ್ಲ.
ಆದರೂ ಹೆಜ್ಜೆ ಹೆಜ್ಜೆಗೂ ವಹಿಸಿದ ಎಚ್ಚರಿಕೆ ನನಗೆ
ಮನಃಶಾಂತಿ ಕೊಡುತ್ತಿದೆ ಹೋಗಲು ಅಲ್ಲಾಹನೆಡೆಗೆ.
ಮುತ್ತು ಮುಸ್ತಫಾ ನಬಿ ನಾಯಕರು ತೋರಿದ ದೀನಿಸ್ಲಾಮಿನಲಿ
ಮನಃಶಾಂತಿಯೊಂದಿಗೆ ತೊಡಗಿದೆವು ನಾವು ಪಾವನ ದೀನಿಸ್ಲಾಮಿನ ಸೇವೆಯಲಿ.
ಜೀವನದುದ್ದಕ್ಕೂ ಒಳಿತನ್ನೇ ಮಾಡಿದರೂ
ಅವನಿಷ್ಟ ಕಳಿಸುವುದು ಸ್ವರ್ಗಕ್ಕೋ ನರಕಕ್ಕೋ.
ಕಾಡಿ ಬೇಡುವ ಕರ್ಮ ಮಾತ್ರ ನಮ್ಮದಾಗಿದೆ
ಕೊಡುವುದೋ ಬಿಡುವುದೋ ಧರ್ಮ ಅಲ್ಲಾಹನದಾಗಿದೆ.
ಸ್ವರ್ಗ ನರಕಗಳೇನೊಂದೂ ಬೇಡೆನಗೆ
ನಿನ್ನ ಸಾಮೀಪ್ಯ ಸಾಕೆನಗೆ ಸರ್ವಾಧಿನಾಥ.
ಒಳಿತು ಕೆಡುಕುಗಳೇನನ್ನು ಮಾಡಿದರೂ
ಕರೆ ಬಂದ ಕ್ಷಣದಲ್ಲಿ ಹೋಗಲೇಬೇಕು ಅಲ್ಲಾಹನೆಡೆಗೆ.
ಪರಿಣಾಮ ತಿಳಿಯುವುದು ಮಹಶರ ದಿನದಲ್ಲಿ
ಕೊರಳಿಗೆ ಕಟ್ಟಿದ ಪುಸ್ತಕದ ಒಳಗೆ.
ಕರಿ ಮುಗಿಲ ತೊಟ್ಟಿಲಲಿ ಘೋರಾಂಧ ತುಂಬಿತ್ತು
ಕರುಣೆಯ ತೋರಿದನಲ್ಲಾಹು ತನ್ನ ಮಹ್‌ದಿ ಮಸೀಹರ ಸಂಗದಲ್ಲಿ ನಮಗೆ.
ಕಾಪಾಡು ನಾಥ ನೀ ಮಹ್‌ದಿಯ ಶಿಷ್ಯರನು
ಸದಾಕಾಲ ನಿನ್ನ ಕಾರುಣ್ಯ ತೋರಿಸಿ.
ಕಾಪಾಡಿ ಮುನ್ನಡೆಸು ಕಾಯಕವ ನೀಡುತ್ತಾ
ಕಾರುಣ್ಯದ ಅಧಿಪತಿ ಯಾ ರಬ್ಬುಲ್ ಆಲಮೀನ್.

■

## ಪ್ರಿನ್ಸ್ ಫಿಲಿಪ್ ನಿಧನದ ಬಗ್ಗೆ ಅಹ್ಮದಿಯಾ ಸರ್ವೋನ್ನತ ನೇತಾರರ ಹೇಳಿಕೆ


**ಹಿಸ್ ರಾಯಲ್ ಹೈನೆಸ್, ಪ್ರಿನ್ಸ್ ಫಿಲಿಪ್, ಡ್ಯೂಕ್ ಆಫ್ ಎಡಿನ್‌ಬರ್ಗ್ ಅವರ ನಿಧನದ ಬಗ್ಗೆ ತಿಳಿದು ವಿಷಾದವಾಯಿತು. "ನಾವು ನಿಶ್ಚಯವಾಗಿಯೂ ಅಲ್ಲಾಹನಿಗಾಗಿ ಇರುವವರು ಹಾಗೂ ನಿಶ್ಚಯವಾಗಿಯೂ ಅವನೆಡೆಗೆಯೇ ಮರಳುವವರಾಗಿದ್ದೇವೆ" (ಪವಿತ್ರ ಖುರ್‌ಆನ್ 2 : 157).**


**ಜಾಗತಿಕ ಅಹ್ಮದಿಯಾ ಮುಸ್ಲಿಂ ಸಂಘಟನೆಯ ವತಿಯಿಂದ ನಾನು ನನ್ನ ಹೃತ್ಪೂರ್ವಕ ಸಂತಾಪವನ್ನೂ ಅನುಕಂಪವನ್ನೂ ಹರ್ ಮ್ಯಾಜೆಸ್ಟಿ ದಿ ಕ್ವೀನ್, ರಾಯಲ್ ಕುಟುಂಬದ ಎಲ್ಲ ಸದಸ್ಯರಿಗೆ ಮತ್ತು ದೇಶದ ಪ್ರಜೆಗಳಿಗೆ ಸಲ್ಲಿಸುತ್ತೇನೆ.**


**ಸರ್ವಶಕ್ತನಾದ ದೇವನು ಹರ್ ಮ್ಯಾಜೆಸ್ಟಿ ದಿ ಕ್ವೀನ್ ಅವರಿಗೂ ರಾಯಲ್ ಕುಟುಂಬದ ಎಲ್ಲ ಸದಸ್ಯರಿಗೂ ಈ ಕಷ್ಟದ ಸಮಯದಲ್ಲಿ ದುಃಖಶಮನವನ್ನೂ ಸಮಾಧಾನವನ್ನೂ ಕರುಣಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ. ರಾಣಿಯವರ ಆಯುರಾರೋಗ್ಯಕ್ಕೂ ದೀರ್ಘಾಯುಸ್ಸಿಗೂ ನಾನು ಪ್ರಾರ್ಥಿಸುತ್ತೇನೆ.**

**9–4–2021**

ಮಿರ್ಝಾ ಮಸ್ರೂರ್ ಅಹ್ಮದ್
ಖಲೀಫತುಲ್ ಮಸೀಹ್ V
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಸರ್ವೋನ್ನತ ನೇತಾರ.















**NEW PUBLICATIONS**

**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**

Registered with the Registrar of Newspapers for India No. R.N. 27354/75
**Yugarashmi** Kannada Quarterly, **April - 2021.** Price : **Rs. 15/-**

# Ahmadiyya Muslim Community

Apps for mobile devises

Download free apps developed by Ahmadiyya Muslim Community for your iphone, ipode, and Android

**Quran**
Read the Holy Quran in easy Yassarnal Quran Font


**Conditions of Bai'at**
A pocket reference of Shara't-e-Bai'at in 7 languages

**Sermons**
Huzoor's Friday Sermons In 15 languages

**MTA**
Watch MTA Live, view Schedule and much more

**Ahmadiyya News**
Stay up to date with the Latest jama'at news

View these apps at
alislam.org/apps
or scan the QR code below




Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore